ಓಂ ನಮಃ ಸುಖಾಯ ಓಂ ನಮೋ ನಾನವೆ

# ಪೂಜ್ಯ ಶ್ರೀ ಸದ್ಗುರು ಆತ್ಮಾನಂದ ಸ್ವಾಮಿಗಳ ಪ್ರವಚನ ಸಂಗ್ರಹ



ಗ್ರಂಥ ಪೋಷಕರು

**ಶ್ರೀ ಸಂಪತ್ತುಮಾರ ರುದ್ರಪ್ಪ ದೇಸಾಯಿ**

ನಿವೃತ್ತ ಕಮಾಂಡರ, ಭಾರತೀಯ ನೌಕಾಪಡೆ,

ಸಾ. ಹಂಗರಕಿ

ಸಂಗ್ರಹಕಾರರು

**ಪ್ರೊ. ಎಸ್. ಎಸ್. ಕುರುಬರ** M.Sc.

ನಿವೃತ್ತ ಪ್ರಾಧ್ಯಾಪಕರು

ಜೆ.ಎಸ್.ಎಸ್. ಮಹಾವಿದ್ಯಾಲಯ, ವಿದ್ಯಾಗಿರಿ, ಧಾರವಾಡ

**ಶ್ರೀ ಆತ್ಮಾನಂದ ಅಧ್ಯಾತ್ಮ ಪ್ರಕಾಶನ, ಹಂಗರಕಿ**

ಪೋ. ಗರಗ, ತಾ.ಜಿ. ಧಾರವಾಡ

ಓಂ ನಮಃ ಸುಖಾಯ

ಓಂ ನಮೋ ನಾನವೆ



# ಪೂಜ್ಯ ಶ್ರೀ ಸದ್ಗುರು ಆತ್ಮಾನಂದ ಸ್ವಾಮಿಗಳ ಪ್ರವಚನ ಸಂಗ್ರಹ


ಗ್ರಂಥ ಪೋಷಕರು :

**ಶ್ರೀ ಸಂಪತ್ಕುಮಾರ ರುದ್ರಪ್ಪ ದೇಸಾಯಿ**

ನಿವೃತ್ತ ಕಮಾಂಡರ, ಭಾರತೀಯ ನೌಕಾಪಡೆ,

ಸಾ. ಹಂಗರಕಿ

ಸಂಗ್ರಹಕಾರರು :

**ಪ್ರೊ. ಎಸ್. ಎಸ್. ಕುರಬರ** M.Sc.

ನಿವೃತ್ತ ಪ್ರಾಧ್ಯಾಪಕರು

ಜೆ.ಎಸ್.ಎಸ್. ಮಹಾವಿದ್ಯಾಲಯ, ವಿದ್ಯಾಗಿರಿ, ಧಾರವಾಡ



**ಶ್ರೀ ಆತ್ಮಾನಂದ ಅಧ್ಯಾತ್ಮ ಪ್ರಕಾಶನ,**

**ಹಂಗರಕಿ**

ಪೋ. ಗರಗ, ತಾ.ಜಿ. ಧಾರವಾಡ

ಪ್ರಕಾಶಕರು :
ಶ್ರೀ ಆತ್ಮಾನಂದ ಅಧ್ಯಾತ್ಮ ಪ್ರಕಾಶನ,
ಹಂಗರಕಿ
ಪೋ. ಗರಗ, ತಾ.ಜಿ. ಧಾರವಾಡ

ಪ್ರಥಮ ಮುದ್ರಣ 2006

ಒಂದು ಸಾವಿರ ಪ್ರತಿಗಳು

ಎಲ್ಲ ಹಕ್ಕುಗಳು ಸಂಗ್ರಹಕಾರರು ಮತ್ತು ಪ್ರಕಾಶಕರಿಂದ ಕಾಯ್ದಿರಿಸಲ್ಪಟ್ಟಿವೆ.

ಬೆಲೆ : ರೂ. 15-00

ಮುದ್ರಕರು : ಓಂ ಆಫಸೆಟ್ ಪ್ರಿಂಟರ್ಸ, ಕಿಲ್ಲೆ, ಧಾರವಾಡ

ಓಂ ನಮಃ ಸುಖಾಯ

ಓಂ ನಮೋ ನಾನವೆ



**ಪೂಜ್ಯ ಶ್ರೀ ಗುರುದೇವ ಆತ್ಮಾನಂದ ಮಹಾಸ್ವಾಮಿಗಳು**

M.A.

ಮನಿಹಾಳ – ಸುರೇಬಾನ

ತಾ: ರಾಮದುರ್ಗ ಜಿ: ಬೆಳಗಾವಿ



ದಿ. ಶ್ರೀಮಂತ ಶ್ರೀ ರುದ್ರಪ್ಪ ಕರಬಸಪ್ಪ ದೇಸಾಯಿ



ದಿ. ಶ್ರೀಮತಿ ಗಂಗಮ್ಮನವರು ರುದ್ರಪ್ಪ ದೇಸಾಯಿ

ಸಾ. ಹಂಗರಕಿ (ತಾ. ಮತ್ತು ಜಿ. ಧಾರವಾಡ)

ಇವರ ಸ್ಮರಣಾರ್ಥ ಈ ಗ್ರಂಥವು ಪ್ರಕಟಿಸಲ್ಪಟ್ಟಿದೆ

# ಪೂಜ್ಯ ಶ್ರೀ ಸದ್ಗುರು ಆತ್ಮಾನಂದರ ಸಂಕ್ಷಿಪ್ತ ಪರಿಚಯ

ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು 1904ರಲ್ಲಿ ಪರಮ ತಪಸ್ವಿಗಳೂ, ಅವತಾರಿ ಪುರುಷರೂ ಆದ ಪೂಜ್ಯ ಶ್ರೀ ಸದ್ಗುರು ಶಿವಾನಂದರ (ನಾಗನೂರ-ಗದಗ) ಏಕಮೇವ ಮಾನಸ ಮತ್ತು ಔರಸ ಪುತ್ರರಾಗಿ ಜನಿಸಿದರು. ಬಾಲ್ಯದಿಂದಲೇ ಅವರಿಗೆ ಅಧ್ಯಾತ್ಮ ವಿಚಾರದ ಕಡೆಗೆ ಒಲವು ಇತ್ತು. ಪೂಜ್ಯ ಶ್ರೀ ಸದ್ಗುರು ಶಿವಾನಂದರು ಅಧ್ಯಾತ್ಮ ಬೋಧನೆಗಾಗಿಯೇ ತಮ್ಮ ಜೀವನವನ್ನು ಮುಡುಪಿಟ್ಟರು. ಆತ್ಮಾನಂದರು ತಮ್ಮ ತಂದೆಯವರ ವಿಶೇಷ ಪೋಷಣೆಯಲ್ಲಿಯೇ ಬೆಳೆದರು. ಅವರು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಪೂಜ್ಯ ಶ್ರೀ ಸದ್ಗುರು ಶಿವಾನಂದರು ತುರ್ಯಸ್ಥಿತಿಯನ್ನು ಹೊಂದುತ್ತಿದ್ದರು. ಅದು ಎರಡು-ಮೂರು ದಿನಗಳವರೆಗೆ ಇರುತ್ತಿತ್ತು. ಆಗ ಆತ್ಮಾನಂದರು ಪೂಜ್ಯ ಶ್ರೀ ಸದ್ಗುರು ಶಿವಾನಂದರ ತುರ್ಯಸ್ಥಿತಿಯನ್ನು ಲಕ್ಷ್ಯಪೂರ್ವಕವಾಗಿ ನಿರೀಕ್ಷಿಸಿ ಅದರ ಗೂಡಾರ್ಥವನ್ನು ತಿಳಿದುಕೊಂಡರು. ಅವರು 1932ರಲ್ಲಿ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿ ಎಂಬ ವಿಷಯವನ್ನು ತೆಗೆದುಕೊಂಡು ಬನಾರಸ ಹಿಂದೂ ವಿಶ್ವವಿದ್ಯಾಲಯದ ಎಂ.ಎ. ಪರೀಕ್ಷೆಯಲ್ಲಿ ದ್ವಿತಿಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು. ನಂತರ ತಮ್ಮ ತಂದೆಯವರ ವಿಶೇಷ ಮಾರ್ಗದರ್ಶನದಿಂದ ಮತ್ತು ತಮ್ಮ ಹಿಂದಿನ ಜನ್ಮದ ಆತ್ಮಾಭ್ಯಾಸದ ತೀವ್ರ ಸಂಸ್ಕಾರದಿಂದ ತುರ್ಯ ಸ್ಥಿತಿಯನ್ನು ಹೊಂದಿಯೇ ತೀರಬೇಕೆಂದು ನಿಶ್ಚಯಿಸಿದರು. ಎಲ್ಲ ಅಧಿಕಾರ, ಸಂಪತ್ತು, ಐಷಾರಾಮದ ಜೀವನ ಮತ್ತು ಲೋಕ ಪ್ರಸಿದ್ಧಿಯನ್ನು ನಿರ್ಲಕ್ಷಿಸಿದರು. ಆಗ ಅವರು ಕೆಲವು ಕಾಲದವರೆಗೆ ಸಂಚಾರವನ್ನು ಕೈಕೊಂಡರು. ಆಗ ಅವರು ಸ್ವರೂಪಾವಸ್ಥಿತಿಯನ್ನು ಹೊಂದುವ ಸತತ ಅಭ್ಯಾಸದಲ್ಲಿ ತೊಡಗಿ ಅಲ್ಪಕಾಲದಲ್ಲಿಯೇ ಆತ್ಮಜ್ಞಾನಿಗಳಾದರು. ಅವರು ಪ್ರಾರಬ್ಧಕ್ಕನುಸಾರವಾಗಿ 1936ರಲ್ಲಿ ದೇವಕಿ ಎಂಬ ನೀತಿ ಸಂಪನ್ನಳಾದ ಸ್ತ್ರೀಯನ್ನು ಮದುವೆಯಾದರು. ದೇವಕಿಯವರು ತಮ್ಮ ಪತಿಯವರಿಗೆ ಅವರಿಚ್ಛೆಯಂತೆ ಎಲ್ಲ ರೀತಿಯಿಂದಲೂ ಸಹಕರಿಸಿದರು. ಅವರಿಗೆ ಇಬ್ಬರು ಗಂಡುಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು ಇದ್ದರು. ಅವರ ಎರಡನೇ ಮಗನು ಕಾಲೇಜ ವಿದ್ಯಾರ್ಥಿಯಾಗಿದ್ದಾಗ ವಿಷಮ ಜ್ವರದ ಭಯಂಕರ ಬಾಧೆಯಿಂದ ದೇಹ ಬಿಟ್ಟನು. ಈಗ ಅವರ ಒಬ್ಬ ಮಗ ಮತ್ತು ಇಬ್ಬರು ಹೆಣ್ಣುಮಕ್ಕಳು ನೀತಿ ನಿಷ್ಠೆಯಿಂದ ತಮ್ಮ ಗೃಹಸ್ಥ ಜೀವನವನ್ನು ಸಾಗಿಸುತ್ತಿದ್ದಾರೆ.

ಪೂಜ್ಯ ಶ್ರೀ ಸದ್ಗುರು ಶಿವಾನಂದರು ಮತ್ತು ಅವರ ಪುತ್ರರಾದ ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು ವ್ಯಾಸ, ಶುಕದೇವ ಮುನಿಗಳಂತೆ ಇದ್ದರು. ಪ್ರವಚನ ಹೇಳುವ ಕಾಲಕ್ಕೆ ಅನೇಕ ಸಲ ತುರ್ಯಸ್ಥಿತಿಯನ್ನು ಹೊಂದಿದ ಧೀರರಿವರು. ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು ತಾವು ಪಡೆದ ಪರಮೋನ್ನತ ಶಾಂತಿಯನ್ನು ಇನ್ನುಳಿದ ಜೀವಿಗಳು ಪಡೆದು ಸುಖಿಯಾಗಲಿ ಎಂದು ವೈಯಾಕರಣಿಯ ಸ್ಥಿತಿಯಿಂದ ಅವರಿವರೆನ್ನದೆ ಭುವನದ ಮಾನವರೆಲ್ಲರಿಗೂ 45 ವರ್ಷಗಳವರೆಗೆ ಅಧ್ಯಾತ್ಮಜ್ಞಾನವನ್ನು ಬೋಧಿಸಿದರು. ಮಧ್ಯಂತರದಲ್ಲಿ ಪ್ರಾರಬ್ಧಕ್ಕನುಸಾರವಾಗಿ ಕೆಲವು ಕಾಲ ಮನಿಹಾಳ ಗ್ರಾಮದ (ತಾ. ರಾಮದುರ್ಗ) ಪಾಟೀಲರಾಗಿ ಮತ್ತು ರಾಮದುರ್ಗ

ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದರು.

ಎಲ್ಲ ಜೀವಿಗಳಿಗೆ ಬೇಕಾದದ್ದು ಶಾಶ್ವತ ಸುಖವು. ಅದು ರೂಪರಹಿತವಿದೆ. ಆದರೆ ಅಜ್ಞಾನಿ ಜೀವಿಗಳು ರೂಪಗಳಲ್ಲಿಯೇ ಸುಖವನ್ನು ಹುಡುಕುತ್ತಾರೆ ಮತ್ತು ಕಲ್ಪಿತ ರೂಪಗಳಿಗಾಗಿ ಜಗಳಾಡುತ್ತಾರೆ. ಆದ್ದರಿಂದ ಜೀವಿಗಳು ವ್ಯರ್ಥವಾಗಿ ರೂಪಗಳಲ್ಲಿ ಸುಖವನ್ನು ಹುಡುಕದೆ ಮತ್ತು ಕಲ್ಪಿತ ರೂಪಗಳಿಗಾಗಿ (ಶಿವ, ಪಾರ್ವತಿ, ವಿಷ್ಣು, ಲಕ್ಷ್ಮಿ ಮುಂತಾದವುಗಳು) ಜಗಳಾಡದೆ ರೂಪರಹಿತ ಸುಖವನ್ನು ನೆನಪಿಗೆ ತಂದುಕೊಳ್ಳುವದಕ್ಕಾಗಿ ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು ಓಂ ನಮಃ ಸುಖಾಯ ಎಂಬ ಮಂತ್ರವನ್ನು ಹೇಳಿರುವರು.

ಅದರಂತೆ ಅಜ್ಞಾನಿ ಜೀವರು ಸುಖವನ್ನು ತಮ್ಮ ನಿಜ ಸ್ವರೂಪದ ಹೊರಗೆ ಹುಡುಕಿ ಬಳಲುತ್ತಾರೆ. ಹೀಗೆ ಅವರು ವ್ಯರ್ಥ ಬಳಲದೆ, ತಮ್ಮ ನಿಜಸ್ವರೂಪವೇ ಸುಖವೆಂದು ತಿಳಿದು, ಕೇವಲ ತಮ್ಮ ಸುಖಮಯ ನಿಜಸ್ವರೂಪವನ್ನೇ ನೆನಪಿಗೆ ತಂದುಕೊಳ್ಳಲು ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು ಓಂ ನಮೋ ನಾನವೆ ಎಂಬ ಮಂತ್ರವನ್ನು ಹೇಳಿರುವರು.

ಜೀವಿಗಳಿಗೆ ಆನಂದದ ಗುರುತು ಭಾವ ಉದಯವಾದಾಗಿನಿಂದಲೇ ಇದೆ ಅದೇ ಪ್ರಥಮಾನುಭೂತಿ, ಅದನ್ನು ಮರೆತಂತಾಗಿದೆ. ಪ್ರಥಮಾನುಭೂತಿಯನ್ನು ನೆನಪಿಸಿಕೊಂಡು ಆನಂದನಿಷ್ಠರಾಗಲು ಘಂಟಾಘೋಷವಾಗಿ ಶ್ರೀಗಳವರು ತಿಳಿಸಿದರು.

ಬ್ರಹ್ಮಚರ್ಯಾಶ್ರಮ (ಬ್ರಹ್ಮವಿದ್ಯೆಯ ಅಭ್ಯಾಸ)ಗೃಹಸ್ಥಾಶ್ರಮ (ವಿಷಯಭೋಗದ ವ್ಯವಹಾರವು ನಡೆದಾಗಲೆಲ್ಲ ಅದರಲ್ಲಿ ಸುಖವಿದೆಯೋ ಅಥವಾ ದುಃಖವಿದೆಯೋ ಎಂಬುದನ್ನು ವಿಚಾರ ಮಾಡುವದು) ವಾನಪ್ರಸ್ಥಾಶ್ರಮ (ಮನೆತನದ ವ್ಯವಹಾರವನ್ನು ಕೈ ಬಿಟ್ಟು ಆತ್ಮ ವಿಚಾರದಲ್ಲಿ ತೊಡಗುವುದು)

ಇವು ಪುನಃ ಪ್ರತಿಷ್ಠಾಪನೆಯಾಗದ ಹೊರತು ಸಮಾಜದಲ್ಲಿ ಸುಖ ಶಾಂತಿಗಳು ನೆಲೆಸಲಾರವು ಎಂದು ಪೂಜ್ಯ ಆತ್ಮಾನಂದ ಗುರುಗಳು ತಿಳಿಸಿದರು.

ನೀತಿ, ವೈರಾಗ್ಯ, ತುರ್ಯಸ್ಥಿತಿ (ಆತ್ಮಜ್ಞಾನ)ವನ್ನು ಪಡೆಯದೆ ಮೋಕ್ಷವಿಲ್ಲವೆಂದು ಘಂಟಾಘೋಷವಾಗಿ ತಿಳಿಸಿದರು. ಅವರು ಇಡೀ ವಿಶ್ವದ ದಾರ್ಶನಿಕ ಶಾಸ್ತ್ರದ ಸಾರವನ್ನೇ ಅರ್ಥಾತ್ ತಮ್ಮ ಅನುಭವವನ್ನೇ ನೀಡಿದರು.

ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು ಆತ್ಮನಿಷ್ಠರಿದ್ದದ್ದರಿಂದ ಅವರ ಪಾದದಡಿಯಲ್ಲಿ ಅಣಿಮಾದಿ ಸಿದ್ಧಿಗಳು ಉರುಳಾಡುತ್ತಿದ್ದವು. ಅವರ ಪ್ರವಚನಗಳ ಶ್ರವಣದಿಂದ ಶಾಂತಿ ಪಡೆದವರು, ಅವರ ದರ್ಶನ, ಸ್ಪರ್ಶನ, ಆಶೀರ್ವಾದದಿಂದ ರೋಗಗಳಿಂದ ಮುಕ್ತರಾದವರು ಮತ್ತು ಅವರ ಸನ್ನಿಧಿ ಮಾತ್ರದಿಂದ ರಾಕ್ಷಸ, ಪಿಶಾಚಿಗಳ ಭಯಂಕರ ಪೀಡೆಯಿಂದ ಮುಕ್ತರಾದವರು ಅಸಂಖ್ಯರು.

ಪೂಜ್ಯರು 1983ಡಿಸೆಂಬರ 19ರಂದು ಲೌಕಿಕ ದೇಹವನ್ನು ತ್ಯಾಗಮಾಡಿ ಭಾವರಹಿತ ಪರಮಾತ್ಮರಾದರು.

ಓಂ ತತ್ಸತ್

# ಗ್ರಂಥ ಪೋಷಕರ ಪರಿಚಯ

ಶ್ರೀಮಂತ ಶ್ರೀ ಸಂಪತ್ಕುಮಾರ ರುದ್ರಪ್ಪ ದೇಸಾಯಿ ಸಾ. ಹಂಗರಕಿ, ತಾ. ಮತ್ತು ಜಿ. ಧಾರವಾಡ ಇವರು, ಈ ಗ್ರಂಥದ ಪೋಷಕರು. ಇವರು ಸುಪ್ರಸಿದ್ಧ ಹಂಗರಕಿ ದೇಸಾಯಿ ಮನೆತನದವರು. ಈ ಮನೆತನದ ಶ್ರೀಮಂತ ಶ್ರೀ ಅಯ್ಯಪ್ಪ ದೇಸಾಯಿ ಇವರು ಗರಗದ ಶ್ರೀ ಮಡಿವಾಳೇಶ್ವರ ಸ್ವಾಮಿಗಳಿಗೆ ಆಶ್ರಯವನ್ನು ಕೊಟ್ಟವರು. ಮಹಾತ್ಮರಿಗೆ, ತಪಸ್ವಿಗಳಿಗೆ ಆಶ್ರಯ ಕೊಡುವದು ಈ ಮನೆತನದ ಸಂಪ್ರದಾಯ. ಇದೇ ಸಂಪ್ರದಾಯವು ಈ ಮನೆತನದಲ್ಲಿ ಮುಂದುವರೆದದ್ದನ್ನು ನಾವು ಕಾಣುತ್ತೇವೆ. ಶ್ರೀಮಂತ ಶ್ರೀ ಬಸವರಾಜ ದೇಸಾಯಿಯವರು ೧೯೬೬ರಲ್ಲಿ ಪೂಜ್ಯ ಶ್ರೀ ಗುರುದೇವ ಆತ್ಮಾನಂದರಿಗೆ ಆಶ್ರಯವಿತ್ತು, ತಮ್ಮ ಮಾವಿನ ತೋಟದಲ್ಲಿ ಆಶ್ರಮವನ್ನು ಕಟ್ಟಿಸಿದರು. ತದನಂತರ ಅವರ ಚಿರಂಜೀವಿಯಾದ ಶ್ರೀಮಂತ ಶ್ರೀ ಎ.ಬಿ. ದೇಸಾಯಿಯವರು ಆಶ್ರಮವನ್ನು ವಿಸ್ತೀರ್ಣಗೊಳಿಸಿದರು, ಅಲ್ಲದೆ ಕಾಮದಹನ ಗ್ರಂಥದ ಆಶ್ರಯದಾತರಾದರು. ಶ್ರೀಮಂತ ಶ್ರೀ ಸಂಪತ್ಕುಮಾರ ದೇಸಾಯಿಯವರ ಅಣ್ಣಂದಿರಾದ ಶ್ರೀಮಂತ ಶ್ರೀ ಫಾಲಾಕ್ಷ ದೇಸಾಯಿಯವರು ತಮ್ಮ ಧರ್ಮಪತ್ನಿಯವರಾದ ಉಮಾದೇವಿಯವರ ಪ್ರೇರಣೆಯಂತೆ ಈಗಿನ ಮರಡಿಯ ಪೂಜ್ಯ ಶ್ರೀ ಗುರುದೇವ ಆತ್ಮಾನಂದ ಆಶ್ರಮದ ಆವರಣದಲ್ಲಿ ಸದ್ಭಕ್ತರ ಅನುಕೂಲಕ್ಕಾಗಿ ಒಂದು ಬಾವಿಯನ್ನು ಕಡಿಸಿ, ಕಟ್ಟಿಸಿದರು.

ಶ್ರೀಮಂತ ಶ್ರೀ ಸಂಪತ್ಕುಮಾರ ರುದ್ರಪ್ಪ ದೇಸಾಯಿಯವರು ಭಾರತೀಯ ನೌಕಾಪಡೆಯಲ್ಲಿ ಕಮಾಂಡರರಾಗಿ ಸೇವೆಯನ್ನು ಸಲ್ಲಿಸಿದವರು. ಈಗ ಅವರು ಆ ಸೇವೆಯಿಂದ ನಿವೃತ್ತಿಯನ್ನು ಹೊಂದಿ ತಮ್ಮ ಸ್ವರೂಪದ ಅಭ್ಯಾಸದಲ್ಲಿಯೇ ಕಾಲಕಳೆಯುತ್ತಿದ್ದಾರೆ. ಅವರು ಅತ್ಯಂತ ವಿನಯಶೀಲರು, ಆರ್ಜವ ವೃತ್ತಿಯವರು ಮತ್ತು ನಿರಭಿಮಾನಿಗಳಿದ್ದು, ಎಲ್ಲ ಜೀವಿಗಳನ್ನು ತನ್ನಂತೆ ಎಂದು ತಿಳಿದುಕೊಂಡು ಪರಹಿತ ಕಾರ್ಯಗಳಲ್ಲಿ ತೊಡಗಿದ್ದಾರೆ. ಅವರು ಈ ಹಿಂದೆ ಕಾಮದಹನ, ನಿಜಸುಖ ಮಾರ್ಗ ಪ್ರದೀಪ, ಸ್ವರೂಪ ಮಾರ್ಗದರ್ಶಕ, ಪುನರ್ಜನ್ಮ ಮುಂತಾದ ಗ್ರಂಥಗಳ ಪ್ರಕಟಣೆಗಳಿಗೆ ಆಶ್ರಯದಾತರಾದವರು. ಈಗ ಮತ್ತೆ ಅವರು ಪೂಜ್ಯ ಶ್ರೀ ಸದ್ಗುರು ಆತ್ಮಾನಂದ ಸ್ವಾಮಿಗಳ ಪ್ರವಚನ ಸಂಗ್ರಹ ಗ್ರಂಥದ ಪೋಷಕರಾಗಿದ್ದಾರೆ.

ಕೆಡುವ ಶರೀರದ ಸಫಲತೆ ಯಾವದು ಪರಹಿತ. ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ, ಕೊಟ್ಟಿದ್ದು ಕೆಟ್ಟಿತೆನಬೇಡ, ಮುಂದೆ ಕಟ್ಟಿಹುದು ಬುತ್ತಿ ಸರ್ವಜ್ಞ ಎಂಬ ಉಕ್ತಿಯಂತೆ ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ. A king must

be a philosopher or the philosopher must be a king. ಎಂಬ ಪ್ಲೇಟೋ ಮಹಾತ್ಮರ ಉಕ್ತಿಯಂತೆ ರಾಜರ, ಶ್ರೀಮಂತರ, ಸಜ್ಜನರ, ನೀತಿ- ನಿಷ್ಠರ ಆಶ್ರಯವಿದ್ದರೆ ಸಮಾಜದಲ್ಲಿರುವ ಜೀವಿಗಳ ವ್ಯವಹಾರವು ಸುಗಮವಾಗಿ ಸಾಗಲು ಅನುಕೂಲವಾಗುವದು, ವಿಶ್ವದಲ್ಲಿ ಶಾಂತಿ ಸಮಾಧಾನಗಳು ನೆಲೆಸುವವು. ಈ ಗ್ರಂಥವು ಶ್ರೀಮಂತ ಶ್ರೀ ಸಂಪತ್ಕುಮಾರ ರುದ್ರಪ್ಪ ದೇಸಾಯಿಯವರ ತಂದೆ ತಾಯಿಯವರಾದ ದಿ. ಶ್ರೀಮಂತ ಶ್ರೀ ರುದ್ರಪ್ಪ ಕರಬಸಪ್ಪ ದೇಸಾಯಿ ಮತ್ತು ಶ್ರೀಮತಿ ಗಂಗಮ್ಮನವರು ರುದ್ರಪ್ಪ ದೇಸಾಯಿ ಇವರ ಸ್ಮರಣಾರ್ಥವಾಗಿ ಪ್ರಕಟಿಸಲ್ಪಟ್ಟಿದೆ. ದಿ. ಶ್ರೀಮಂತ ಶ್ರೀ ರುದ್ರಪ್ಪ ದೇಸಾಯಿಯವರು ಕೊಡುಗೈ ದೊರೆಗಳಾಗಿದ್ದರು. ಹಂಗರಕಿ ದೇಸಾಯಿ ಮನೆತನದವರಿಂದ ಇನ್ನೂ ಅನೇಕ ಸತ್ಕಾರ್ಯಗಳು ಜರುಗಿವೆ. ಇನ್ನು ಮುಂದೆ ಇವರಿಂದ ನಿರಂತರವಾಗಿ ಅನ್ನ ದಾಸೋಹ, ಜ್ಞಾನ ದಾಸೋಹ ಮುಂತಾದ ಪರಹಿತ ಕಾರ್ಯಗಳು ಜರುಗಲೆಂದು ನಾನು ಉತ್ಕಟವಾಗಿ ಭಾವಿಸುತ್ತೇನೆ. ಪೂಜ್ಯಶ್ರೀ ಗುರುದೇವ ಆತ್ಮಾನಂದರು, ಅನ್ನದಾತಾ ಸುಖೀಭವ, ಜ್ಞಾನದಾತಾ ಸುಖೀಭವ, ಎಂಬಂತೆ ಅವರಿಗೆ ಆಯುರಾರೋಗ್ಯ, ಭಾಗ್ಯಗಳನ್ನು ದಯಪಾಲಿಸಲೆಂದು ಕೋರುತ್ತೇನೆ.

**ಪ್ರೊ. ಎಸ್. ಎಸ್. ಕುರುಬರ**
ಜೆ.ಎಸ್.ಎಸ್. ಮಹಾವಿದ್ಯಾಲಯ,
ವಿದ್ಯಾಗಿರಿ, ಧಾರವಾಡ.



# ಪೂಜ್ಯ ಶ್ರೀ ಸದ್ಗುರು ಆತ್ಮಾನಂದ ಸ್ವಾಮಿಗಳವರ ಪ್ರವಚನ ಸಂಗ್ರಹ

2-3-1978 ರ ಸಂಜೆ

## ಶ್ರೀ ಗುರುವಚನದಿಂದಧಿಕ ಸುಧೆಯುಂಟೆ !

"ಶ್ರೀ" ಎಂದರೆ ಸಕಲಸಿದ್ಧಿ, ಸಕಲ ವೃದ್ಧಿ. ಸಕಲ ಸಂಪತ್ತು, ಬ್ರಹ್ಮಜ್ಞಾನ. ಬ್ರಹ್ಮಜ್ಞಾನವುಳ್ಳವನೇ ಶ್ರೀ ಗುರು. ತನ್ನ ನಿಜದ ಬಗ್ಗೆ ಇರುವ ಅಜ್ಞಾನವನ್ನು ನಾಶ ಮಾಡುವವನು ಗುರು. ವ್ಯವಹಾರಿಕ ಅಜ್ಞಾನವನ್ನು ನಾಶಮಾಡುವವನು ಗುರುವಲ್ಲ. ತ್ರಿಕಾಲಾಬಾಧಿತವಾದದ್ದು ಯಾವದೋ ಅದು ಸತ್. ನಮಗೆ ದುಃಖನಿವೃತ್ತಿಯಾಗಬೇಕಾಗಿದೆ, ಅಂದರೆ ಚಿಂತೆಯನ್ನು ಕಳೆದುಕೊಳ್ಳಬೇಕಾಗಿದೆ. ಈ ಸತ್ ಸುಖವನ್ನು ಕೊಡುವದು. ಒಂದು ವೇಳೆ ಏನಾದರೂ ದುಃಖವನ್ನು ಕೊಡುವದೆಂದರೆ ಅದು ಸತ್ ಅಲ್ಲ, ತಾನೇ ಸತ್ ಇರುವನು. ಆದ್ದರಿಂದ ತನ್ನನ್ನು ತಾನು ತಿಳಿಯಲು ಸುಖವು ಸಿಗುವದು.

ಜೀವಿಗಳಲ್ಲಿ ನಾಲ್ಕು ಪ್ರಕಾರಗಳಿರುವವು, ಅಂಡಜ ಅಂದರೆ ತತ್ತಿಯಿಂದ ಹುಟ್ಟಿದವು, ಜರಾಯುಜ (ಪಿಂಡಜ) ಅಂದರೆ (ಹುದಗದಿಂದ)ಗರ್ಭದಿಂದ ಹುಟ್ಟಿದವು. ಉದ್ಭಿಜ ಎಂದರೆ ಭೂಮಿಯೊಳಗಿಂದ ಹುಟ್ಟಿದವು. ಶ್ವೇದಜ ಅಂದರೆ ಬೆವರಿನೊಳಗೆ ಹುಟ್ಟಿದವು. ಇವೆಲ್ಲ ಜೀವಿಗಳ ಬಗ್ಗೆ ಗಳಿಸುವ ಜ್ಞಾನವು ವ್ಯವಹಾರಿಕ ಜ್ಞಾನವೇ. ನಿರ್ಜೀವ ವಸ್ತುಗಳ ಬಗ್ಗೆ ಗಳಿಸುವ ಜ್ಞಾನವೂ ವ್ಯವಹಾರಿಕ ಜ್ಞಾನವೇ. ಎಲ್ಲ ವ್ಯವಹಾರಿಕ ಜ್ಞಾನವು ಉದರ ಪೋಷಣೆಗಾಗಿ ಮಾತ್ರ. ವ್ಯವಹಾರಿಕ ಜ್ಞಾನವನ್ನು ಪೂರ್ತಿಗೊಳಿಸುವದು ಸಾಧ್ಯವಿಲ್ಲ. ಒಂದು ವೇಳೆ ಮಹಿಯೊಳಗಿದ್ದದ್ದನ್ನೆಲ್ಲ ಅಭ್ಯಾಸ ಮಾಡಿದರೂ ದುಃಖವು ಹೋಗುವದಿಲ್ಲ. ಉಳಿದ ಯಾವುದೇ ಜ್ಞಾನದಿಂದಲೂ ದುಃಖವು ಹೋಗುವದಿಲ್ಲ.

ನಿಜವಾಗಿ ಸುಖವೆಲ್ಲಿದೆ ಎಂಬುದನ್ನು ತಿಳಿಯಬೇಕು. ನಂತರ ಸುಖವಾಗಿ ಉಳಿಯಬೇಕು. ಇದೊಂದೇ ದಾರಿ.

ಶೃತಿಯ ಅರ್ಥವನ್ನು ಮಾಡುವದರಲ್ಲಿ ದಿಗ್ಭ್ರಮೆಯಾಗಬಹುದು. ಬೇರೆ ಬೇರೆ ಆಚಾರ್ಯರು ಶೃತಿಯ ಅರ್ಥವನ್ನು ಬೇರೆ ಬೇರೆಯಾಗಿ ಮಾಡುವರು. ಶಿಷ್ಟರ ಆಚರಣೆಯೂ ಒಂದೊಂದು ಸಲ ಭ್ರಮೆಗೊಳಿಸಬಹುದು. ಆದರೆ ತನ್ನ ಸ್ವಂತ ಅನುಭವವು ತನ್ನನ್ನು ಭ್ರಮೆಗೊಳಿಸಲಾರದು. ಆದ್ದರಿಂದ ಸ್ವಾನುಭವವೇ ಸರ್ವಶ್ರೇಷ್ಠವಾದುದು. ಶಾಸ್ತ್ರ ಕಲಿಯುವ ಅವಶ್ಯಕತೆಯಿಲ್ಲ. ಏಕೆಂದರೆ ಅದು ಮಹಾರಣ್ಯದಂತಿದೆ. (ಶಬ್ದಜಾಲಂ ಮಹಾರಣ್ಯಂ ಚಿತ್ತ ಭ್ರಮಣ ಕಾರಣಂ" ಎಂದಂತಿದೆ) ಚಿತ್ತ ಭ್ರಮಣಕ್ಕೆ ಕಾರಣವಾಗಿದೆ. ಬೇರೆ ಬೇರೆ ಗ್ರಂಥಗಳನ್ನು ನೋಡದೆ ನಿಮ್ಮ ಅನುಭವವನ್ನು ನೀವು ನೋಡಿಕೊಳ್ಳಿರಿ.

ಚಿಂತೆಯು ಎಚ್ಚರಿಕೆಯಲ್ಲಿ ಮಾತ್ರ. ಎಚ್ಚರಿಕೆಯಲ್ಲಿಯೇ ಚಿಂತೆಯನ್ನು ಕಳೆದುಕೊಳ್ಳಬೇಕಾಗಿದೆ. ಯಾವದು ಚಿಂತೆಯನ್ನು ನಾಶಮಾಡುವದೋ ಅದು ಜ್ಞಾನವು. ಇಂಥ ಜ್ಞಾನವನ್ನು ಕೊಡುವವನೇ ಗುರು. ಇಂಥ ಜ್ಞಾನವು ನಮ್ಮ ಅಂತಃ ಕರಣದಲ್ಲಿದೆ (ಹೃದಯದಲ್ಲಿದೆ) ಸುಖದ ತಿಳುವಳಿಕೆಯನ್ನು ನಮ್ಮ ಅಂತಃಕರಣದಲ್ಲಿ ಮೂಡಿಸುವವನೇ ಗುರು. ಯಾವ ವಚನವು ಚಿಂತೆಯನ್ನು ಕಳೆಯುವದೋ ಅದು ಗುರು ವಚನವು. ಚೈತನ್ಯವಾದ ಇರುವೇ ಅಮೃತವು.

ವಿವೇಕವು ಉದಯವಾದಂತೆ ಅಜ್ಞಾನವು ನಾಶವಾಗುತ್ತ ಹೋಗುವದು. ಸಂಪೂರ್ಣ ವಿವೇಕವು ಉದಯವಾದಾಗ ಅಜ್ಞಾನವು ಸಂಪೂರ್ಣ ನಾಶವಾಗುವದು. ಅರುಣೋದಯವಾದಾಗ ಕತ್ತಲೆಯು ಸ್ವಲ್ಪ ಮಟ್ಟಿಗೆ ನಾಶವಾಗುವದು, ಸೂರ್ಯೋದಯವಾದಾಗ ಕತ್ತಲೆಯು ಸಂಪೂರ್ಣವಾಗಿ ನಾಶವಾಗುವದು.

ಇಂದ್ರಿಯಗಳ ಲಾಲಸೆಯ ವಿಷಯಗಳ ಭೋಗದಿಂದ ಸುಖ ತೋರಿ ಹೋಗುವದು. ಆದರೆ ಉಳಿಯುವದಿಲ್ಲ. ಸುಖದ ಬೇಡಿಕೆ ಇನ್ನೂ ಉಳಿದಿದೆ. ದೃಶ್ಯ ವಿಶ್ವವೆಲ್ಲವೂ ಚರಟವೆಂಬುದು ತಿಳಿಯಬೇಕು. ಸುಖದ ಬೇಡಿಕೆ ಉಳಿದಿದೆಯೆಂದರೆ ಸುಖವು ಸಿಕ್ಕಿಲ್ಲ ಎಂದರ್ಥ. ವ್ಯವಹಾರಿಕ ಜ್ಞಾನದ ಪರಿಶೀಲನೆಯಿಂದ ಸುಖವು ಸಿಗುವದಿಲ್ಲ. ಆದ್ದರಿಂದ ವಿಶ್ವದ ಬಗ್ಗೆ ಮಾಹಿತಿಯನ್ನು ಹೇಳುವದರಿಂದ, ಕೇಳುವದರಿಂದ ಏನೂ ಪ್ರಯೋಜನವಿಲ್ಲ. ತನ್ನ ನಿಜದ ಬಗ್ಗೆ ಪರಿಶೀಲನೆ ನಿರಂತರ ನಡೆದರೆ ಅಜ್ಞಾನದ ನಿವಾರಣೆಯಾಗುವದು ಮತ್ತು ಸುಖವು



ದೊರೆಯುವದು. ಆದ್ದರಿಂದ ಅಜ್ಞಾನವನ್ನು ನಾಶ ಮಾಡುವಂಥ ಮಾತುಗಳನ್ನು ಹೇಳುವದೂ ಕೇಳುವದೂ ನಡೆಯಬೇಕು. ಈ ರೀತಿಯಾಗಿ ನಿರಂತರವಾಗಿ ತನ್ನ ನಿಜವನ್ನು ತಿಳಿದುಕೊಳ್ಳುವದಕ್ಕಾಗಿ ಜೀವನವಿಡೀ ಕಾಲವನ್ನು ಕಳೆದರೆ ಆ ಜೀವನವು ಸಾರ್ಥಕವಾದಂತೆ. ಇಲ್ಲದಿದ್ದರೆ ಜೀವನವು ವ್ಯರ್ಥವಾದಂತೆಯೇ ಸರಿ.

ಬ್ರಹ್ಮನಿಷ್ಠರು ಸಿಗುವದು ದುರ್ಲಭ. ಒಂದು ವೇಳೆ ಪೂರ್ವಜನ್ಮದ ಪುಣ್ಯದಿಂದ ಸಿಕ್ಕರೆ ಅವರ ಸಂಗದಲ್ಲಿಯೇ ಇದ್ದು ತನ್ನ ನಿಜದ ಬಗ್ಗೆ ಅವರಿಂದ ಕೇಳಿಕೊಂಡು, ಮನನದ ಮುಖಾಂತರ ದೃಢನಿಶ್ಚಯ ಮಾಡಿಕೊಂಡು ನಿದಿಧ್ಯಾಸನದಿಂದ ಸಂಸಿದ್ಧನಾಗಬೇಕು. ಬ್ರಹ್ಮನಿಷ್ಠರು ಸಿಗದಿದ್ದರೆ ಬ್ರಹ್ಮನಿಷ್ಠರ ವಾಣಿಯನ್ನು ಸಂಗ್ರಹಿಸಿ, ತೀಕ್ಷ್ಣವಾಗಿ ಪರಿಶೀಲನೆ ನಡೆಸಬೇಕು. ಇದರಿಂದ ಶಾಶ್ವತ ಸುಖವು ಲಭಿಸುವದು.

ಶರೀರ ಚರಿತಾರ್ಥಕ್ಕಾಗಿ ಮಾತ್ರ ಏನು ಅವಶ್ಯವೋ ಅದರ ಸಲುವಾಗಿ ಪ್ರಯತ್ನ ಮಾಡಬೇಕು, ಆದರೆ ಜೀವನದ ಮುಖ್ಯ ಗುರಿ ಶಾಶ್ವತ ಸುಖವನ್ನು ಹೊಂದುವದೇ ಆಗಿದೆ. ಆದರೆ ಜೀವಿಯು ಶರೀರ ಹೋದೀತೆಂಬ ಚಿಂತೆಗೆ ಒಳಗಾಗಿದ್ದಾನೆ. ಒಂದಿಲ್ಲ ಒಂದು ದಿನ ಶರೀರವು ಹೋಗಿಯೇ ಹೋಗುವದು, ಎಂದ ಮೇಲೆ ದೇಹವು ಹೋದೀತು ಎಂದು ಚಿಂತೆ ಮಾಡಿ ಪ್ರಯೋಜನವೇನು? ಅಲ್ಲದೆ ದೇಹದ ಮೇಲಿನ ಮೋಹದಿಂದಲೇ ದುಃಖವು ಬಂದಿದೆ. ದೇಹದ ಮೇಲಿನ ನಿರ್ಮೋಹದಿಂದ ಸುಖವು ಲಭಿಸುವದು. ತನ್ನ ನಿಜವನ್ನು ಕಂಡುಕೊಂಡಾಗ ಮಾತ್ರ ಶರೀರದ ಮೇಲಿನ ಮೋಹವು ಹೋಗುವದು.

"ದೇಹವಿದನು ಅನ್ಯ ದೇಹದಂದದೊಳು ಕಾಣಲರಿಯದ ಮೋಹಿತಂಗೆ"

ಎಂಬಂತೆ ಇದೆ.

ತನ್ನ ನಿಜದ ಅಜ್ಞಾನದಿಂದ ದುಃಖ ಬಂದಿದೆ. ತನ್ನ ನಿಜದ ಜ್ಞಾನದಿಂದ ದುಃಖನಿವೃತ್ತಿಯಾಗುವದು. ಕರ್ಮವನ್ನು ಮಾಡದೇ ಇರುವದರಿಂದ ದುಃಖ ಬಂದಿಲ್ಲ. ಆದ್ದರಿಂದ ಕರ್ಮ ಮಾಡುವದರಿಂದ ದುಃಖನಿವೃತ್ತಿಯಾಗುವದಿಲ್ಲ. "ತಾನೆ ತನ್ನೊಳು ತನ್ನ ನಿಜವ ನೋಡಲು ಪರಮಾನಂದಮಯ ಚಿದಖಂಡ ರೂಪಹನು."

"ಜ್ಞಾನಾದೇವತು ಕೈವಲ್ಯಂ ನ ತು ಕರ್ಮಣಾ" ಎಂಬಂತೆ ಇರುವದು.

* * * *

## 3-3-1978 ರ ಸಂಜೆ

ಬ್ರಹ್ಮನಿಷ್ಠರ ಶರೀರಗಳು ಭಿನ್ನವಿದ್ದರೂ ಶ್ರೀ ಗುರು ಒಬ್ಬನೇ (ಸ್ವರೂಪವೇ). ನಿದ್ರೆಯಲ್ಲಿ ಎಲ್ಲರೂ ಒಂದೇ, ಆನಂದಮಯರೇ. ಭೂತ, ವರ್ತಮಾನ, ಭವಿಷತ್ಕಾಲದ ಎಲ್ಲ ದೇಶಗಳ ವ್ಯಕ್ತಿಗಳ ಧ್ಯೇಯದಲ್ಲಿ ಭೇದವಿಲ್ಲದೆ ದುಃಖ ಮಿಶ್ರಿತವಲ್ಲದ ಸುಖವನ್ನು ಹೊಂದಬೇಕೆಂಬ ಏಕತೆಯೇ ಇದೆ. ಜಾಗ್ರದಲ್ಲಿ ಭಿನ್ನ ಭಿನ್ನ ದೇಹಗಳು. ಆದರೆ ನಿದ್ರೆಯಲ್ಲಿ ಎಲ್ಲರೂ ಒಂದೇ. ಆನಂದಮಯರೇ. ಭಿನ್ನ ಭಿನ್ನ ವ್ಯಕ್ತಿಗಳ ಮನಸ್ಸುಗಳು ಭಿನ್ನ ಭಿನ್ನವಾಗಿದ್ದರೂ (ಕೆಲವೊಂದು ವೇಳೆ ಒಂದೇ ಇರಬಹುದು) ಅವರೆಲ್ಲರ ಧ್ಯೇಯವು ಸುಖ ಹೊಂದಬೇಕೆಂಬುದೇ ಆಗಿದೆ. ಜಾಗ್ರದಲ್ಲಿ ಎಲ್ಲರೂ ಆನಂದದ ಬಗ್ಗೆಯೇ ಮಾತನಾಡುತ್ತಾರೆ. ನೀವು ನಿಮ್ಮ ಚರ್ಮ ಚಕ್ಷುಗಳಿಗೆ ಗೋಚರವಾಗಿರುವಿರೋ? ಇಲ್ಲ. ಗೋಚರವಾದ ಆಕಾಶವನ್ನೇ ಅಳತೆಮಾಡಲಿಕ್ಕೆ ಬರುವದಿಲ್ಲ. ಅಂದಮೇಲೆ ಚರ್ಮ ಚಕ್ಷುವಿಗೆ ಕಾಣದ ನಿನ್ನ ನಿಜವನ್ನು ಅಳತೆ ಮಾಡುವದಕ್ಕೆ ಬರುತ್ತದೆಯೇ? ಸಾಧ್ಯವೇ ಇಲ್ಲ. ತನ್ನ ನಿಜದಲ್ಲಿ ಮಾತೃಮಾನ, ಮೇಯಗಳಿಲ್ಲ."ಮಾತೃ ಮಾನ ವಿಹೀನೋಸ್ಮಿಮೇಯ ಹೀನಃ ಶಿವೋಽಸ್ಮಿ ಅಹಂ." ಎಂಬಂತೆ ಇದೆ.

ಎಲ್ಲರಿಗೂ ಸುಖವನ್ನು ಹೊಂದಲು ಅಂತಃಕರಣ ಪರಿಪಕ್ವತೆಯೊಂದೇ ಸಾಧನ. ಮನಸ್ಸು ಎಲ್ಲ ವಿಷಯಗಳನ್ನು ಬಿಟ್ಟಾಗ ಆನಂದವೇ ಉಳಿಯುವದು. ಮನಸ್ಸು ಎಲ್ಲವನ್ನು ಬಿಟ್ಟಾಗಲೂ ಆನಂದವಿರುತ್ತದೆ, ಅಡಗಿಸಿದಾಗಲೂ ಆನಂದವಿರುತ್ತದೆ. ಅಡಗಿಸಿದ್ದು ಮತ್ತೆ ಏಳುವದು, ಬಿಟ್ಟದ್ದು ಮತ್ತೆ ಏಳುವದಿಲ್ಲ. ಮನಸ್ಸು ಮಾನ ಮರ್ಯಾದೆಗಳನ್ನು ಬಿಟ್ಟಾಗ ಆನಂದವು ಇರುತ್ತದೆ. ಮನಸ್ಸು ಭೇದವನ್ನು ಹಿಡಿದಾಗ ಆನಂದವು ಇರುವದಿಲ್ಲ. ಭೇದವನ್ನು ಬಿಟ್ಟಾಗಲೇ ಆನಂದವಿರುವದು. ಸತ್ತವರ ಸುದ್ದಿಯನ್ನು ತಿಳಿದುಕೊಂಡರೆ ಏನು ಸಿಗುತ್ತದೆ ? ಕಲಿತದ್ದನ್ನೆಲ್ಲ ಕೈ ಬಿಡು. ಕಲಿಯುವದನ್ನು ಬಿಡಬಹುದು. ಆದರೆ ಕಲಿತದ್ದನ್ನು ಬಿಡುವದು ಅತಿ ಕಠಿಣವಿದೆ. ನಿನ್ನನ್ನು ನೀನು ನಿನ್ನ ಅನುಭವದಿಂದ ತಿಳಿದುಕೊ. ಬ್ರಹ್ಮನಿಷ್ಠರ ವಾಣಿಯು ಅತಿ ಶ್ರೇಷ್ಠ ವಾಣಿಯು. ಬ್ರಹ್ಮನಿಷ್ಠರು ಹೇಳಿದಂತೆ ನಡೆದರೆ ಮುಕ್ತಿಯು ಸಾಧ್ಯವಾಗುವದು. ಈ ರೀತಿಯಾಗಿ ಎಲ್ಲ ಮಾನವರ ನುಡಿ, ಧ್ಯೇಯ, ಸಾಧನ, ಸಾಧ್ಯ ಎಲ್ಲವೂ ಒಂದೇಯಾಗಿದೆ.

* * * *



## 4-3-1978 ರ ಸಂಜೆ

ಶ್ರೀ ಗುರು ಅಂದರೆ ಯಾರು? ಬ್ರಹ್ಮನಿಷ್ಠತ್ವವನ್ನು ಹೊಂದಿದವರೇ ಶ್ರೀ ಗುರು. ಶ್ರೋತ್ರೀಯತ್ವವಿರದಿದ್ದರೂ ಬ್ರಹ್ಮನಿಷ್ಠತ್ವವು ಅವಶ್ಯವಾಗಿ ಬೇಕು. ಯಾಕೆಂದರೆ ಆದಿಯಲ್ಲಿ ಶೃತಿ ಇರಲಿಲ್ಲ. ಬ್ರಹ್ಮನಿಷ್ಠತ್ವವನ್ನು ಅನುಸರಿಸಿದ ಶ್ರವಣವು ಶ್ರುತಿ. ಶ್ರುತಿಯನ್ನು ಸ್ಮರಿಸಿ ಹೇಳಿದ್ದೇ ಸ್ಮೃತಿ. "ಗುರುವಚನವೆ ಶ್ರುತಿ ಗುರುವಚನವೆ ಸ್ಮೃತಿ ಗುರುವಚನವೆ ಸರ್ವವಿನಿಯಳೆ." ಎಂಬಂತೆ ಇದೆ.

ಆನಂದ ಹೊಂದಬೇಕೆಂಬ ತಿಳುವಳಿಕೆ ಎಲ್ಲರಿಗೂ ಇದೆ. ಸುಖ ಹೊಂದಬೇಕೆಂಬುದು ದೇಶ, ಕಾಲ, ವ್ಯಕ್ತಿಗಳಿಂದ ಪರಿಚ್ಛಿನ್ನವಿಲ್ಲ. ಸುಖ ಹೊಂದಬೇಕೆಂಬ ತಿಳುವಳಿಕೆಯನ್ನು ನಿಮಗೆ ಯಾರು ಕಲಿಸಿದರು? ಸುಖವನ್ನು ಬೇಡು ಎಂದು ನಿನಗೆ ಯಾರು ಕಲಿಸಿದರು? ಯಾರೂ ಕಲಿಸಿಲ್ಲ. ಅಂದ ಮೇಲೆ ಈ ಸುಖವನ್ನು ಹೊಂದಬೇಕೆಂಬ, ಸುಖವನ್ನು ಬೇಡುವ ತಿಳುವಳಿಕೆ ಸ್ವತಃ ನಿನ್ನದೇ ಅಲ್ಲವೇ? ನಿನ್ನ ಆನಂದದ ಅನುಭವವನ್ನೇ ನಿನ್ನ ಆನಂದವನ್ನು ಹೊಂದಬೇಕೆಂಬ, ಬೇಡಬೇಕೆಂಬ ತಿಳುವಳಿಕೆಯು ಅವಲಂಬಿಸಿದೆ, ಬೇರೆ ಯಾರ ಅನುಭವವನ್ನೂ ಅವಲಂಬಿಸಿಲ್ಲ. ಆದ್ದರಿಂದ ನಿನ್ನ ಅನುಭವವೇ ನಿನ್ನ ಗುರು. ಗುರು ಎಂದರೆ ಗೊಂಬೆಯಲ್ಲ. ಆದ್ದರಿಂದ ತನ್ನ ಅರಿವೇ ತನ್ನ ಗುರು.

ಆದಿಯಲ್ಲಿ ಶ್ರುತಿಯು ಇರಲಿಲ್ಲ. ನಿಮ್ಮ ನಿಜವನ್ನು ಅನುಸರಿಸಿ ಹೇಳಿದ್ದೇ ಶ್ರುತಿಯು. ನಿಮ್ಮ ನಿಜವನ್ನು ಹಿಂಬಾಲಿಸುವದೇ ಶ್ರುತಿಯು. "ತನ್ನ ನಿಜಾನುಸರಣದಿಂದುನ್ನಿಸುವದು ವೇದ ದೈವಕುಲವದರಿಂ। ಮುನ್ನವೆ ತನ್ನಂ ತಿಳಿದೊಡವಂ ನಿಜದಿಂ ನೋಡೆ ವೇದ ದೈವ ಗುರುಜ್ಞಂ" ಎಂಬಂತೆ ಇದೆ. ಆದ್ದರಿಂದ ತನ್ನ ಇರುವನ್ನು ಲಕ್ಷಿಸಿ ನುಡಿದ ನುಡಿಯೇ ಗುರು ವಚನ.

ಆನಂದದ ತಿಳುವಳಿಕೆ ಮೊದಲೋ? ವಿಶ್ವದ ತಿಳುವಳಿಕೆ ಮೊದಲೋ? ನಿನ್ನ ತಿಳುವಳಿಕೆ ಮೊದಲೋ, ವಿಶ್ವದ ತಿಳುವಳಿಕೆ ಮೊದಲೋ? ನೀ ಮೊದಲೋ, ವಿಶ್ವ ಮೊದಲೋ? ನೀನೇ ಮೊದಲು, ಆನಂದದ ತಿಳುವಳಿಕೆಯೇ ಮೊದಲು. ಆನಂದದ ತಿಳುವಳಿಕೆಯಲ್ಲಿ ವಿಶ್ವವಿಲ್ಲ. ನೀನಿದ್ದಿ. ಇಲ್ಲದ ವಿಶ್ವವನ್ನು ಕಂಡು ಇಲ್ಲವೆಂದು ಹೇಳಿದಿರಿ. ಹೀಗೆ ತನ್ನ ನಿಜವನ್ನು ತಿಳಿದುಕೊಂಡು ನುಡಿದ ವಾಣಿಯೇ ಶ್ರುತಿ. ಇದೇ ಗುರುವಚನ.

ವಿಶ್ವಭಾವವಿಲ್ಲದಾಗ ದುಃಖವಿಲ್ಲ. ಆನಂದವೇ ಇರುವದು. ಶರೀರ ಭಾವದ

ನಂತರವೇ ದುಃಖವು. ಸ್ವಾನಂದ ಸಾಮ್ರಾಜ್ಯದಲ್ಲಿ ಎಳ್ಳಷ್ಟೂ ದುಃಖವಿಲ್ಲ. "ಸ್ವಾನಂದ ಸಾಮ್ರಾಜ್ಯ ನಿಮಗ್ನಮಸತಾ ........ ಕಾಂಹೀ ಚ ಕಾಂಹೀನವ್ಹೆ" ಎಂಬಂತೆ ಇದೆ. ಸ್ವಾನಂದವನ್ನು ಲಕ್ಷಿಸಿ ನುಡಿದ ಮಾತು ಎಲ್ಲರಿಗೂ ಮಾರ್ಗದರ್ಶಕವು. ಇದಕ್ಕೆ ದೇಶ ಕಾಲ ವ್ಯಕ್ತಿ ಭೇದವಿಲ್ಲ. ಸ್ವಾನಂದದಲ್ಲಿ ವಿಶ್ವದ ಅಭಾವವಿದೆ. ಈ ವಾಣಿಯೇ ಗುರುವಚನ, ಶ್ರುತಿ. ಇದರ ಶ್ರವಣವೇ ಶೃತಿ.

ಮೂಲ ಅರುವು ಇರುವು ಆನಂದ ಒಂದೇ. ಅದು ಚರ್ಮ ಚಕ್ಷುವಿಗೆ ಕಾಣಲಾರದು. ಅದು ಮನೋಗಮ್ಯವಲ್ಲ. ಅದು ಅನುಭವೈಕ ಗಮ್ಯವು. ಹೀಗೆ ಅನುಭವವನ್ನು ಲಕ್ಷಿಸಿ ನುಡಿದ ಮಾತೇ ಗುರುವಚನ. ಇದಕ್ಕಿಂತ ಶ್ರೇಷ್ಠವಾದ ಅಮೃತವು ಇನ್ನಾವುದಾದರೂ ಇದೆಯೇ? ಇಲ್ಲ.

ಇದು ಇರುವು ಅರುವಿನ ವಾಣಿಯು. ಬಾಹ್ಯ ಪದಾರ್ಥಗಳ ಅರಿವಲ್ಲ. ಈ ಇರುವು ಅರುವಿನ ವಾಣಿಯು ಪುನಃ ಬಾಹ್ಯಪದಾರ್ಥಗಳಂತೆ ಸಿಗುವದಲ್ಲ. ಇದನ್ನು ಬಿಟ್ಟದ್ದಾದರೆ ಅಜ್ಞಾನ ಕವಿದಿದೆ ಎಂದರ್ಥ. ಅಜ್ಞಾನದಲ್ಲಿಯೇ ಅನ್ಯಥಾಜ್ಞಾನ. ವಿಶ್ವದಾದ್ಯಂತ ಅಧ್ಯಾಸದ ವ್ಯವಹಾರವೇ. ಈ ವ್ಯವಹಾರವು ದುಃಖಕ್ಕೆ ಕಾರಣವೋ, ಸುಖಕ್ಕೆ ಕಾರಣವೋ? ಈ ವ್ಯವಹಾರವನ್ನು ಕುರಿತು ನುಡಿದ ಮಾತು ದುಃಖಕ್ಕೆ ಒಯ್ಯುವದೋ, ಸುಖಕ್ಕೆ ಒಯ್ಯುವದೋ? ವ್ಯವಹಾರ ಭಾವ ಅಡಗಿದಾಗ ಆರಾಮವೋ, ಇದ್ದಾಗ ಆರಾಮವೋ? ಅಧ್ಯಾಸದ ವ್ಯವಹಾರದ ಬಗೆಗೆ ಹೇಳಿದ ನುಡಿಗಳನ್ನೇ ಕೇಳಲು ಹಾತೊರೆಯುತ್ತಿದ್ದೇವೆ. ಅದಕ್ಕಾಗಿ ಬಿಡುವೇ ಸಿಕ್ಕಿಲ್ಲ. ತನ್ನ ಅರುವು ಇರುವು ಇವುಗಳ ಬಗ್ಗೆ ಬ್ರಹ್ಮನಿಷ್ಠರು ಹೇಳುವ ಮಾತನ್ನು ಕೇಳಲಿಕ್ಕೆ ಕಂಕಣಬದ್ಧರಾಗಿದ್ದೇವೆಯೇ? ಕೇಳಲಿಕ್ಕೆ, ಹೇಳಲಿಕ್ಕೆ ಮಾಡಿಕೊಂಡ ಸಲಕರಣೆಗಳು ಅಧ್ಯಾಸದಲ್ಲಿಯವು ಅಲ್ಲವೇ? ತೋರಿಕೆಗೆ ಆಧಾರವಾಗಿ ಇರುವ ಇರುವನ್ನು ಲಕ್ಷಿಸಿ ಹೇಳಿದ ವಾಣಿ ಕೇಳಲು ಸಲಕರಣೆಗಳನ್ನು ಮಾಡಿಕೊಂಡಿರುವಿರೋ? ಅಧ್ಯಾಸದ ವ್ಯವಹಾರದ ಬಗೆಗೆ ಆಜನ್ಮಪರ್ಯಂತ ಕೇಳಿದರೂ ಸಂಕಟ ತಪ್ಪಿದೆಯೇ? ಇಲ್ಲ. ಇರುವು ಅರುವನ್ನು ಲಕ್ಷಿಸಿ ಹೇಳಿದ ಗುರುವಾಣಿಯನ್ನು ಲಕ್ಷ ಪೂರೈಸಿ ಕೇಳಿ ಮನನ ಮಾಡಬೇಕು, ನಿದಿಧ್ಯಾಸನಗೈಯಬೇಕು, ಅಂದರೆ ಮಾತ್ರ ಪರಮೋನ್ನತಿ ಶಾಂತಿಯು ಲಭಿಸುವದು. ಆದ್ದರಿಂದ ಗುರುವಚನವು ಅತಿ ಶ್ರೇಷ್ಠ.

ಚಿದಾನಂದದ ಬಗೆಗೆ ಹೇಳಿದ ಮಾತುಗಳನ್ನು ಬಿಟ್ಟರೆ ಉಳಿದ ಎಲ್ಲ ವಚನಗಳು ಅನುಗಾಲವೂ ಚಿಂತೆ ಕೊಡುತ್ತವೆ. ತೋರಿ ಅಡಗಿ ಹೋಗುವಂಥದ್ದರ



ಕುರಿತು ಹೇಳಿದ ಮಾತುಗಳು ತೋರಿಕೆಯನ್ನು ದಾಟಿ ಬರಲಾರವು. ಅವು ನಮ್ಮನ್ನು ಇರುವಿಗೆ ಒಯ್ಯಲಾರವು. ಪರಮಾನಂದವನ್ನು ಕೊಡಲಾರವು. ಚಿದಾನಂದವನ್ನು ಲಕ್ಷಿಸಿ ಹೇಳಿದ ಮಾತುಗಳೇ ನಮ್ಮನ್ನು ಆನಂದಕ್ಕೆ ಒಯ್ಯಬಲ್ಲವು. ವಿಷಯಗಳು ನಾಳೆ ಬಾ ಎಂದರೆ ಬರಲಾರವು. ಅದಕ್ಕಾಗಿಯೇ ಅವುಗಳನ್ನು ಬೇಗನೆ ಪಡೆಯಲು ಪ್ರಯತ್ನಿಸುತ್ತಿದ್ದೇವೆ. ಅವು ಬೇಗನೆ ನಾಶವಾಗಿ ಹೋದರೆ ಹೇಗೆ ಎಂದು ಚಿಂತೆ ಮಾಡುತ್ತಿದ್ದೇವೆ. ಅವು ಸುಖ ಕೊಡುವವು ಎಂದು ಅವುಗಳನ್ನು ಪಡೆಯುವ ಬಗ್ಗೆ ಚಿಂತಿಸುವದನ್ನು ಮಾಡುತ್ತಿದ್ದೇವೆ. ನಮಗೆ ಬೇಕಾದದ್ದು ಪರಮಾನಂದ. ಆದರೆ ತೋರಿಕೆಯ ಸುದ್ದಿಯಲ್ಲಿಯೇ ತೊಡಗಿದ್ದೇವೆ. ಪರಮಾನಂದವನ್ನು ಪಡೆಯುವದಕ್ಕಾಗಿ ಪರಮಾನಂದದ ಬಗೆಗೆ ಬ್ರಹ್ಮನಿಷ್ಠರ ವಾಣಿಯನ್ನು ಕೇಳಬೇಕು. ಯಾವದನ್ನು ಕೇಳುವಿರಿ ತದನುಸಾರವೃತ್ತಿ ಹರಿಯಬೇಕು. ಬ್ರಹ್ಮನಿಷ್ಠರು ಕೇವಲ ನಮ್ಮ ನಿಜವನ್ನೇ ಕುರಿತು ಹೇಳಿದ್ದಾರೆ. "ರಾಮ ರಾಮ" ಎಂದಾಗ ರಾಮ ಶಬ್ದದ ಅರ್ಥಾನುಸಂಧಾನವೃತ್ತಿ ಆಯಿತೇ? ಸುಖ ಎಂದಾಗ ಸುಖದ ವೃತ್ತಿಯೇ ಆಗಬೇಕು. "ಬ್ರಹ್ಮಾಕಾರ ತಯಾವೃತ್ತಿಃ ನಿರ್ವಿಕಾರತಯಾ ಸ್ಥಿತಿಃ ವೃತ್ತಿ ವಿಸ್ಮರಣಂ ಸಮ್ಯಕ್ ಸಮಾಧಿರ್ಜ್ಞಾನ ಸಂಜ್ಞಕಂ" ಎಂಬಂತೆ ಇದೆ. "ವಿಶ್ವ"ಎಂದಾಗ ವಿಶ್ವದ ವೃತ್ತಿಯೇ ಆಗುತ್ತದೆ. ವಿಶ್ವದ ವೃತ್ತಿಯು ಸಂಕಟಪ್ರಾಯವಾದುದು. ನಿದ್ರೆಯಿಂದ ಎಚ್ಚತ್ತ ಕೂಡಲೇ ವಿಶ್ವದ ವೃತ್ತಿಯಾಗುವದು. ವಿಶ್ವದ ವೃತ್ತಿಯಾದ ಕೂಡಲೆ ಸಂಕಟವೇ ಸಂಕಟ. ವಿಶ್ವದ ವಿಷಯಗಳು ತೋರಿ ಹೋಗುವವೆಂದೇ ಸಂಕಟ. ಅರಿವು ಆದಿಯಿಂದಲೂ ಇದೆ. ಅದು ತೋರಿ ಹೋಗುವಂಥದ್ದಲ್ಲ. ಆದ್ದರಿಂದಲೇ ಆನಂದದಾಯಕವು. ಆದ್ದರಿಂದ ಅರಿವಿನ ಬಗ್ಗೆ ಹೇಳಿದ ವಚನವೇ ಶ್ರೇಷ್ಠ. ಇದರ ಬದಲಾಗಿ ತೋರಿಕೆಯನ್ನು ಕುರಿತು ಓದಿದರೂ, ಬರೆದರೂ, ನುಡಿದರೂ ಎಲ್ಲವೂ ವ್ಯರ್ಥ.

ಅರಿವಿನ ಕುರಿತು ಹೇಳಿದ ವಾಣಿಯೇ ಗುರುವಚನ. ಇದೇ ಶೃತಿ. ಅದಕ್ಕೂ ಮೊದಲು ಅರುವು, ತನ್ನ ನಿಜ ಇರುವಿನ ಅರುವು. ಆದ್ದರಿಂದಲೇ "ತನ್ನ ನಿಜ ತಿಳಿದವನೇ ಜಾಣ" ಎಂದು ಹೇಳಿದ್ದಾಗಿದೆ. ಇದರ ಬದಲಾಗಿ ಈ ಮಲವೆರಡರ ಬೆಸುಗೆಯನ್ನು ತಾನೆಂದು ತಿಳಿದವನು ಅಜ್ಞಾನಿಯಲ್ಲವೇ? ಆದ್ದರಿಂದ ತನ್ನ ಮೊಟ್ಟ ಮೊದಲನೆಯ, ತನ್ನ ನಿಜ ಅರುವಿನ ಇರುವಿನ ಬಗ್ಗೆ ಹೇಳಿದ ನುಡಿಯೇ ಗುರುವಚನವು. ಇದು ಅನುಭವೈಕಗಮ್ಯವು. ಇದರ ಕಥನ, ಚಿಂತನ, ಕೀರ್ತನವನ್ನು ಸದಾವಕಾಲ ಮಾಡುವದೇ ಕೆಲಸ. ಇದು ಅತ್ಯಂತ ದುಃಖ ನಿವೃತ್ತಿಯನ್ನುಂಟು ಮಾಡುವದು. ಇದಕ್ಕಿಂತ ಶ್ರೇಷ್ಠ ವಚನವಿಲ್ಲ.

* * * *

## 5-3-1978 ರ ಸಂಜೆ

ಮೊದಲಿಗೆ ತನ್ನ ನಿಜದ ಅನುಭವ. ಈ ಅನುಭವಕ್ಕೆ ಅನುಸಾರವಾಗಿ ಹೇಳಿದ ವಾಣಿಯೇ ಗುರುವಚನ. ತನ್ನ ನಿಜದ ಅನುಭವದ ತಿಳುವಳಿಕೆಯೇ ತನ್ನ ಗುರು. ಕಲ್ಲಿನ ಗೊಂಬೆಯು ತನ್ನ ಗುರುವಲ್ಲ. ಸಾಕಷ್ಟು ಪುಸ್ತಕ ಓದಿದರೂ ವ್ಯರ್ಥ. ಹುಟ್ಟು ಪಾಕರಸದಲ್ಲಿದ್ದರೂ ಅದಕ್ಕೆ ಪಾಕರಸದ ರುಚಿಯಿಲ್ಲ. "ದರ್ವೀ ಪಾಕರಸಂ ಯಥಾ" ಎಂಬಂತೆ ಇದೆ. ಅದರಂತೆ ನಾಲಿಗೆ ಆನಂದಾನುಭವದ (ಶಾಸ್ತ್ರದ) ಮಾತುಗಳನ್ನು ಆಡಿದರೂ ಆನಂದದ ಅನುಭವ ಎಳ್ಳಷ್ಟೂ ಇಲ್ಲ. ಜಡ ಬುದ್ಧಿಯವರ ಸಂಗ, ಜಡಬುದ್ಧಿಯ ಸಂಗ ಹೋಗಬೇಕು. ಯಾರು ಯಾವದನ್ನು ನಂಬುವರೋ ಅವರು ಅದೇ ಆಗಿರುವರು. ಯಾರು ತಾವು ತ್ರಿಕಾಲಾಬಾಧ್ಯ ಸತ್ಯವೆಂದು ನಂಬುವರೋ ಅವರು ಅದೇ ಆಗಿರುವರು. ಸುಮ್ಮನೆ ಕಾಲವನ್ನು ವ್ಯರ್ಥವಾಗಿ ಕಳೆಯದೆ ನಿನ್ನ ನಿಜವನ್ನು ತಿಳಿ"ಟುಮಿಕಿ ಹೊಡೆಯುವ ವೇಳೆ ಸಮೀಪಕ ಬಂತು. ಸುಮಕ ಯಾಕ ಕುಂತಿ. ಅಮುಕ ವೇಳೆ ಹೋಗತದ, ಮುನ್ನೊಡೆ ಮಾಡಿಕೊ ನಿನ್ನ ಕೆಲಸ" ಎಂಬಂತೆ ಇದೆ. ಜಗತ್ತು ದುಃಖದಾಯಕವು, ನಿನ್ನ ನಿಜವು ಆನಂದದಾಯಕವು. ಜಗತ್ತು ಆನಂದದಾಯಕವಿದ್ದರೆ, ಜಗತ್ತನ್ನು ಬಿಟ್ಟು ನಿದ್ರೆಗೆ ಏಕೆ ಹೋಗುವಿ? ಆದ್ದರಿಂದ "ಪರಸ್ಥಳವು (ದೇಹವನ್ನೊಳಗೊಂಡ ಜಗತ್ತು) ಪ್ರಾಣಸಂಕಟ! ಸ್ವಸ್ಥಳವು (ತನ್ನ ನಿಜವು)ಸುಖಕರ" ಎಂದು ಹೇಳಿದ್ದಾಗಿದೆ. ತನ್ನ ನಿಜದ ಆನಂದವನ್ನು ಯಾರೂ ಕದಿಯಲಾರರು. "ತನ್ನ ನಿಜವನ್ನು ಬಿಟ್ಟು ಇನ್ನೊಂದಿಲ್ಲ" ಎಂಬುದು ನೆಲೆಗೊಂಡು ನಿಲ್ಲುವವರೆಗೆ ಎಲ್ಲ ರೀತಿಗಳಿಂದ ವಿಚಾರ ಮಾಡು. ಧ್ಯಾನಕ್ಕೆ ಕುಳಿತಾಗ "ಯಾಕೆ ವಿರತಿಯನುಳಿದು ಹೀನ ವಿಷಯಗಳೊಳು ಸುಳಿವೆ ಕಾಕು ಮಾನಸವೇ ನಿನಗದರೊಳೇನುಂಟು" ಎಂಬ ವಿಚಾರವು ನಡೆಯಬೇಕು. ಆದ್ದರಿಂದಲೇ "ನೋಡು ನೋಡು ನೀನೆ ಪರವೆಂದು ತತ್ತ್ವಗೂಡದೆ ವಿಲಕ್ಷಣನಾಗಿ ನಿಂದು"ಎಂದು ಮಹಾತ್ಮರು ಹೇಳಿದ್ದಾಗಿದೆ.

ಸುಖಕ್ಕಾಗಿ ಬೇಡಿಕೊಳ್ಳುವ ಕೆಲಸವೇ ಇಲ್ಲ. "ಸುಖವಂ ಕೊಡುವವರಾರ್ತನಗೆಂದು" ಎಂದು ಮಹಾತ್ಮರು ಹೇಳಿದ್ದಾರೆ. ಪ್ರಾರ್ಥನೆಯನ್ನು ಸಾಯುವವರೆಗೆ ಮಾಡಿಕೊಂಡರೂ ತನಗೆ ಬೇಕಾದ ಸುಖವನ್ನು ಯಾರೂ ಕೊಡುವದಿಲ್ಲವೆನ್ನುವದು ತಿಳಿಯುವದು ಅತಿ ಕಠಿಣವಿದೆ. ತಾನೇ ಸುಖವು, ಬೇಡಿಕೊಳ್ಳುವದೆಲ್ಲ ನಿರರ್ಥಕವೆಂದು ಯಾವ ನುಡಿಯು ಹೇಳುವದೋ ಅದೇ ಗುರುವಚನವು. ಆದ್ದರಿಂದಲೇ "ಸತ್ಯ ಜ್ಞಾನ ಸುಖಾತ್ಮಕನೆಂದು ನಿತ್ಯಂ ಪರಿಪೂರ್ಣಂ



ತಾನೆಂದು" ಎಂದು ಮಹಾತ್ಮರು ಹೇಳಿದ್ದಾರೆ.

ನಿನ್ನ ಊರು ಯಾವುದು? ನಿನ್ನ ಊರು ಮಣ್ಣೂರು ಅಲ್ಲ. ಆನಂದಮಯ ಇರುವೇ ನಿನ್ನ ಊರು. ಇದೇ ಗುರುವಚನ. ನೀನು ದೇಹ ಎಂದು ಹೇಳುವವರು ಗುರುಗಳೇ? ಅಲ್ಲ. ನೀವೆಲ್ಲರೂ ಸುಂದರರಿದ್ದೀರಿ. ನಿಮಗಿಂತ ಹೆಚ್ಚು ಸುಂದರರು ಯಾರಾದರೂ ಇರುವರೇ? ಇಲ್ಲ. ನೀನೇ ಸತ್ಯವು. ಸತ್ಯಕ್ಕಿಂತ ಹೆಚ್ಚು ಸುಂದರವಾದದ್ದು ಯಾವದು ಇದೆ? ಯಾವದೂ ಇಲ್ಲ. ಆದ್ದರಿಂದಲೇ "ಸತ್ಯಂ ಶಿವಂ ಸುಂದರಂ" ಎಂದು ಹೇಳಿದ್ದಾಗಿದೆ. (Truth is beauty and beauty is truth) ಜಡಶರೀರವು ಅಸಹ್ಯಾಳವಿದೆ. ಜಗತ್ತು ದುಃಖಮಯವಿದೆ. ನೀನು ಮಾತ್ರ ಸುಂದರನಿರುವಿ. ಆದ್ದರಿಂದ ಜಗತ್ತಿನ ಮತ್ತು ದೇಹದ ಭಾವವನ್ನು ಬಿಡು. ನಿನ್ನ ಆನಂದಮಯ ಇರುವಿನ ಭಾವವನ್ನು ಹಿಡಿ. ಆನಂದಮಯ ಇರುವೇ ನಿನ್ನ ಊರು. ಹೀಗೆ ಹೇಳುವ ವಚನವೇ ಗುರುವಚನವು.

ನಿನ್ನ ಆನಂದಮಯ ಇರುವನ್ನು ಊಹಿಸಲಿಕ್ಕೆ ಬರುವದಿಲ್ಲ. ಅದು ಇಂದ್ರಿಯಗಳಿಗೂ, ಮನಸ್ಸಿಗೂ ಅಗೋಚರವು. ಆದರೂ ಬ್ರಹ್ಮನಿಷ್ಠರು ಒಂದು ಯುಕ್ತಿಯಿಂದ ಹೇಳುತ್ತಾರೆ. ಆದ್ದರಿಂದಲೇ "ಸುಜನ ಶಿರೋಮಣಿ ಶಿಷ್ಯನೆ ನಿನ್ನ ನಿಜವೂಹಿಸಬಾರದು ಸಂಪನ್ನ । ಅದು ವಚನಕೆ ಗೋಚರಮಲ್ಲೆಂದು, ಅದು ಮಾನಸಕೆ ವಿಷಯಮಲ್ಲೆಂದು ಪೇಳುತ್ತಂ ಮತ್ತೊಂದನುವಿಂದ ಕೇಳುಪದೇಶಿಸಬೇಕದರಿಂದ" ಎಂದು ಮಹಾತ್ಮರು ಹೇಳಿದ್ದಾರೆ. ಓದಿದರೆ ಓದಬೇಕು ಆತ್ಮವಿದ್ಯೆಯನ್ನು, ಕೇಳಿದರೆ ಆತ್ಮಾನುಭವಿಯ ಯುಕ್ತಿವಚನಗಳನ್ನು ಕೇಳಬೇಕು. ಹೇಳುವದಾದರೆ ಇಂಥ ಆತ್ಮಾನುಭವಿಯ ಯುಕ್ತಿವಚನಗಳನ್ನೇ ಉತ್ಸುಕರಾದವರಿಗೆ ಹೇಳಬೇಕು. ಇದರಿಂದ ತನ್ನ ನಿಜವನ್ನು ತಿಳಿಯುವದಕ್ಕಾಗಿ ವಿವೇಕವು ಉದಯವಾಗುವದು. ಇದರಿಂದ ತನ್ನ ನಿಜವು ತಿಳಿದು ನಿಜಸುಖವು ದೊರೆಯುವದು ಮತ್ತು ಪರಿಪೂರ್ಣ ತೃಪ್ತಿಯಾಗುವದು. ಆದ್ದರಿಂದ ಕಂಡ ಕಂಡವರ ಮಾತು ಕೇಳಬೇಡ. ಬ್ರಹ್ಮನಿಷ್ಠರ ಮಾತುಗಳನ್ನು ಮಾತ್ರ ಕೇಳು. ಇವೇ ಗುರುವಚನಗಳು. ಇಂಥ ಗುರುವಚನಗಳೇ ಅತಿ ಶ್ರೇಷ್ಠವಾದವು.

" ನಾನು ಎಂಬ ಭಾವವು ತನ್ನ ನಿಜದಿಂದಲೇ ಉದಯವಾಗಿದೆ. ಬೇರೆ ಬೇರೆ ಜೀವಿಗಳ ಅಂತಃಕರಣಗಳು ಭಿನ್ನವಾದರೂ "ನಾನು" ಎಂಬ ಭಾವವು ಮಾತ್ರ ಒಂದೇಯಾಗಿದೆ. "ನಾನು" ಎಂಬ ಭಾವವು ಎಲ್ಲಿಂದ (ತನ್ನ ನಿಜದಿಂದ) ಉದಯವಾಗಿದೆಯೋ ಅಲ್ಲಿ ಲಯವಾದರೆ ಜೀವನ ಯಾತ್ರೆಯು ಮುಗಿಯುವದು.

ಆದ್ದರಿಂದ ಆನಂದಾಗಿ ಉಳಿಯುವದೇ ಕೆಲಸ. ಇವೇ ಗುರುವಚನಗಳು. ಆದ್ದರಿಂದ ಇಂಥ ಗುರುವಚನಗಳು ಅತಿ ಶ್ರೇಷ್ಠವಾದವು.

"ನಾನು ಎಂಬ ಭಾವವು ತನ್ನ ನಿಜದಿಂದಲೇ ಉದಯವಾಗಿದೆ. ಬೇರೆ ಬೇರೆ ಜೀವಿಗಳ ಅಂತಃಕರಣಗಳು ಭಿನ್ನವಾದರೂ "ನಾನು"ಎಂಬ ಭಾವವು ಮಾತ್ರ ಒಂದೇಯಾಗಿದೆ. "ನಾನು" ಎಂಬ ಭಾವವು ಎಲ್ಲಿಂದ (ತನ್ನ ನಿಜದಿಂದ) ಉದಯವಾಗಿದೆಯೋ ಅಲ್ಲಿ ಲಯವಾದರೆ ಜೀವನ ಯಾತ್ರೆಯು ಮುಗಿಯುವದು. ಆದ್ದರಿಂದ ಆನಂದಾಗಿ ಉಳಿಯುವದೇ ಕೆಲಸ. ಇವೇ ಗುರುವಚನಗಳು. ಆದ್ದರಿಂದ ಇಂಥ ಗುರುವಚನಗಳು ಅತಿ ಶ್ರೇಷ್ಠವಾದವು.

ಬಹುಜನ್ಮಗಳ ನಂತರ ನಮ್ಮ ನಿಜವನ್ನು ಹೊಂದಲು ಸಾಧ್ಯವಾಗುವದು. ಆದ್ದರಿಂದಲೇ ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ "ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ। ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ॥" ಎಂದು ಹೇಳಿದ್ದಾನೆ. ಹಿಂದಿನ ಜನ್ಮದಲ್ಲಿ ಯಾರಿಗೆ ತನ್ನ ನಿಜವನ್ನು ತಿಳಿದುಕೊಳ್ಳುವ ಅಭ್ಯಾಸವು ತೀವ್ರವಾಗಿ ನಡೆದಿತ್ತೋ ಅಂಥವರಿಗೆ ಮಾತ್ರ ಈ ಜನ್ಮದಲ್ಲಿ ತಮ್ಮ ನಿಜವನ್ನು ಹೊಂದುವದು ಸಾಧ್ಯವು. ನೀನು ಯಾರು ಎಂದಾಗ ಒಮ್ಮೆಲೇ ಶರೀರಭಾವ ಬರುತ್ತದೆ. ಆನಂದಮಯ ಇರುವಿನ ಭಾವವು ಯಾರಿಗೆ ಬರುತ್ತದೆ? ಕ್ವಚಿತ್ ಎಲ್ಲಿಯೋ ಯಾರಿಗೋ ಒಬ್ಬರಿಗೆ ಬರಬಹುದು. ಎಷ್ಟೇ ಶಾಸ್ತ್ರ ಓದಿದರೂ, ಕೇಳಿದರೂ, ಹೇಳಿದರೂ ಶರೀರದ ರೂಪ, ನಾಮಗಳ ಮರವೆಯಾಗುವದಿಲ್ಲ. ಯಾಕೆಂದರೆ ಅನೇಕ ಜನ್ಮಗಳಿಂದ ಶರೀರದ ನಾಮ, ರೂಪಗಳ ಸಂಸ್ಕಾರವು ಬಂದದ್ದಾಗಿದೆ. ಹಿಂದಿನ ಜನ್ಮದ ಕರ್ಮ ಮತ್ತು ಸಂಸ್ಕಾರಗಳಿಗೆ ಅನುಗುಣವಾಗಿ ಮುಂದಿನ ಜನ್ಮವು ಬರುತ್ತದೆ. ತನ್ನ ನಿಜವನ್ನು ತಿಳಿದಾಗ ಎಲ್ಲ ಮೋಹವೂ ಕತ್ತರಿಸಿ ಹೋಗುವದು. ಬಂಧನ ವಿಮೋಚನೆಯಾಗುವದು. ಸಂಪೂರ್ಣ ತೃಪ್ತಿಯಾಗುವದು. ಇಲ್ಲಿಗೆ ಜೀವನಯಾತ್ರೆಯು ಮುಗಿದು ಪುನರ್ಜನ್ಮವು ಬರುವದಿಲ್ಲ. ಇಂಥ ನುಡಿಗಳೇ ಗುರುವಚನಗಳು. ಆದ್ದರಿಂದ ಇಂಥ ಗುರು ವಚನಕ್ಕಿಂತ ಹೆಚ್ಚಿನ ಅಮೃತವು ಯಾವುದಾದರೂ ಇದೆಯೇ? ಇಲ್ಲ.

* * * *



6-3-1978 ರ ಸಂಜೆ

## ರಾಗದಿಂ ಬೇರೆ ಭವಬೀಜಮುಂಟೆ

ರಾಗವೆಂದರೆ ಪ್ರೀತಿ. ಯಾವದರ ಪ್ರೀತಿ? ವಿಷಯಗಳ ಮೇಲಿನ ಪ್ರೀತಿ. ವಿಷಯಗಳ ಮೇಲೆ ಪ್ರೀತಿ ಏಕೆ? ವಿಷಯಗಳು ಸುಖವನ್ನು ಕೊಡುತ್ತವೆಂದು ಈ ವಿಚಾರವು ದೃಢವಾಗಿದೆ. ಎಲ್ಲಿಯವರೆಗೆ ವಿಷಯಗಳಿಂದ ಸುಖವು ಸಿಗುತ್ತದೆ ಎಂಬ ತಿಳುವಳಿಕೆಯಿದೆಯೋ ಅಲ್ಲಿಯವರೆಗೆ ಒಂದರ ನಂತರ ಒಂದು ಹೀಗೆ ಅನೇಕ ಜನ್ಮಗಳನ್ನು ಪಡೆಯುವದು ನಡೆಯುತ್ತದೆ. ಭವ ಎಂದರೆ ಆಗುವಿಕೆ (ಒಂದರ ನಂತರ ಒಂದು ಹೀಗೆ ಅನೇಕ ಜನ್ಮಗಳನ್ನು ಪಡೆಯುವಿಕೆ) ವಿಷಯಗಳಿಂದ ಸುಖವು ಸಿಗುವದಿಲ್ಲ ಎಂಬ ತಿಳುವಳಿಕೆ ಯಾರಿಗೆ ನಿಶ್ಚಿತವಾಗಿದೆಯೋ ಅವರು ಮತ್ತೆ ಜನ್ಮ ಪಡೆಯುವದಿಲ್ಲ. ಆದ್ದರಿಂದ ವಿಷಯಗಳಿಂದ ಸುಖವು ಸಿಗುವದೆಂದು ವಿಷಯಗಳ ಮೇಲಿನ ಪ್ರೇಮವೇ ಜನ್ಮಗಳನ್ನು ಪಡೆಯುವದಕ್ಕೆ ಮೂಲ ಕಾರಣವಾಗಿದೆ.

ಪ್ರತಿಯೊಬ್ಬರು ಶರೀರವನ್ನು ಅತಿಯಾಗಿ ಪ್ರೀತಿಸುತ್ತಾರೆ. ಏಕೆ ಎಂದು ಕೇಳಿದರೆ ಅದು ಸುಖವನ್ನು ಕೊಡುವದು ಎಂದು ಉತ್ತರಿಸುತ್ತಾರೆ. ಶರೀರವೇ ತಾನೆಂಬ ತಿಳುವಳಿಕೆ ನೆಲೆಯಾಗಿ ನಿಂತಿದೆ. ಆದ್ದರಿಂದಲೇ ಶರೀರದ ಮೇಲೆ ಕಡುಮೋಹ ಇದೆ. ಶರೀರವು ಸುಖವನ್ನು ಕೊಡುವದೇ? ಶರೀರವು ಜೀರ್ಣವಾಗುವದು, ಕ್ಷೀಣವಾಗುವದು. ಅದು ಅದರ ಗುಣವು. ಅದು ಜೀರ್ಣವಾಗುವದಲ್ಲಾ! ಕ್ಷೀಣವಾಗುವದಲ್ಲಾ! ಎಂದು ಚಿಂತಿಸುವನು. ಶರೀರವು ಹೋಗದ ಆಗರವು. ಶರೀರವು ರೋಗಪೀಡಿತವಾಗಿ ಬಹುದುಃಖವನ್ನು ಕೊಡುವದು. ಶರೀರವು ಹೋದೀತೆಂಬ ಭಯವಿದೆ. ಈ ಭಯದಿಂದ ಅತಿ ದುಃಖವು. ಅಂದ ಮೇಲೆ ಶರೀರ ಭಾವವೇ ದುಃಖಕರವೆಂದು ಸುಸ್ಪಷ್ಟವಿದೆ. ಶರೀರದ ಮಾನದ ಮೋಹವು ದುಃಖಕ್ಕೆ ಕಾರಣವಾಗುವದು. ಶರೀರವು ಜನ್ಮ-ಜನ್ಮಾಂತರವೂ ದುಃಖವನ್ನೇ ಕೊಡುತ್ತ ಬಂದಿದೆ. ಮುಂದೆಯೂ ಕೊಡುವದು. ಇಂಥ ಶರೀರ ಮೋಹವೇ ರಾಗ. ಈ ರಾಗವೇ ಭವಕ್ಕೆ ಕಾರಣ, (ಪುನಃ ಹುಟ್ಟುವಿಕೆಗೆ ಕಾರಣವಾಗುವದು.) ರಾಗವಿಲ್ಲದಿದ್ದರೆ ಪುನರ್ಜನ್ಮವಿಲ್ಲ.

ಮಾನವ ಜನ್ಮವು ದುರ್ಲಭವು. ಮಾನವ ಜನ್ಮ ಬಂದರೂ ಆತ್ಮವಿಚಾರವು ದುರ್ಲಭವು. ಆತ್ಮವಿಚಾರ ಇದ್ದರೂ ಆತ್ಮಾನುಭೂತಿಯು ಅತಿ ದುರ್ಲಭವು. ವಿಷಯಗಳು ಸುಖ ಕೊಡುವವು ಎಂಬ ತಿಳುವಳಿಕೆಯಿಂದ ಅವುಗಳ ಮೇಲೆ ರಾಗವಿದೆ.

ರಾಗವನ್ನೇ ಕಲಿಯುವದು, ರಾಗವನ್ನೇ ಹೇಳುವದು, ರಾಗವನ್ನೇ ಕೇಳುವದು ನಡೆದಿದೆ. ವಿಷಯಗಳ ಭೋಗದಿಂದ ತೃಪ್ತಿಯನ್ನು ಹೊಂದುವದು ಅಸಾಧ್ಯವು. ವಿಷಯಗಳನ್ನು ಭೋಗಿಸಿದಂತೆ ಆಸಕ್ತಿಯೇ ಹೆಚ್ಚಾಗುವದು. ವಿಷಯಗಳ ಭೋಗದಿಂದ ಆರಾಮವಾಯಿತು, ಸಾಕು ಎಂದು ಯಾರಾದರೂ ಅನ್ನುವರೇ? ಸಾಧ್ಯವೇ ಇಲ್ಲ. ವಿಷಯೇಂದ್ರಿಯ ಸಂಪರ್ಕಭೋಗವು ಸುಖವನ್ನು ಕೊಡಲಾರದು ಎಂದು ಎಲ್ಲಿಯವರೆಗೆ ತಿಳಿಯಲಾರದೋ ಅಲ್ಲಿಯವರೆಗೆ ರಾಗವಿರುವದೇ ಸರಿ. ದೇಹಭಾವವಿಲ್ಲದ ನಿದ್ರೆ ಆರಾಮವೋ? ದೇಹಭಾವವಿದ್ದ ಎಚ್ಚರವು ಆರಾಮವೋ? ನಿದ್ರೆಯೇ ಆರಾಮವು. ಆದ್ದರಿಂದ ದೇಹದ ಮೋಹ ಹೋಗಬೇಕು. ತಾನು ನಿಜವಾಗಿ ಯಾರು ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸುವಾಗ ದೇಹ ಭಾವವೂ ಹೋಗಬೇಕು. (ಆಗ ಮಾತ್ರ ದೇಹದ ಮೋಹವು ಹೋಗುವದು) ದೇಹ ಭಾವ ಹೋಗಿ ಸಚ್ಚಿದಾನಂದ ಭಾವವಿದ್ದಾಗಲೇ ಸುಖವು.

ಈ ಜೀವನದಿಂದ ಪೂರ್ಣ ಸುಖಿಯಾದವರು ಯಾರಾದರೂ ಇದ್ದಾರೆಯೇ? ಇಲ್ಲ. ಜೀವನವು ಸಮವಿಲ್ಲ. ಬಾಳ್ವೆಯು ದುಃಖವನ್ನು ಕೊಡುತ್ತದೆಯೋ? ಸುಖವನ್ನು ಕೊಡುತ್ತದೆಯೋ? ಬಾಳ್ವೆಯು ದಣಿವನ್ನೇ ಕೊಟ್ಟದ್ದರಿಂದ ದಣಿದು ವಿಶ್ರಾಂತಿಗಾಗಿ ನಿದ್ರೆಗೆ ಹೋಗುತ್ತೇವೆ. ಶರೀರಕ್ಕೆ ರೋಗ ಬಂದರೆ ಬಳಲುತ್ತಾನೆ. ನಿದ್ರೆ ಹತ್ತಿದರೆ ಆ ಶರೀರದ ಬಳಲಿಕೆ ಇಲ್ಲ. ಆದರೂ ಈ ಸಂಕಟದ ಬಾಳ್ವೆಯೇ ನಮಗೆ ಬೇಕಾಗಿದೆ. ಶರೀರ ಸಾಯುತ್ತದೆ. ಅಂದರೆ ಬಾಳ್ವೆಯು ಹೋಗುತ್ತದೆ ಅನ್ನುತ್ತೇವೆ. ಬಾಳ್ವೆಯ ಮೋಹವನ್ನು ಬಿಡದೆ ಶರೀರವನ್ನು ಬಿಡುತ್ತಾನೆ. ಈ ಮೋಹವೇ ಮತ್ತೆ ಜನ್ಮಕ್ಕೆ ಕಾರಣವಾಗುತ್ತದೆ. ಹೀಗೆ ಬೇರೆ ಬೇರೆ ಜನ್ಮಗಳಲ್ಲಿ ಬೇರೆ ಬೇರೆ ಶರೀರಗಳನ್ನು ಧಾರಣ ಮಾಡುವದೇ ಮುಂದುವರಿಯುತ್ತದೆ. ಹೀಗೆ - ಎಲ್ಲ ಜನ್ಮಗಳು ದುಃಖಮಯವೇ ಆದ್ದರಿಂದ ಮೊದಲು ಬಾಳ್ವೆಯು ಸಂಕಟಮಯವೆಂಬುದು ಹೊಳೆಯಬೇಕು. ಈ ಬಾಳ್ವೆಯ ರಾಗವೇ ಭವಕ್ಕೆ ಕಾರಣವಾಗಿದೆ.

ಹಣ, ಮಕ್ಕಳ, ಮಾನದ ಮೋಹವು ನಮಗಿದೆ. ಈ ಮೋಹವೇ ದುಃಖಕ್ಕೆ ಕಾರಣವೆಂಬುದು ತಿಳಿದಿಲ್ಲ. ನಾವು ಹುಟ್ಟಿದಂದಿನಿಂದ ಇದನ್ನೇ ಕಲಿತಿದ್ದೇವೆ. ಇದನ್ನೇ ನಮ್ಮ ಮಕ್ಕಳಿಗೆ ಚಿಕ್ಕಂದಿನಿಂದಲೇ ಕಲಿಸುತ್ತೇವೆ. ಇದೇ ಮೋಹಜಾಲ. ಯೌವನದಲ್ಲಿ ತರುಣ-ತರುಣಿಯರು ಮೋಹಜಾಲದಲ್ಲಿ ಬೀಳುವರು. ಒಮ್ಮೆ ಈ ಜಾಲವನ್ನು ಪ್ರವೇಶಿಸಿದರೆ ಹೊರಗೆ ಬರುವದು ಅತಿ ಕಠಿಣವಿದೆ. ಮದುವೆಯು ಒಂದು ಜಾಲವು.



ಮದುವೆಯಾದ ಮೇಲೆ ಜಾಲದಲ್ಲಿ ಬಿದ್ದದ್ದು ತಿಳಿಯುವದು. ಈ ಜಾಲದಲ್ಲಿ ಬಿದ್ದವರು ಜಾಲದಿಂದ ಹೊರಗೆ ಬರಲು ಪ್ರಯತ್ನಿಸುವರು ಮತ್ತು ಜಾಲದಲ್ಲಿ ಬೀಳದವರು ಜಾಲದಲ್ಲಿ ಬೀಳಲು ಪ್ರಯತ್ನಿಸುವರು. "ಏಕ ಸುಖಿ, ದೋ ದುಃಖಿ" ಎಂದು ಹೇಳಲು ಬರುತ್ತದೆ. ಆದರೆ ಅದನ್ನು ಅನುಭವಕ್ಕೆ ತೆಗೆದುಕೊಳ್ಳುವದು ಅತಿ ಕಠಿಣವಿದೆ.

ಶರೀರದೊಳಗಿದ್ದು ಇಲ್ಲದಂತಿರಬೇಕು. ಪ್ರಪಂಚದಲ್ಲಿ ಇದ್ದು ಇಲ್ಲದಂತಿರಬೇಕು. ಶರೀರವು ನೀನಲ್ಲ. ಶರೀರವು ನಿನಗಿಲ್ಲ. ಆ ಶರೀರದ ಗುಣಧರ್ಮಗಳು ನಿನಗಿಲ್ಲ. ಶರೀರವು ಪರಿಣಾಮಿಯು, ಅನಿತ್ಯವು, ಜಡವು, ಪರಿಚ್ಛಿನ್ನವು, ನೀನು ಅವಿಕಾರಿಯು, ಅಜಡನು, ನಿತ್ಯನು ಸರ್ವವ್ಯಾಪಿಯು ಇರುವಿ. ನಿನಗೂ ಶರೀರಕ್ಕೂ ಏನೂ ಸಂಬಂಧವಿಲ್ಲ. ನೀನು ಶರೀರವನ್ನು ತಿಳಿಯುವಿ. ಆದರೆ ಶರೀರವು ನಿನ್ನನ್ನು ತಿಳಿಯಲಾರದು. ಆದ್ದರಿಂದ ಅರಿವಿಗೂ ಶರೀರಕ್ಕೂ ಏನೂ ಸಂಬಂಧವಿಲ್ಲ. "ನೀನನ್ಯವೆನಗೆ ಎನ್ನೊಡನೆ ಸಮರಸವೇ ಎಲೆ ದೇಹವೇ ನೀನೇ ಮಣ್ಣು ನಾನಹೆ ವಸ್ತು." ಎಂದು ಮಹಾತ್ಮರು ಹೇಳಿದ್ದಾರೆ. ಆದ್ದರಿಂದ ದುಃಖಮಯವಾದ ಶರೀರದ ಮೋಹಕ್ಕೆ ಬಿದ್ದು ಶರೀರಸ್ಥನಾಗದೆ ಸುಖಕರವಾದ ನಿನ್ನ ನಿಜದ ಇರುವಿನಲ್ಲಿ ಉಳಿ! ಅಂದಾಗ ಮಾತ್ರ ರಾಗವು ನಾಶವಾಗಿ ಭವವೂ ನಾಶವಾಗುವದು.

* * * *

### 3-3-1978 ರ ಮುಂಜಾನೆ

ಸರ್ವರೂ ಉಳಿದವರನ್ನು ತಮ್ಮಂತೆಯೇ ಪರಿವರ್ತಿಸಲು ಪ್ರಯತ್ನಿಸುವರು. ರಾಕ್ಷಸಿ ವೃತ್ತಿಯವರು ನಮ್ಮನ್ನು ರಾಕ್ಷಸಿವೃತ್ತಿಗೆಳಸುವರು. ಅವರ ಸಂಗವನ್ನು ಬಿಡುವದೇ ಮೊದಲನೆಯ ಮೆಟ್ಟಲು. ವಿಷಯವೃತ್ತಿಯು ರಾಕ್ಷಸಿ ವೃತ್ತಿಗೆಳಸುವದು. ಆದ್ದರಿಂದ ವೈಷಯಿಕ ಜನರ ಸಂಗವನ್ನು ತ್ಯಜಿಸಬೇಕು. ಸತ್ಸಂಗವನ್ನು ಹೊಂದಬೇಕು. (ಬ್ರಹ್ಮನಿಷ್ಠರ ಸಂಗ) ಅವರ ಸಂಗವನ್ನು ಪಡೆಯುವದರಿಂದ ಮುಕ್ತಿಯ ಬಗ್ಗೆ ಇಚ್ಛೆಯು ಉಂಟಾಗುವದು. ಮುಕ್ತಿಯನ್ನು ಹೊಂದಲು ಇಹಪರದ ಭೋಗದ ಬಗ್ಗೆ ವೈರಾಗ್ಯವು ಉಂಟಾಗಬೇಕಾಗುವದು. ಸತ್ಸಂಗದಲ್ಲಿದ್ದು ವಿಚಾರಪರನಾದರೆ ಇದು ಸಾಧಿಸುವದು. ಆದ್ದರಿಂದ ನಮ್ಮ ನಿಜಸ್ವರೂಪ ಹೊಂದುವವರೆಗೆ ಸತ್ಸಂಗವು

ಅತ್ಯವಶ್ಯವಾಗಿದೆ. ಇಲ್ಲವೆ ಮಧ್ಯದಲ್ಲಿಯೇ ಸಾಧನದಿಂದ ಪತನವಾಗುವ ಸಂಭವವಿದೆ. ನೇಮಪಾಲನೆ ಮಾಡುವದರಿಂದ ಮನಸ್ಸು ಶಾಂತವಾಗುವದು. ನೇಮವನ್ನು ತ್ಯಜಿಸುವದರಿಂದ ಮನಸ್ಸು ಚಂಚಲವಾಗುವದು. ಆದ್ದರಿಂದ ನಿಯಮಗಳ ಪಾಲನೆ ಮಾಡಿ ನಿಯಮಗಳನ್ನು ಮೀರಬೇಕು. ಬ್ರಹ್ಮನಿಷ್ಠರು ಪ್ರವಚನಗೈಯುವಾಗ ದೇವಾನುದೇವತರು, ಬ್ರಹ್ಮರಾಕ್ಷಸರು ಬಂದು ಕೈ ಮುಗಿದುಕೊಂಡು ನಿಂತಿರುವರು.

* * * *

## 4-3-1978 ರ ಮುಂಜಾನೆ

ಪಂಚಜ್ಞಾನೇಂದ್ರಿಯಗಳ ಜ್ಞಾನವೆಲ್ಲ ವಿಶ್ವದ ತಿಳುವಳಿಕೆಯು. ಇದು ಅಧ್ಯಾಸದೊಳಗಿನ ತಿಳುವಳಿಕೆಯು. ಇದು ನಮ್ಮ ನಿಜವಾದ ಇರುವನ್ನು ತಿಳಿದುಕೊಳ್ಳುವದಕ್ಕೆ ಏನೂ ಪ್ರಯೋಜವಾಗುವದಿಲ್ಲ ಮತ್ತು ನಮಗಿರುವ ದುಃಖವು ನಾಶವಾಗುವದಿಲ್ಲ. ನಿದ್ರೆ ಮತ್ತು ರಾಗದ ವಿಷಯಗಳ ಉಪಾಧಿಗಳಿಂದಲೇ ನಾವು ಸುಖವನ್ನು ಅನುಭವಿಸುತ್ತಿದ್ದೇವೆ. ಆದರೆ ಅದು ಕ್ಷಣಿಕವು. ಶಾಶ್ವತವಾಗಿ ಉಳಿಯುವದಿಲ್ಲ. ನಮಗೆ ಶಾಶ್ವತವಾದ ಆನಂದವು ಬೇಕಾಗಿದೆ. ಈ ಶಾಶ್ವತ ಆನಂದವು ನಿರುಪಾಧಿಕವು. ನಿದ್ರೆಯಲ್ಲಿ ಮರವೆಯಿಂದ ಆನಂದವನ್ನು ಪಡೆಯುತ್ತೇವೆ. ನಮಗೆ ಅರಿಯುತ್ತ ಆನಂದವನ್ನು ಪಡೆಯಬೇಕಾಗಿದೆ. ಆದ್ದರಿಂದಲೇ ನಿದ್ರೆಯನ್ನು ಮೀರಬೇಕಾಗಿದೆ. ಅರಿವಿನಿಂದ ಆನಂದ ಪಡೆದ ಅನುಭವವಿದೆ. ಆದರೆ ಅದು ಮರೆತು ಹೋಗಿದೆ. ಅದನ್ನು ಪರಿಶೀಲಿಸಿ ನೆನಪಿಗೆ ತೆಗೆದುಕೊಳ್ಳಬೇಕಾಗಿದೆ. ನಿದ್ರೆಗೆ ಹೋಗುವಾಗ ಎಲ್ಲವನ್ನು ಅಡಗಿಸುವಂತೆ ತುರಿಯಕ್ಕೆ ಹೋಗುವಾಗ ವಿಶ್ವವೆಲ್ಲವೂ ನಿರುಪಯುಕ್ತವೆಂದು ತಿಳಿದು ತನ್ನ ನಿಜದ ಕಡೆಗೆ ಲಕ್ಷವು ಹರಿಯಬೇಕು. ಏನೂ ತೋರಬಾರದು. ನಿದ್ರೆ ಹತ್ತಬಾರದು. ವ್ಯವಹಾರಿಕ ಎಚ್ಚರಿಕೆ ಇರಬಾರದು. ಕನಸೂ ಇರಬಾರದು. ಇದೇ ಸಾಧನವು, ಎಚ್ಚರಿಕೆ ಕನಸುಗಳು ಅನಾದಿ ಮಾಯೆಯೆಂಬ ನಿದ್ರೆಯಲ್ಲಿಯ ಕನವರಿಕೆಯು. "ಯದಾ ಅನಾದಿ ಮಾಯಾ ಸುಪ್ತಃ ಜೀವಃ ಪ್ರಭುದ್ಧೋ ಭವತಿ ತದಾ ಆತ್ಮ ನಿರ್ವಾಣಂ ಅಧಿಗಚ್ಛತಿ" ಎಂಬಂತೆ ಇದೆ. ಕಾಮವು ಜೀವನ ವೈರಿಯಲ್ಲ. ತನ್ನ ನಿಜದ ಅಜ್ಞಾನವೇ ಇವನ ವೈರಿಯು ಕಾಮವು ಅನಂತರ ವೈರಿಯು. ತನ್ನ ನಿಜದ ಬಗ್ಗೆ ಇರುವ ಅಜ್ಞಾನವೆಂಬ ವೈರಿಯನ್ನು ಗೆಲ್ಲುವದೇ (ಸಾಧನೆಯು) ಮುಖ್ಯವು.

* * * *



## 6-3-1978 ರ ಮುಂಜಾನೆ

ಕರ್ಮದಿಂದ ಏನೂ ಪ್ರಯೋಜನವಿಲ್ಲ. ಕರ್ಮದಿಂದ ದುಃಖನಿವೃತ್ತಿಯಾಗುವದಿಲ್ಲ. ಏಕೆಂದರೆ ಕರ್ಮವನ್ನು ಮಾಡದಿರುವದರಿಂದ ದುಃಖವು ಬಂದಿಲ್ಲ. ತನ್ನ ನಿಜದ ಅಜ್ಞಾನದಿಂದ ದುಃಖವು ಬಂದಿದೆ. ಆದ್ದರಿಂದ ತನ್ನ ನಿಜವೇನು ಎಂಬುದನ್ನು ತಿಳಿದುಕೊಳ್ಳುವದರಿಂದಲೇ ದುಃಖದಿಂದ ಪಾರಾಗಲು ಬರುತ್ತದೆ. ಕರ್ಮಫಲವು ಅನಿತ್ಯವು. ಏಕೆಂದರೆ ಕರ್ಮಜನ್ಯವಾದ ದೇಹವೇ ಉಳಿಯುವದಿಲ್ಲವೆಂದ ಮೇಲೆ ದೇಹದ ಕರ್ಮದ ಫಲವು ಹೇಗೆ ಉಳಿದೀತು. ಆದ್ದರಿಂದ ಕರ್ಮವು ದುಃಖವನ್ನುಂಟು ಮಾಡುವ ಸ್ವರೂಪದ್ದಾಗಿದೆ. ಆದ್ದರಿಂದಲೇ "ಪರಿಯದು ಕರ್ಮದಿಂದಬಲೆ ಸಂಸೃತಿ ತನ್ನನರಿದೊಡೆ ಮುಕ್ತಿ. ಮರೆಯೆ ಬಂಧ" ಎಂದು ಮಹಾತ್ಮರು ಹೇಳಿದ್ದಾಗಿದೆ. ಎಲ್ಲಿಯವರೆಗೆ ಶರೀರವು ತಾನಲ್ಲ, ಸಚ್ಚಿದಾನಂದನು ತಾನು ಎಂದು ತಿಳಿಯುವದಿಲ್ಲವೋ, ಅಲ್ಲಿಯವರೆಗೆ ಕೋಟಿ ಜನ್ಮಗಳಲ್ಲಿ ಉಗ್ರ ತಪಸ್ಸಿಯಾದರೂ ಏನೂ ಪ್ರಯೋಜನವಿಲ್ಲ.

ಜಾಗ್ರವೆಲ್ಲವೂ ಕನಸಿನಂತೆ, ಅಸ್ತಿತ್ವವಿಲ್ಲದ್ದು, ಜಾಗ್ರದಲ್ಲಿ ನಡೆಯುವ ಭೋಗಗಳೂ ಕೂಡ ಕನಸಿನಲ್ಲಿ ನಡೆಯುವ ಭೋಗಗಳಂತೆ ಅಸ್ತಿತ್ವವಿಲ್ಲದವುಗಳು. ಅಂದ ಮೇಲೆ ಜಾಗ್ರದ ವಿಷಯಗಳ ಮೇಲೆ ರಾಗವೇತಕೆ? ಶರೀರವೇ ನೀನಲ್ಲವೆಂದ ಮೇಲೆ ಶರೀರದ ಬಗ್ಗೆ ನಿನಗೆ ಚಿಂತೆ ಯಾತಕೆ?

ಅತ್ಯಂತ ದುಃಖ ನಿವೃತ್ತಿ, ಪರಮಾನಂದ ಪ್ರಾಪ್ತಿಯ ಬಗ್ಗೆ ಬ್ರಹ್ಮನಿಷ್ಠರಿಂದ ಕೇಳಿದ ಮೇಲೆ, ಅದರ ಬಗ್ಗೆ ಮನನವು ನಿರಂತರವಾಗಿ ನಡೆಯಬೇಕು. ಒಂದು ವೇಳೆ ಮನನದ ಅಭ್ಯಾಸವು ನಡೆಯದಿದ್ದರೆ ನಾವು ಮೊದಲಿನ ಹೀನ ವಾಸನೆಗಳಿಗೆ ಒಳಗಾಗಿ ಅತಿ ಹೀನ ಸ್ಥಿತಿಯನ್ನು ಹೊಂದುವೆವು.

ಇಂದ್ರಿಯಗಳಿಗೆ ಭೋಗವನ್ನು ಕಲಿಸಬಾರದು. ಇಂದ್ರಿಯಗಳ ಭೋಗದಿಂದ ಇಂದ್ರಿಯಗಳ ಲಾಲಸೆ ಹೆಚ್ಚುವದು. ಭೋಗಿಸಿದಂತೆ ಇಂದ್ರಿಯಗಳ ಲಾಲಸೆಯು ತೃಪ್ತಿಯಾಗದೆ ಲಾಲಸೆಯು ಹೆಚ್ಚುತ್ತಲೇ ಹೋಗುವದು. ಕಡೆಗೆ ಇಂದ್ರಿಯಗಳು ಜರ್ಜರಿತವಾಗುವವು. ಆದ್ದರಿಂದ ಇಂದ್ರಿಯಗಳ ವಿಜಯವನ್ನು ಸಂಪಾದಿಸಲು ಪ್ರಯತ್ನಿಸಬೇಕು. ಇದನ್ನು ಸಾಧಿಸುವದು ಅತಿ ಕಠಿಣವಿದೆ. ಸಾವಿರ ಜನರಲ್ಲಿ ಒಬ್ಬನು ಪ್ರಯತ್ನ ಮಾಡುವನು. ಪ್ರಯತ್ನ ಮಾಡುವ ಸಾವಿರಲ್ಲಿ ಒಬ್ಬನು ಇಂದ್ರಿಯಗಳ ವಿಜಯವನ್ನು ಸಂಪಾದಿಸುವನು. ಈ ರೀತಿಯಾಗಿ ಹೃಷಿಕೇಶನಾದಾಗ ನಿದ್ರೆಯನ್ನು

ಮೀರಲು ಪ್ರಯತ್ನಿಸಬೇಕು. ತನ್ನ ನಿಜದಲ್ಲಿ ನೆಲೆಯಾಗಿ ನಿಲ್ಲುವದನ್ನು ಕಲಿತಾಗ ನಿದ್ರೆಯನ್ನು ಮೀರಲು ಬರುತ್ತದೆ. ಇದನ್ನು ಸಾಧಿಸಲು ಪ್ರಥಮಾನುಭೂತಿಯ ಆನಂದದ ತಿಳುವಳಿಕೆಯನ್ನು ನೆನಪಿಗೆ ತೆಗೆದುಕೊಳ್ಳಬೇಕಾಗುತ್ತದೆ.

* * * *

## 7-3-1978 ರ ಮುಂಜಾನೆ

ನಿನ್ನ ಪ್ರಥಮ ಆನಂದದ ಅನುಭೂತಿಯೇ ನಿನ್ನ ಗುರು. ಅಲ್ಲಿ ಇಂದ್ರಿಯಭಾವ, ಶರೀರ ಭಾವ, ಜಗದ ಭಾವ ಇಲ್ಲ. ಈ ಪ್ರಥಮಾನುಭೂತಿಯ ಆಧಾರದ ಮೇಲೆಯೇ ತನ್ನ ನಿಜವನ್ನು ಹೊಂದಬೇಕು. ಅಂದರೆ ಮಾತ್ರ ಸುಖವು ಲಭಿಸುವದು. ದಿನಾಲು ಸ್ವತಃ ವಿಚಾರಮಾಡುವದನ್ನು ಕಲಿಯಬೇಕು. ಸ್ವತಃ ವಿಚಾರವಿಲ್ಲದಿದ್ದರೆ ಬ್ರಹ್ಮನಿಷ್ಠರ ಉಪದೇಶವನ್ನು ಕೇಳಬೇಕು. ಇದು ಸಿಗದಿದ್ದರೆ ಮಹಾತ್ಮರ ವಚನಗಳನ್ನು ಓದಬೇಕು.

ಮಾನವನು ಸ್ವಾವಲಂಬಿಯಾಗುವದನ್ನು ಕಲಿಯಬೇಕು. ವ್ಯವಹಾರಿಕ ಪ್ರಪಂಚದಲ್ಲಿ ಸ್ವಾವಲಂಬಿಯಾಗುವದು ಅಸಾಧ್ಯವು. ತನ್ನ ನಿಜದ ಅವಲಂಬನದಿಂದಲೇ ಸ್ವಾವಲಂಬನವು ಸಾಧ್ಯವು. ಶರೀರ, ಪ್ರಾಣ, ಇಂದ್ರಿಯ, ಮನ, ಬುದ್ಧಿಗಳ ಅವಲಂಬಿಯಾಗಿದ್ದೇವೆ. ಇದನ್ನು ಬಿಟ್ಟು ತಮ್ಮ ನಿಜದ ಅವಲಂಬಿಯಾಗಬೇಕು. ತನ್ನ ನಿಷ್ಪಕ್ಷಪಾತೀಯ ವಿಚಾರ ಅಥವಾ ಬ್ರಹ್ಮನಿಷ್ಠರ ಸನ್ನಿಧಿ ತಪ್ಪಿದರೆ ನಾವು ಶಾಂತಿಯನ್ನು ಕಳೆದುಕೊಳ್ಳುವೆವು. ಆದ್ದರಿಂದ ಯಾವಾಗಲೂ ಬ್ರಹ್ಮನಿಷ್ಠರ ಹತ್ತಿರವಿರಬೇಕು.

* * * *

## 7-3-1978 ರ ಸಂಜೆ

ಏನನ್ನಾದರೂ ಸಾಧಿಸಬೇಕಾದರೆ ದೃಢನಿಶ್ಚಯ ಬೇಕು. ಶರೀರವು ಕೊಳೆತರೂ ಸ್ವರೂಪವನ್ನು ಸಾಧಿಸುವೆನು ಎಂಬ ದೃಢನಿಶ್ಚಯ ಬೇಕು. ಶರೀರವನ್ನು ಒಂದು ಸ್ಥಳದಲ್ಲಿ ಕೂಡ್ರಿಸಬೇಕು. ಆಸನ ಸ್ಥಿರವಾಗಬೇಕು. ಎಡೆಬಿಡದೆ ತನ್ನ ನಿಜವನ್ನು ಕುರಿತು ವಿಚಾರ ನಡೆಯಬೇಕು.



ರಂಜನೆಯು ಸುಖವಲ್ಲ. ಆದ್ದರಿಂದ ರಂಜನೆಯನ್ನು ತೆಗೆಯಬೇಕು. ನಿರಂಜನೆಯ ಸೂತ್ರವನ್ನು ಹಚ್ಚಿಕೊಳ್ಳಬೇಕು. ಶಾಶ್ವತ ಸುಖವನ್ನು ಹೊಂದಲು ನಿದ್ರೆಯನ್ನು ಜಯಿಸಬೇಕಾಗುತ್ತದೆ. ನಿದ್ರೆಯನ್ನು ಜಯಿಸಬೇಕಾದರೆ ವರಜಾಗ್ರವನ್ನು ಹೊಂದಬೇಕಾಗುತ್ತದೆ. ವರಜಾಗ್ರವನ್ನು ಹೊಂದಬೇಕಾದರೆ ಅತಿ ಸೂಕ್ಷ್ಮ ಬುದ್ಧಿಯು ಅವಶ್ಯವಾಗಿದೆ.

ಎಡೆಬಿಡದೆ ವಿಷಯಗಳ ಬಗೆಗೇ ವಿಚಾರ ನಡೆದಿದೆ. ಆದ್ದರಿಂದ ವಿಷಯಗಳ ಬಗೆಗೆ ಇರುವ ರಾಗವೇ ಅಂತಃಕರಣದಲ್ಲಿ ಉಳಿಯುವದು. ಯಾವ ವಾಸನೆಯು ಅಂತಃಕರಣದಲ್ಲಿರುವದೋ ಅದೇ ಕ್ರಿಯೆಯ ರೂಪದಲ್ಲಿ ಪ್ರಕಟವಾಗುತ್ತದೆ. ಹರಿಹರ ಬ್ರಹ್ಮಾದಿಗಳ ಮನೆಗಳೂ ಬ್ರಹ್ಮನಿಷ್ಠರ ಮನೆಗಳೂ ಬ್ರಹ್ಮಸೂತ್ರದ ಅಭ್ಯಾಸವು ಅವುಗಳಲ್ಲಿ ನಡೆಯದಿದ್ದರೆ ವೈಷೇಯಿಕ ಸಂತೆಯೇ ಸರಿ.

ಆನಂದದ ಗುರುತಿಲ್ಲದವರು ಯಾರಿದ್ದಾರೆ? ಆನಂದದ ಗುರುತು ಎಲ್ಲರಿಗೂ ಇದೆ. ಈ ಆನಂದದ ಗುರುತನ್ನು ನಿಮಗೆ ಯಾರು ತೋರಿಸಿದರು? ಯಾರೂ ತೋರಿಸಿಲ್ಲ. ಯಾರೂ ಆನಂದದ ಗುರುತು ತೋರಿಸಿಲ್ಲವೆಂದ ಮೇಲೆ ನೀವೇ ಆನಂದವನ್ನು ಅನುಭವಿಸಿರುವ ಗುರುತಿರಲಿಕ್ಕೇ ಬೇಕು. ಪ್ರತಿಯೊಬ್ಬರಿಗೂ ಪ್ರಥಮಾನುಭೂತಿಯ ಆನಂದದ ತಿಳುವಳಿಕೆ ಇದ್ದೇ ಇದೆ. ಇದರ ಆಧಾರದ ಮೇಲೆಯೇ ಪ್ರತಿಯೊಬ್ಬನು ಆನಂದವನ್ನು ಬೇಡುತ್ತಿದ್ದಾನೆ. ಆದ್ದರಿಂದ ಪ್ರಥಮಾನುಭೂತಿಯ ಆನಂದದ ತಿಳುವಳಿಕೆಯೇ ತನ್ನ ಗುರು. ಈ ಪ್ರಥಮಾನುಭೂತಿಯ ಆನಂದದ ಸ್ಥಿತಿಗತಿಯು ಮರೆತು ಹೋಗಿದೆ. ಆದರೆ ಆನಂದದ ನೆನಪು ಇದೆ. ಇದನ್ನು ಪುನಃ ನೆನಪಿಗೆ ತೆಗೆದುಕೊಳ್ಳುವದೇ ಬ್ರಹ್ಮಸೂತ್ರವನ್ನು ಹಿಡಿದಂತೆ. ಬ್ರಹ್ಮಸೂತ್ರವೆಂದರೆ ಕಾಗದದ ಮೇಲಿನ ಕರಿಗೆರೆ ಅಲ್ಲ.

ನಿದ್ರೆಯಿಲ್ಲದೆ ಆನಂದವನ್ನು ಹೊಂದಲಿಕ್ಕೆ ಬರುತ್ತದೆ. ವಿಷಯೇಂದ್ರಿಯಗಳ ಸಂಪರ್ಕವಿಲ್ಲದೆ ಆನಂದವನ್ನು ಹೊಂದಲಿಕ್ಕೆ ಬರುತ್ತದೆ. ಜಾಗ್ರದ ವ್ಯವಹಾರದಿಂದ ಮನಸ್ಸು ಸ್ವಾಭಾವಿಕವಾಗಿ ದಣಿವನ್ನು ಹೊಂದಿ, ಜಾಗ್ರದ ವ್ಯವಹಾರವು ದಣಿವನ್ನು ಕೊಡತಕ್ಕದ್ದು ಎಂದು ತಿಳಿಯದೆಯೇ, ನಿದ್ರೆಯಲ್ಲಿ ತನ್ನ ಎಲ್ಲ ವಾಸನೆಗಳೊಡನೆ ಅಡಗಿರುತ್ತದೆ. ಜಾಗ್ರದ ವ್ಯವಹಾರವು ದಣಿವನ್ನು ಕೊಡುವಂಥಾದ್ದು ಎಂಬುದು ತಿಳಿಯದೆ ಮನಸ್ಸು ಸುಖವನ್ನು ಪಡೆಯಲು ಮತ್ತೆ ಬಹುರ್ಮುಖವಾಗಿ ಜಾಗ್ರಕ್ಕೆ ಬರುತ್ತದೆ. ನಿದ್ರೆಯಲ್ಲಿ ಮನಸ್ಸು ತನ್ನ ಎಲ್ಲ ವಾಸನೆಗಳೊಡನೆ ಅಡಗಿದಾಗ

ಅನುಭವಕ್ಕೆ ಬಂದ ಆನಂದವು ಸ್ವರೂಪದ್ದೇ. ಏಕೆಂದರೆ ನಿದ್ರೆಯಲ್ಲಿ ತನ್ನ ಬಿಟ್ಟು ಬೇರೆ ಏನೂ ಇಲ್ಲ. ಅದರಂತೆ ರಾಗದ ವಿಷಯವು ಸಿಕ್ಕಾಗ ಮನಸ್ಸು ಕ್ಷಣಮಾತ್ರವಾಗಿ ಆ ರಾಗದ ವಿಷಯದಲ್ಲಿ ನಿಂತಾಗ ಸ್ವರೂಪಾನಂದವೇ ಪ್ರತಿಫಲಿಸಿ ಆನಂದವು ಅನುಭವಕ್ಕೆ ಬಂದಿದೆ. ಆದ್ದರಿಂದ ಸುಖವು ಮಾತ್ರ ಸ್ವರೂಪದ್ದೇ. ಅಜ್ಞಾನದ ಮೂಲಕ ನಿದ್ರೆ, ವಿಷಯಗಳೆಂಬ ಉಪಾಧಿಗಳ ಮೂಲಕ ಸುಖ ಸಿಗುತ್ತದೆ ಎಂಬ ಭ್ರಾಂತಿಯಾಗಿದೆ. ಆದರೆ ತಿಳಿದು ನೋಡಲು ಆನಂದವು ನಿರುಪಾಧಿಕವು, ನಿರ್ವಿಷಯವು. ತಾನೇ ಆನಂದರೂಪನು ಎಂದು ತಿಳಿದರೆ ಸಾಕು, ಆನಂದವು ಇದ್ದೇ ಇರುತ್ತದೆ.

ನಿನ್ನ ಇರುವು ಸ್ವತಃ ಸಿದ್ಧವಾಗಿದೆ. ಅದನ್ನು ಯಾರೂ ಮಾಡಿಲ್ಲ. ದೃಷ್ಟಿಯಿಂದಲೇ ಸೃಷ್ಟಿಯು ಕಾಣಿಸುತ್ತಿದೆ. ದೃಷ್ಟಿ ತೆಗೆದಾಗ ವಿಶ್ವವಿಲ್ಲ. ಇದೆಲ್ಲವೂ ನಿನ್ನ ಆಧಾರದ ಮೇಲೆ ತೋರುವ ತೋರಿಕೆಯು. ಹರಿಹರ ಬ್ರಹ್ಮಾದಿಗಳು ನಿನ್ನ ಕಲ್ಪನೆಯ ತೆರೆಗಳು. ಕಲ್ಪನೆಯ ತೆರೆಗಳಾದ ಹರಿಹರ ಬ್ರಹ್ಮಾದಿಗಳು ನಿನಗೆ ಸುಖವನ್ನು ಕೊಡಲಾರವು. ಹರಿಹರ ಬ್ರಹ್ಮಾದಿಗಳು ಕರ್ಮದ ಬಲೆಯಲ್ಲಿ ಸಿಕ್ಕು ಒದ್ದಾಡುತ್ತಿದ್ದಾರೆ. ಹರಿಹರ ಬ್ರಹ್ಮಾದಿಗಳು ನಮ್ಮ ಕರ್ಮಕ್ಕನುಗುಣವಾಗಿ ದುಡಿಯುವ ಕೂಲಿ ಆಳುಗಳು. ನಮಗೆ ಬೇಕಾದಾಗ ಹರಿಹರ ಬ್ರಹ್ಮರನ್ನು ಅಡಗಿಸುವೆವು. ಈಶ್ವರನನ್ನೂ ಅವನ ಸೃಷ್ಟಿಯನ್ನೂ ನಿದ್ರೆಯಲ್ಲಿ ಅಡಗಿಸುವೆವು. ಅವರು ನಿದ್ರೆಯನ್ನು ಪ್ರವೇಶಿಸಲಾರರು. ತೋರಿಕೆಯು ಇರುವಿಕೆಯಲ್ಲಿ ಯಾವ ಬದಲಾವಣೆಯನ್ನೂ ಉಂಟುಮಾಡಲಾರದು. ತೋರಿಕೆಗೆ ಅಸ್ತಿತ್ವವು ಇಲ್ಲವೆಂಬುದು ತಿಳಿದಾಗ ಮನಸ್ಸು ಉಳಿಯುವದಿಲ್ಲ. ಇದೇ ಅಮನಸ್ಕಯೋಗವು.

ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳ ಸಂತೆ ನಡೆದಿದೆ. ಅವರವರ ಕರ್ಮಕ್ಕನುಗುಣವಾಗಿ ಇವುಗಳ ಸಂತೆಯು ನಡೆದಿದೆ. ಅನೇಕ ಬ್ರಹ್ಮಾಂಡಗಳಿವೆ. ಈ ಬ್ರಹ್ಮಾಂಡಗಳೆಲ್ಲವೂ ವಿಷಯಗಳಿಂದ ತುಂಬಿವೆ. ಭಾವ ಎಲ್ಲಿಂದ ಬಂದಿದೆಯೋ ಅಲ್ಲಿ ಲೀನವಾಗುವವರೆಗೆ ಅಂದರೆ ಸ್ವರೂಪಾಗಿ ಉಳಿಯುವವರೆಗೆ ಪ್ರಯತ್ನವು ನಡೆಯುವದೇ. ಆಗ ಕರ್ಮವು ಮುಗಿಯುವದು.

ಅನ್ಯಥಾ ಜ್ಞಾನದ ಎವೆದೆರೆದಾಗ ಮಹತ್ತು, ಅದು ಅಡಗಿದಾಗ ಅಜ್ಞಾನ. ನಿದ್ರೆಯಲ್ಲಿ ಯಾರೇನು ಮಾಡುವರು? ಯಾರೂ ಏನೂ ಮಾಡಲಾರರು. ಅಂದಮೇಲೆ ಸ್ವಾನಂದ ಸಾಮ್ರಾಜ್ಯದಲ್ಲಿ ಯಾರೇನು ಮಾಡುವರು? ಏನೋ ಬಂತು ಬೆದರಿಸಿತು



ಎನ್ನುವರು. ನಿನ್ನನ್ನು ಬಿಟ್ಟು ಬೇರೆ ಏನೂ ಇಲ್ಲದ್ದರಿಂದ ನಿನ್ನನ್ನು ಯಾರು ಏನು ಮಾಡಬಲ್ಲರು?

ತಿಳುವಳಿಕೆ ಎಂದರೆ ಸಂಕಟವನ್ನು ಕಳೆದುಕೊಳ್ಳುವಿಕೆ ಎಂದರ್ಥ. ಯಾರು ಸಂಕಟವನ್ನು ಕಳೆದುಕೊಂಡಿರುವರೋ ಅವರೇ ತಿಳುವಳಿಕೆಯುಳ್ಳವರು. ಆದರೆ ಈಗ ತಿಳುವಳಿಕೆ ಉಳ್ಳವರು ಎಂದು ಯಾರು ಹೇಳುತ್ತಿರುವರೋ ಅವರು ತಮ್ಮ ಸಂಕಟವನ್ನು ಕಳೆದುಕೊಂಡಿದ್ದರೆ ಒಳ್ಳೆಯದು, ಇಲ್ಲವಾದರೆ ಅವರು ಗಳಿಸಿದಂಥ ತಿಳುವಳಿಕೆಯು ವ್ಯರ್ಥವೇ ಸರಿ. ಸಂಕಟವು ಹೋಗಿರುವದೇ ತಿಳುವಳಿಕೆಯ ಗುರುತು. ಹೃದಯದಲ್ಲಿ ಸಂಕಟದ ತೆರೆಯು ಇರಬಾರದು. ಸ್ವರೂಪಾಗಿ ಉಳಿದಾಗಲೇ ಸಂಕಟವು ಪರಿಹಾರವಾಗುವದು. ಶರೀರವು ನಿನಗೆ ಸಂಕಟವನ್ನು ಕೊಡುವದು. ಆದ್ದರಿಂದ ಶರೀರಭಾವ ಬಿಡುವದರಿಂದಲೇ ಸುಖವು. ಶರೀರಭಾವವಿರುವದರಿಂದಲೇ ಮನಸ್ಸು ಶರೀರದ ಸಲುವಾಗಿ ಸಿಡಿಮಿಡಿಗೊಳ್ಳುವದು. ಶರೀರಭಾವ ನಾಶವಾದಾಗ ಮನೋನಾಶವಾಗುವದು. ಶರೀರ ಭಾವದ ತ್ಯಾಗವೇ ಸನ್ಯಾಸವು.

ಶರೀರವೆಲ್ಲಿಯೇ ಇರಲಿ ಮನಸ್ಸಿನ ಸ್ಥಿತಿಯು ಮುಖ್ಯವಾಗಿದೆ. ಗವಿಯಲ್ಲಿ ಕೂತರೆ ಮನೋನಾಶವಾಗುವದಿಲ್ಲ. ಗವಿಯಲ್ಲಿ ಗೂಗೆಯು ಇರುವದು. ಅದರ ಮನೋನಾಶವಾಗಿದೆಯೇ? ಇಲ್ಲ. ದೇಹವನ್ನು ದಂಡಿಸಿದರೂ ಮನೋನಾಶವಾಗುವದಿಲ್ಲ. ಹಾವು ಹವೆಯ ಮೇಲಿರುವದು. ಅದರ ಮನೋನಾಶವಾಗಿರುವದೇ? ಇಲ್ಲ. ಕಾಮವನ್ನು ಗೆಲ್ಲುವದೇ ಮುಖ್ಯ ಕೆಲಸವು. ಅರಣ್ಯದಲ್ಲಿ ಮಂಗ ಮುಸುವಿನ ಕೂಡ ನಡೆದುಕೊಳ್ಳುವಿರೋ? ಇದ್ದಲ್ಲಿಯೇ ಜನರೊಡನೆ ನಡೆದುಕೊಂಡು ಕಾಮವನ್ನು ಗೆಲ್ಲು. ಕಾಮವು ಮನಸ್ಸಿನಲ್ಲಿಯೋ ತಲೆಬುರುಡೆಯಲ್ಲಿಯೋ? ಮನಸ್ಸಿನಲ್ಲಿಯೇ. ಆದ್ದರಿಂದ ಕಾಮವನ್ನು ಮನಸ್ಸಿನಲ್ಲಿಯೇ ಸದೆಬಡಿಯಬೇಕು. ತಲೆಯನ್ನು ಬೋಳಿಸುವದರಿಂದ, ಅಥವಾ ತಲೆಗೆ ಬಣ್ಣ ಬಡಿಯುವದರಿಂದ ಏನೂ ಪ್ರಯೋಜನವಿಲ್ಲ. ಮನಸ್ಸಿನಲ್ಲಿರುವ ಕಾಮವನ್ನು ಯಥಾರ್ಥ ತಿಳುವಳಿಕೆಯಿಂದ ಸುಡಲಿಕ್ಕೆ ಬರುವದು. ಆಗ ನಿಸ್ವಾರ್ಥಿಯಾಗಲು ಬರುವದು. ಸ್ವಲ್ಪಾದರೂ ನಿಸ್ವಾರ್ಥವು ಬೇಕು, ಅಂದರೆ ವ್ಯವಹಾರವು ಸುರಳಿತವಾಗಿ ಸಾಗುತ್ತದೆ. ಮೊದಲು ಒಂದು ಊರೇ ಒಂದು ಕುಟುಂಬವಾಗಿತ್ತು. ಈಗ ಒಂದು ಕುಟುಂಬವೇ ಒಂದು ಊರಾಗಿದೆ. ಗಡ್ಡ ಕೂದಲು ಬಿಟ್ಟರೆ ಕಾಮವನ್ನು ಸುಡಲಿಕ್ಕಾಗುವದಿಲ್ಲ. ಹಾಗಾದರೆ ಹೋತು, ಕರಡಿಗಳು

ಕಾಮವನ್ನು ಸುಡಬೇಕಾದೀತು. ಜ್ಞಾನವೆಂಬ ನೇತ್ರದಿಂದ ಕಾಮವನ್ನು ಸುಡಬೇಕು. ಉದಾ: ಶಿವನು ಕಾಮನನ್ನು ಮೂರನೆಯ ಕಣ್ಣಿನಿಂದ ಅಂದರೆ ಜ್ಞಾನ ಕಣ್ಣಿನಿಂದ ಸುಟ್ಟನೆಂಬ ಐತಿಹ್ಯವಿದೆಯಲ್ಲವೇ? ಹೌದು. ಹಾಗೆಂದ ಮೇಲೆ, ಜ್ಞಾನನೇತ್ರದಿಂದ ಕಾಮನನ್ನು ಸುಡಲು ಬರುತ್ತದೆ. ಹಾಗೇ ಮಾಡು.

ಎಲ್ಲಕ್ಕೂ ಮೊದಲಿಗೆ ತನ್ನ ನಿಜದ ಅಜ್ಞಾನ. ನಂತರ ಅನ್ಯಥಾ ಜ್ಞಾನವು. ನಂತರ ಕಾಮಾದಿಗಳು. ಆದ್ದರಿಂದ ಅಜ್ಞಾನವು ನಾಶವಾದರೆ ಕೆಲಸವು ಮುಗಿಯಿತು. ಇದಕ್ಕೆ ವಿವೇಕವು ಬೇಕಾಗುವದು. ಶರೀರದ ಚಿಂತೆ ಬಿಟ್ಟು ಅಭ್ಯಾಸವು ಮುಂದುವರಿಯಬೇಕಾಗುವದು. ತನ್ನ ಇರುವಿನ ಕಡೆಗೆ ಲಕ್ಷ್ಯ ಕೊಡದಿದ್ದರೆ ಏನೂ ಪ್ರಯೋಜನವಿಲ್ಲ. ಶರೀರಭಾವವನ್ನು ತೆಗೆದು ಸ್ವರೂಪದಲ್ಲಿ ಭಾವವನ್ನು ನೆಲೆಯಾಗಿ ನಿಲ್ಲಿಸು. ಅಂದಾಗ ಸ್ವರೂಪಾಗಿ ಉಳಿಯಲು ಬರುತ್ತದೆ. ದೇಹ, ಇಂದ್ರಿಯ, ಮನ, ಬುದ್ಧಿ, ಅಹಂಕಾರಗಳ ಧರ್ಮವೇ ಪರಧರ್ಮವು. ಸ್ವರೂಪವೇ ತನ್ನ ಧರ್ಮವು. ನೀನು ಆನಂದರೂಪನು. ಅಲ್ಲಿ ಹೇಳುವದೂ ಕೇಳುವದೂ ಇಲ್ಲ. ಶೋಕ-ಮೋಹಗಳಿಲ್ಲ. ಅಲ್ಲಿ ಕಾಣಲಿಕ್ಕೆ ಏನೂ ಉಳಿಯಲಾರದು.

ಅಜ್ಞಾನದ ಆನಂದವು ಕ್ಷಣಿಕವು, ಸುಜ್ಞಾನದ ಆನಂದವು ಶಾಶ್ವತವು. ಜ್ಞಾನಾಗ್ನಿಯಿಂದ ಸರ್ವಕರ್ಮಗಳನ್ನು ಸುಡಲು ಬರುವದು. ಕರ್ತೃತ್ವ-ಭೋಕ್ತೃತ್ವರಹಿತ ಸ್ಥಿತಿಯೇ ಇದು. ನಿಜವನರಿದ ಯೋಗಿಗೆ ಪ್ರಾರಬ್ಧವಿಲ್ಲ. ಅವನಿಗೆ ಯಾವ ಕರ್ಮದ ಕಾಟವೂ ಇಲ್ಲ.

ತನ್ನ ಹೃದಯಗ್ರಂಥವನ್ನು ಓದಿಕೊಳ್ಳುವದೇ ಮುಖ್ಯ ಕೆಲಸವು. ಪರಾಗ್ದೃಷ್ಟಿಯೇ ವ್ಯಭಿಚಾರವು. ಪರಾಗ್ದೃಷ್ಟಿಯೆಂದರೆ ಅಂತರಂಗ ಹಾಗೂ ಬಹಿರಂಗ ವಿಷಯಾದಿಗಳ ದೃಷ್ಟಿಯು.

* * * *

## 8-3-1978 ರ ಮುಂಜಾನೆ

ಆದಿಯಲ್ಲಿ ಗುರು ಯಾರಿದ್ದರು? ಆದಿಯಲ್ಲಿ ಶೃತಿ ಇತ್ತೇನು? ಇಲ್ಲ. ತನ್ನ ಪ್ರಥಮಾನಂದದ ಅನುಭವವೇ ತನ್ನ ಗುರು. ಸುಖವನ್ನು ಯಾರೂ ಕಲಿಸಿಲ್ಲ. ಕೂಸಿಗೆ ಸುಖದ ಗುರುತು ಯಾರು ಮಾಡಿಕೊಟ್ಟರು? ಕೂಸಿಗೆ ಸುಖದ ಗುರುತು ಜನ್ಮ-ಜನ್ಮಾಂತರದಿಂದಲೇ ಇದೆ. ಎಲ್ಲರಿಗೂ ಸುಖದ ಗುರುತು ಇದ್ದೇ ಇದೆ. ಅದನ್ನು



ಯಾರೂ ಕಲಿಸಿಲ್ಲ. ಸುಖದ ಗುರುತಿರುವದು ಸಾರ್ವತ್ರಿಕ ಅನುಭವವು. ಭಾರತೀಯರಿಗೆ ಹರಿ-ಹರ ಬ್ರಹ್ಮಾದಿಗಳ ಕಲ್ಪನೆ ಇದೆ. ಆದರೆ ಎಸ್ಕಿಮೋಗಳಿಗೆ ಹರಿ-ಹರ ಬ್ರಹ್ಮಾದಿಗಳ ಕಲ್ಪನೆ ಇಲ್ಲ. ಆದರೆ ಸುಖದ ಗುರುತು, ನಿದ್ರೆಯ ಆನಂದದ ಅನುಭವ ಅವರಿಗೂ ಇದೆ. ಸುಖವನ್ನು ಯಾರಾದರೂ ಕೊಟ್ಟರೇನು? ಸುಖವು ಯಾವಾಗ ಅನುಭವಕ್ಕೆ ಬಂದಿದೆ? ಸುಖದ ಅನುಭವವಿದ್ದಾಗ ಅನ್ಯ ಭಾವವಿತ್ತೇನು? ಯಾವ ಭಾವವೂ ಇರಲಿಲ್ಲ. ಸುಖವನ್ನು ಕೊಡಲಿಕ್ಕೆ ಅಲ್ಲಿ ಯಾರಿದ್ದರು? ಯಾರೂ ಇರಲಿಲ್ಲ. ಇರುವಿಕೆಯೇ ಮೊದಲು. ಇರುವಿಕೆಯೊಳಗೇ ಭಾವವು. ಭಾವದೊಳಗೇ ದೇಶ, ಕಾಲ, ಕಾರಣಗಳು. ಭಾವದ ಉದಯಕ್ಕಿಂತ ಮುಂಚೆ ದೇಶ, ಕಾಲ, ಕಾರಣಗಳಿರಲಿಲ್ಲ. ಮೊದಲು ಕಂಡದ್ದು ಆನಂದ, ಮತ್ತೇನಿಲ್ಲ.

ಮೊದಲು ನೀನು ಯಾರು ಎಂದು ವಿಚಾರ ಮಾಡು. ಇದು ಮುಗಿದಾಗ ಏನಾದರೂ ಉಳಿದರೆ ಕೇಳಲು ಕೊಡಲು ಬರುವದು. ಇರುವನ್ನು ಯಾರು ಮಾಡಿದರು? ಯಾರು ಏನನ್ನು ಕೊಡಬಲ್ಲರು? ಯಾರು ಯಾರನ್ನು ಬೇಡಿಕೊಳ್ಳುವರು? ನಾನು ಯಾರು ಎಂಬುದನ್ನು ಪರಿಶೀಲಿಸಲು, ಪರಿಶೀಲನೆ ಮಾಡುವವನೇ ಸಮಾಪ್ತಿ ಹೊಂದುವನು. ಯಾವದು ಪರಿಸಮಾಪ್ತಿಯನ್ನು ಹೊಂದುವದೋ ಅದು ಇರುವಿನ ಘಟಕಗಳನ್ನು ಕಂಡು ಹಿಡಿಯಲಾರದು. ಅದು ಏನೂ ಕೊಡಲಾರದು. ಇರುವಿಗೆ ಬುದ್ಧಿಯು ಏನು ಕೊಡಬಲ್ಲದು? ಭಾವರಹಿತವಾದದ್ದರಲ್ಲಿ ಭಾವವು ಏನು ಮಾಡಬಲ್ಲದು? ಅಲ್ಲಿ ಭಾವದ ಕೆಲಸವಿಲ್ಲ. ಪರಮಾತ್ಮನು ಭಾವರಹಿತನು. ಭಾವಾತೀತಕ್ಕೆ ಸದ್ಗುರು ಎನ್ನುವರು. ಭಾವಾತೀತ ಸದ್ಗುರುವಿಗೆ ಭಾವವು ಏನು ಕೊಡಬಲ್ಲದು? ಏನಾದರೂ ಭಾವದೊಳಗೆ ಕಲ್ಪಿಸಿಕೊಂಡದ್ದು ಅಕಲ್ಪಿತವಾದದ್ದಕ್ಕೆ ಏನು ಕೊಡಬಲ್ಲದು? ಹೀಗೆ ನಾನು ಯಾರು ಎಂದು ವಿಚಾರ ಮಾಡಲು ಎಲ್ಲವೂ ಸುಳ್ಳಾಗಿ ಸ್ವರೂಪವೇ ತಾನೆಂಬ ತಿಳುವಳಿಕೆಯು ಉದಯಿಸಿ ಶಾಶ್ವತ ಸುಖವು ಸಿಗುವದು.

ಹರಿಹರ ಬ್ರಹ್ಮಾದಿಗಳ ಮನೆಗಳೆಲ್ಲ ಸಂತೆಯ ಮನೆಗಳೇ. ಅಂದಮೇಲೆ ವೈಷೇಯಿಕ ಜನರ ಮನೆಗಳೇನಾದವು?

ಎಚ್ಚರಿಕೆಯಲ್ಲಿಯೇ ಸುಖವನ್ನು ಕೊಡಲಿಕ್ಕೆ ತೆಗೆದುಕೊಳ್ಳಲಿಕ್ಕೆ ಬರುವದಿಲ್ಲವೆಂದ ಮೇಲೆ ನಿದ್ರೆಯಲ್ಲಿ ಸುಖವನ್ನು ಕೊಡುವದು ತೆಗೆದುಕೊಳ್ಳುವದು ಹೇಗೆ ನಡೆಯುವದು? ಸುಖವನ್ನು ಬೇಡಿಕೊಳ್ಳುವವನು ಯಾರು? ಸುಖವನ್ನು

ಕೊಡುವವನು ಯಾರು ಎಂದು ವಿಚಾರ ಮಾಡು. ಗೊಂಬೆಗಳು, ಭಾವಚಿತ್ರಗಳು ನಿನ್ನ ಸಂಕಟವನ್ನು ಬಿಡಿಸಿದವೇ? ಶರೀರವನ್ನೂ ಎಲ್ಲಿಗೂ ಒಯ್ಯಬೇಕಾಗಿಲ್ಲ. ನೀನಿದ್ದಲ್ಲೇ ನಿನ್ನ ನಿಜವನ್ನು ನೋಡಿಕೊ. ಅರಿವಿಗೆ ಬೇರೆ ಅರಿವಿಲ್ಲ. "ಅರಿವೆ ಬರಿಯರಿವೆ ನಿನ್ನ ತೆರನರಿಯೆ ಮುಕ್ತಿಯಹುದು ನಿಜವಂತೆ. ತಾನೆ ತನ್ನೊಳು ತನ್ನ ನಿಜವ ನೋಡಲು ಪರಮಾನಂದ ಚಿದಖಂಡ ರೂಪಹನು" ಎಂದು ಮಹಾತ್ಮರು ಹೇಳಿದ್ದಾರೆ. ಉಪಾಧಿಯಿಂದ ಆನಂದದ ತೋರಿಕೆ ಬೇಕಾಗಿಲ್ಲ. ಆನಂದದ ಇರುವಿಕೆಯು ಬೇಕಾಗಿದೆ. ಇದು ಖಂಡಿತವಲ್ಲ. ವ್ಯಾಪಕವಿದೆ. ಅಖಂಡವಿದೆ. ಅದು ಭಾವದ ಹಿಡಿತದೊಳಗೆ ಇಲ್ಲ. ಅಂದ ಮೇಲೆ ಅದನ್ನು (ಸುಖವನ್ನು) ಯಾರು ಕೊಡುವರು? ಯಾರೂ ಸುಖವನ್ನು ಕೊಡಲು ಸಾಧ್ಯವಿಲ್ಲ.

ಹಿಂದೆ ಅಸಂಖ್ಯ ಜನ್ಮಗಳನ್ನು ತಾಳಿರಬಹುದು. ಅದರ ನೆನಪು ನಿಮಗೆ ಇರಲಿಕ್ಕಿಲ್ಲ. ಈ ಎಲ್ಲ ಜನ್ಮಗಳ ಶಿಲ್ಕು ಸಂಕಟವಲ್ಲವೇ? ಶರೀರಭಾವವಿದ್ದಾಗ ಶರೀರಕ್ಕೆ ಆಹಾರವು ಬೇಕಾಗುವದು. ಶರೀರಭಾವವಿಲ್ಲದಾಗ ಆಹಾರವು ಬೇಕಾಗಿಲ್ಲ. ಮರೆದೊಡೆ ಜೀವಾತ್ಮ, ಅರಿದೊಡೆ ಪರಮಾತ್ಮ, ಅರಿಯದಿದ್ದರೆ ಅರ್ಪಿಸಲರಿಯ. ದೇವರಿಗೆ ಕರೆದುಕೊಂಡು ಹೋಗುವಿರಾ? ಅರುವಿಗೆ ದೇವರೆನ್ನುವರು. ಅರುವು ನಿಮ್ಮನ್ನು ಬಿಟ್ಟು ಇಲ್ಲ. ಅರುವು ಬಿಟ್ಟು ಅರುವಿಗೆ ಹೋಗುವಿರೇನು? ಹೋಗಲಿಕ್ಕೆ ಸಾಧ್ಯವಿಲ್ಲ. "ಅರಿವು ನೀನೆಂದು ಸದ್ಗುರು ಪೇಳೆ ತಿಳಿವನೆ ಜಾಣರದೇವ" ಎಂದು ಮಹಾತ್ಮರು ಹೇಳಿದ್ದಾಗಿದೆ. ಅಂದಾಗ ಬೇಡಿಕೊಳ್ಳುವದೆಲ್ಲಿ? ಬರುವದೆಲ್ಲಿ? ಹೋಗುವದೆಲ್ಲಿ? ಅಲ್ಲಿ ಗಮನಾಗಮನವಿಲ್ಲ. ಬ್ರಹ್ಮನಿಷ್ಠರನ್ನು ಬಿಟ್ಟು, ದೇವರಿಗೆ ಹೋಗುವದು ಅಥವಾ ಬೇರೆ ಕಡೆಗೆ ಏನನ್ನಾದರೂ ಕಲಿಯಲಿಕ್ಕೆ, ದೊರಕಿಸಲಿಕ್ಕೆ ವಗೈರೆ ಹೋಗುವದು ಮೂರ್ಖತನವೇ ಸರಿ. ತಾನಲ್ಲದ್ದನ್ನು ತಾನೆಂದು ಕಲಿತಿದ್ದಾನೆ. ಇದನ್ನು ಬಿಟ್ಟು ತನ್ನ ನಿಜವನ್ನು ತಾನು ಅರಿತುಕೊಳ್ಳಬೇಕಾಗಿದೆ. "ಅರಿವು ತಾನೆಂದು ನಂಬಿ ನಿಂದೊಡೆ ಮುಕ್ತಿ. ಪೆರತಿಲ್ಲವೆಂದುದು ನಿಗಮೋಕ್ತಿ" ಎಂದು ಮಹಾತ್ಮರು ಹೇಳಿದ್ದಾರೆ.

* * * *

8-3-1978 ರ ಸಂಜೆ

ವಾಸನಾ ನಾಶವಾಗುವದು ಅತಿ ಕಠಿಣವಿದೆ. ಈ ವಾಸನೆಗಳು ಜನ್ಮ-ಜನ್ಮಾಂತರದಿಂದ ಬಂದಿವೆ. ಈ ವಾಸನೆಗಳಿಂದ ತನಗೇನು ಪ್ರಯೋಜನ ಎಂಬ



ಸತತ ವಿಚಾರದಿಂದ ಈ ವಾಸನೆಗಳು ಸುಖವನ್ನು ಕೊಡುವದರ ಬದಲಾಗಿ ದುಃಖವನ್ನೇ ಕೊಡುವವು ಎಂಬ ತಿಳುವಳಿಕೆಯು ನೆಲೆಗೊಂಡಾಗ ವಾಸನಾನಾಶವಾಗುವದು. ವಿಚಾರ ಮಾಡಲು ಪ್ರಾರಂಭಿಸಿದಾಗ ವಾಸನೆಗಳು ಸುಖವನ್ನು ಕೊಡುವವೋ ಎಂಬುದರ ಬಗ್ಗೆ ಸಂಶಯವುಂಟಾಗುವದು. ವಿಚಾರ ಮಾಡದವರಿಗೆ ಸಂಶಯಗಳೇ ಇಲ್ಲ. ದುಃಖಮಯ ಪ್ರಪಂಚವು ಹಾಗೆಯೇ ಮುಂದುವರಿಯುವದು. ಸತತ ವಿಚಾರದಿಂದ ಸಂಶಯಮಟ್ಟ ಮೀರಿದವರು ಸಂಶಯರಹಿತರಾಗಿರುವರು.

ಕೆಲವು ನಿಯಮಗಳನ್ನು ಪಾಲಿಸಲು ಕಲಿತುಕೊಂಡರೆ ಕೆಲವೊಂದು ಚಟಗಳನ್ನು ಬಿಡಲಿಕ್ಕೆ ಸಾಧ್ಯವಾಗುವದು. ಅಷ್ಟರಮಟ್ಟಿಗೆ ಜೀವನವು ಸುಖಕರವಾಗುವದು. ನಿಯಮಗಳ ಪಾಲನೆಯ ಜೊತೆಗೆ ವಿಚಾರವೂ ಬೇಕು. ಬರೇ ವ್ರತವನ್ನು ಕೈಕೊಂಡರೆ ಲೋಭವು ನಾಶವಾಗುವದಿಲ್ಲ. ವಿಚಾರದಿಂದಲೇ ಲೋಭ ಅಥವಾ ವಾಸನಾ ನಾಶವಾಗುವದು.

ಮಾನವನ ಜೀವನದ ಗುರಿ ಶಾಶ್ವತ ಸುಖವನ್ನು ಹೊಂದುವದೇ ಆಗಿದೆ. ಇದಕ್ಕೇ ಮುಕ್ತಿಯೆನ್ನುವರು. ನಾವು ವಿಷಯೇಂದ್ರಿಯ ಸಂಪರ್ಕಭೋಗದಿಂದ ಸುಖವು ಸಿಗುತ್ತದೆ ಎಂಬ ತಿಳುವಳಿಕೆಯಿಂದಲೇ ವಿಹಿತ ಅಥವಾ ನಿಷಿದ್ಧ ವ್ಯವಹಾರದ ಮೂಲಕ ಇಂದ್ರಿಯಗಳನ್ನು ತೃಪ್ತಿ ಪಡಿಸುವದಕ್ಕೇ ಪ್ರಯತ್ನಿಸುತ್ತಿದ್ದೇವೆ. ನಿದ್ರೆ, ವಿಷಯಗಳು ಎಂಬ ಉಪಾಧಿಗಳು ಭಿನ್ನವಾದರೂ ಆನಂದವು ಮಾತ್ರ ಒಂದೇ. ಭೋಗಿಸಬೇಕೆಂಬ ವಿಷಯವು ಸಿಕ್ಕಾಗ ಮನಸ್ಸು ಕ್ಷಣಿಕವಾಗಿ ನಿಶ್ಚಲವಾಗಿ ಅಂತರ್ಮುಖ ವೃತ್ತಿಯುಳ್ಳದ್ದಾಗುವದು. ಆಗ ನಮ್ಮ ಸ್ವರೂಪದ ಆನಂದವು ಪ್ರತಿಫಲಿಸಿ ನಮಗೆ ಆನಂದದ ಅನುಭವವಾಗುವದು. ಮನಸ್ಸು ನಿಂತಾಗ ಅಥವಾ ನಿಶ್ಚಲವಾದಾಗ ಆನಂದವು ತೋರುವದು. ಆದರೆ ಆನಂದವು ವಿಷಯದ್ದಲ್ಲ. ತನ್ನ ಸ್ವರೂಪದ್ದೇ. ವಿಷಯವು ಸುಖವಲ್ಲವೆಂಬುದು ತಿಳಿದಾಗ ಜಗತ್ತು ತೃಣಕ್ಕೆ ಸಮಾನವಾಗುತ್ತದೆ. ಅತಿ ಶಾಂತರೀತಿಯಿಂದ ವಿಚಾರಮಾಡಿದರೆ ಮಾತ್ರ ತಿಳಿಯುತ್ತದೆ. ಅವಸರದ ವಿಚಾರದಿಂದ ತಿಳಿಯುವದಿಲ್ಲ. ಇದನ್ನು ತಿನ್ನಬೇಕು ಎಂಬ ಭಾವವು ಕೂಡ ಬರಬಾರದು. ಹೆಚ್ಚೆ ಹೆಚ್ಚೆಗೆ ವಿಷಯಭೋಗ ನಡೆದಾಗ ಮನಸ್ಸಿನ ನಿಶ್ಚಲತೆಯಿಂದಲೇ ಸ್ವರೂಪದ ಆನಂದವು ತೋರಿತು ಹೊರತಾಗಿ ವಿಷಯಗಳ ಭೋಗದಿಂದಲ್ಲವೆಂಬ ವಿಚಾರವು ನೆಲೆಗೊಳ್ಳಬೇಕು. ಸುಖವು ಸಾಕಾಗುವದೋ ಅಥವಾ ಭೋಗದ ಪದಾರ್ಥವು ಸಾಕಾಗುವದೋ? ಭೋಗದ ಪದಾರ್ಥವೇ ಸಾಕಾಗುವದು, ಆದರೆ ಸುಖವು

ಸಾಕಾಗುವದಿಲ್ಲ. ಆದ್ದರಿಂದ ಭೋಗ್ಯವಸ್ತುಗಳು ಸುಖದಾಯಕವಲ್ಲ. ಒನಪು, ವೈಯ್ಯಾರ, ಶಬ್ದದ ಇಂಪು ಇವುಗಳಿಂದ ಸುಖವು ಸಿಗುವದಿಲ್ಲ. ಜನರೊಡನೆ ಕುಶಲರೀತಿಯಿಂದ ಮಾತನಾಡಿದರೂ ನಮ್ಮೊಳಗೆ ಮಾತ್ರ ವಿಷಯಗಳನ್ನು ಪಡೆದುಕೊಳ್ಳುವ ವಿಚಾರವೇ ಇದೆ. ಹಾಗೆ ಹೊರಗೆ ವ್ಯವಹಾರ ನಡೆದರೂ ನಮ್ಮೊಳಗೆ ಸತತವೂ ಸುಖದ ವಿಚಾರವೇ ನಡೆಯಬೇಕು. ವಿಷಯವು ಆನಂದದಾಯಕವಾಗಿದ್ದರೆ, ವಿಷಯವಿದ್ದು ಮನಸ್ಸು ಚಂಚಲವಾದಾಗ ಆನಂದವು ನಮ್ಮ ಅನುಭವಕ್ಕೆ ಬರಬೇಕು. ಆದರೆ ಹಾಗೆ ಆಗುವದಿಲ್ಲ. ವಿಷಯವಿದ್ದಾಗಲೂ, ವಿಷಯವಿಲ್ಲದಿದ್ದಾಗಲೂ ಮನಸ್ಸು ನಿಶ್ಚಲವಾದಾಗ ಆನಂದವಿದ್ದೇ ಇದೆ. ಆದ್ದರಿಂದ ಆನಂದವು ಮನಸ್ಸಿನ ನಿಶ್ಚಲಸ್ಥಿತಿಯದ್ದು, ಆದರೆ ವಿಷಯದ್ದಲ್ಲ. ಹೀಗೆ ಆನಂದವು, ನಿರ್ವಿಷಯವು. ಅಂತರಂಗದಲ್ಲಿಯದು ಇರುವದು. ಆನಂದವು ಅಂತರಂಗದಲ್ಲಿಯದು ಎಂಬುದು ಸಾಧಕರ ಚಿತ್ತದ ಗಾಢತೆ, ದಾರ್ಢ್ಯತೆ, ಪ್ರಾಬಲ್ಯತೆಯನ್ನು ಅವಲಂಬಿಸಿದೆ. ಪ್ರಥಮಾನುಭೂತಿಯ ಆನಂದವನ್ನು ನೆನಪಿಸಿಕೊಂಡು ಆನಂದವು ಅಂತರಂಗದಲ್ಲಿದೆ, ಅದು ನಿರ್ವಿಷಯವು, ಮನಸ್ಸು ನಿಶ್ಚಲವಿದ್ದಾಗ ಇರುವದು ಎಂಬ ವಿಚಾರವು ಸತತವೂ ನಡೆಯಬೇಕು. ಮನಸ್ಸು ನಿಂತಾಗಲೆಲ್ಲಾ ಆನಂದದ ಅನುಭವ ಆಗುತ್ತದೆ ಎಂಬ ವಿಚಾರವು ಸತತವೂ ನಡೆಯಬೇಕು. ವಿಷಯಗಳು ಅನಿತ್ಯ, ಕ್ಷಣಿಕ, ಕಷ್ಟಸಾಧ್ಯವಾದವುಗಳು ಮತ್ತು ವಿಷಯಭೋಗದ ನಂತರ ನಿರಸವಾಗುವದು, ಎಂಬ ವಿಚಾರವು ಸತತವೂ ನಡೆಯಬೇಕು. ಆದ್ದರಿಂದಲೇ ಸ್ವಾಮಿ ರಾಮತೀರ್ಥರು "No man did get anything by praying, begging asking or seeking" (ಪ್ರಾರ್ಥನೆ ಮಾಡಿಕೊಳ್ಳುವದರಿಂದಾಗಲಿ, ಬೇಡಿಕೊಳ್ಳುವದರಿಂದಾಗಲಿ, ಕೇಳುವದರಿಂದಾಗಲಿ ಅಥವಾ ಹುಡುಕುವದರಿಂದಾಗಲಿ ಯಾರೂ ಏನನ್ನೂ ಪಡೆಯಲಿಲ್ಲ.) ಎಂದು ಹೇಳಿದ್ದಾರೆ. ಎಲ್ಲ ಭೋಗವಿಷಯಗಳ ಮಧ್ಯದಲ್ಲಿ ಕೂಡ್ರಿಸಿದರೂ ಏನು ವಿಕಾರವಾಗಬಾರದು. ಇಂಥ ಸ್ಥಿತಿಯು ಯಾರಿಗಿದೆಯೋ ಅವರೇ ಸನ್ಯಾಸಿಗಳು ಹೀಗೆ ಸುಖವು ತನ್ನದೇ ಮನಸ್ಸಿನ ನಿಶ್ಚಲ ಸ್ಥಿತಿಯದು, ಆದರೆ ವಿಷಯದ್ದಲ್ಲ ಎಂಬ ತಿಳುವಳಿಕೆಯು ದೃಢವಾಗಿ ನಂತರ ನಿಧಿಧ್ಯಾಸನ ನಡೆಯಬೇಕು. ಈ ರೀತಿ ಸ್ವಾಧ್ಯಾಯ ನಡೆದರೆ ಹರಿ-ಹರ ಬ್ರಹ್ಮರು ಅಸೂಹೆ ಪಡುವರು. ಆಗ ಮಾತ್ರ ತನ್ನ ಸ್ವಾನಂದ ಸಾಮ್ರಾಜ್ಯದಲ್ಲಿರಲು ಬರುವದು. ಬುದ್ಧನು ಮಾರಸ್ತ್ರೀಯರಿಗೆ ಒಲಿಯದೆ ತನ್ನ ಸ್ವಾನಂದ ಸಾಮ್ರಾಜ್ಯದಲ್ಲಿದ್ದನು. ಶ್ರೀ ಸದ್ಗುರು ಸಿದ್ಧಾರೂಢರ ತಲೆಯ ಮೇಲೆ ಬೆಂಕಿ ಇಟ್ಟರೂ ಅದರ ಪರಿವೆಯಿಲ್ಲದೆ ಅವರು ತಮ್ಮ



ಸ್ವರೂಪಾನಂದದಲ್ಲಿದ್ದರು. ಸದ್ಗುರು ಶಿವಾನಂದರು 3-4 ದಿನಗಳವರೆಗೆ ಸಹ ಇರುವಂಥ (1910ರಿಂದ 1923 ರವರೆಗೆ) ತುರ್ಯಸ್ಥಿತಿಯನ್ನು ಅನೇಕ ಸಲ ಹೊಂದುತ್ತಿದ್ದರು. ಕಾಮಾಂಧನಾದಾಗ ಉಳಿದದ್ದು ಏನೂ ಕಾಣಿಸುವದಿಲ್ಲವೆಂದಮೇಲೆ ಸ್ವರೂಪಾನಂದದಲ್ಲಿ ಇದ್ದಾಗ ಏನಾದರೂ ಕಾಣಿಸುವದೇ? ಅಸಾಧ್ಯವು.

* * * *

## 9-3-1978 ರ ಸಂಜೆ

ಸುಮ್ಮನೆ ಕಾಲವನ್ನು ಕಳೆಯುತ್ತಿದ್ದೇವೆ ಎಂಬುದು ಯಾರಿಗೆ ತಿಳಿದಿದೆ? ಯಾರಿಗೂ ತಿಳಿದಿಲ್ಲ. ಏಕೆಂದರೆ ಮಾನವನ ಜೀವನದ ಗುರಿ ಶಾಶ್ವತ ಸುಖವನ್ನು ಹೊಂದುವದಾದರೂ, ಆ ಶಾಶ್ವತ ಸುಖವನ್ನು ಹೊಂದುವ ಕ್ರಮವು ತಪ್ಪಿದೆ. ಆದ್ದರಿಂದ ಸುಖದ ಪ್ರಾಪ್ತಿಯ ಬದಲಾಗಿ ದುಃಖದ ಪ್ರಾಪ್ತಿಯೇ ನಡೆದಿದೆ. ಆದರೂ ಇದು ದುಃಖಿಯವೆಂದು ಅವನಿಗೆ ಹೊಳೆದಿಲ್ಲ. ಆದ್ದರಿಂದ ಅದೇ ವ್ಯವಹಾರದಲ್ಲಿಯೇ ತೊಡಗಿದ್ದಾನೆ. ಪಶುಗಳು ಆಹಾರ, ನಿದ್ರೆ, ಭಯ ಮತ್ತು ಮೈಥುನಗಳನ್ನು ಅತಿ ಸುಲಭರೀತಿಯಿಂದ ಹೊಂದುತ್ತವೆ. ಇದಕ್ಕಾಗಿ ಮಾನವರು ಅತಿ ಕಷ್ಟಪಡುತ್ತಾರೆ. ಅದಕ್ಕಾಗಿ ನಿಷಿದ್ಧ ಕೃತ್ಯಗಳನ್ನು ಸಹ ಕೆಲವರು ಕೆಲವು ಸಾರೆ ಮಾಡುತ್ತಾರೆ. ವಿಶೇಷವಾಗಿ ರಾಕ್ಷಸಿ ಮತ್ತು ಪಶುವೃತ್ತಿಯೇ ಮಾನವನಿಗೆ ರೂಢಿಗತವಾಗಿದೆ. ಆದ್ದರಿಂದ ಅತಿ ಹೀನ ಜನ್ಮಕ್ಕೆ ಹೋಗುತ್ತೇವೆ. ಮತ್ತೆ ಮಾನವ ಜನ್ಮವು ಬರುವದನ್ನು ತಪ್ಪಿಸಿಕೊಳ್ಳುತ್ತೇವೆ. ಆದ್ದರಿಂದ ಈ ರೀತಿಯಾಗಿ ಹಿಂಬಡತಿಯೇ ನಡೆದಿದೆ. ಚಿಂತೆಯನ್ನು ಕಳೆದುಕೊಂಡಿಲ್ಲ. ಈ ರೀತಿಯಾಗಿ ಸುಮ್ಮನೆ ಕಾಲವು ವ್ಯರ್ಥವಾಗಿ ಗತಿಸಿ ಹೋಗುತ್ತಿದೆ. ಶಾಶ್ವತ ಸುಖವನ್ನು ಪಡೆಯಲು ಮೊದಲು ಮುಮುಕ್ಷುತ್ವವನ್ನು ಪಡೆಯಬೇಕಾಗುತ್ತದೆ. ಇಹಪರ ಭೋಗವು ದುಃಖದಾಯಕವು ಎಂಬ ನಿಶ್ಚಿತ ತಿಳುವಳಿಕೆಯು ಯಾವನಿಗಾಗಿರುವದೋ ಅವನೇ ಮುಮುಕ್ಷುವು. ಮುಮುಕ್ಷುತ್ವವನ್ನು ಪಡೆಯಲು ಮೊದಲಿಗೆ ರಾಕ್ಷಸಿ ಮತ್ತು ಪಶುವೃತ್ತಿಯನ್ನು ಕಳೆದುಕೊಳ್ಳಬೇಕಾಗುವದು. ನಂತರ ಮಾನವ, ದೇವವೃತ್ತಿಗಳನ್ನು ಹೊಂದಬೇಕಾಗುವದು ಮತ್ತು ಅವೆರಡನ್ನೂ ಮೀರಬೇಕಾಗುವದು. ಅವೆರಡನ್ನು ಮೀರಿದ ವೃತ್ತಿಯೇ ದೇವಾತೀತವೃತ್ತಿಯೆನಿಸುವದು. ಈ ದೇವಾತೀತ ವೃತ್ತಿಯೇ ಮುಮುಕ್ಷುತ್ವವೆನಿಸುವದು. ಜಗತ್ತೆಂದರೆ ಮಳ್ಳ ಹುಡುಗರ

ಆಟವು. ನಮ್ಮ ಕರ್ಮದ ಕೂಲಿಯ ಪ್ರಕಾರ ಜಗತ್ತಿನ ಘಟನೆಗಳು ನಡೆದಿರುತ್ತವೆ ಎಂಬುದು ಹೊಳೆಯಬೇಕಾಗಿದೆ. ವಿಷಯಗಳಿಂದ ಸುಖವಿಲ್ಲ ಎಂಬುದು ನಿಶ್ಚಿತವಾಗಿ ತಿಳಿಯುವದು ಅತಿ ಕಠಿಣವಾಗಿದೆ. ವಿಶ್ವದ ವ್ಯವಹಾರವೆಲ್ಲವೂ ಬೇಸರಿಕೆಯದು ಎಂಬುದು ತಿಳಿಯಬೇಕಾಗಿದೆ. ಈ ರೀತಿಯ ತಿಳುವಳಿಕೆಯುಂಟಾದಾಗ ನಾನು ಯಾರು ಎಂದು ತಿಳಿದುಕೊಳ್ಳಲು ಸಹಾಯಕವಾಗುವದು. ನಾನು ಯಾರು ಎಂದು ತಿಳಿದುಕೊಂಡಾಗ (ತನ್ನ ನಿಜವು ತಿಳಿದಾಗ) ಜಗತ್ತು ಇಲ್ಲವೆಂದು ಖಾತ್ರಿಯಾಗುವದು ಮತ್ತು ಸಂಸಾರ ದುಃಖವು ನಾಶವಾಗುವದು. ಈ ಕೆಲಸವನ್ನು ಮುಂದೆ ಹಾಕಬಾರದು. ಹೀಗೆ ಮುಂದೆ ಹಾಕುತ್ತ ಹೋದರೆ ತನ್ನ ಸ್ವರೂಪಾವ ಸ್ಥಿತಿಯನ್ನು ಹೊಂದುವದು ಸಾಧ್ಯವಾಗುವದಿಲ್ಲ. ಆದ್ದರಿಂದ ಸ್ವರೂಪಾವಸ್ಥಿತಿಯನ್ನು ಹೊಂದುವ ಅಭ್ಯಾಸದಲ್ಲಿ ತೊಡಗಬೇಕಾಗಿದೆ. ಅಂದರೆ ಮುಂದಿನ ಪೀಳಿಗೆಯು ನಿಮ್ಮನ್ನು ಅನುಸರಿಸುವದು. ಈ ಕೆಲಸವು ಜನರ ಮಧ್ಯದಲ್ಲಿಯೇ ನಡೆಯಬೇಕಾಗಿದೆ. ಹೆಂಡರು ಮಕ್ಕಳೇನೂ ವಿಘ್ನವಾಗುವದಿಲ್ಲ. ವಿಘ್ನವಾದರೆ ಅವರನ್ನು ಕೈ ಬಿಡಲಿಕ್ಕೆ ಬರುತ್ತದೆ. ನಿದ್ರೆ ಬಂದಾಗ ಏನನ್ನೂ ಲೆಕ್ಕಿಸದೆ ನಿದ್ರೆಗೆ ಹೇಗೆ ಹೋಗುವೆವೋ ಹಾಗೆ ಏನನ್ನೂ ಲೆಕ್ಕಿಸದೆ (ಹರಿಹರ ಬ್ರಹ್ಮಾದಿಗಳನ್ನು ಕೂಡ) ಸ್ವರೂಪ ಸ್ಥಿತಿಯಲ್ಲಿರಬೇಕು. ಸಿದ್ಧಪುರುಷರ ಕೆಲಸವು ಮುಗಿದಿದೆ.

ಏನೋ ಮಜಾ ಎಂದು ಪ್ರವಚನವನ್ನು ಕೇಳಲು ಬಂದವರು ಕೂಡ ತಮ್ಮ ಸ್ವರೂಪಾವಸ್ಥಿತಿಯನ್ನು ಪಡೆಯುವ ಸಾಧ್ಯತೆ ಇದೆ. ಆದ್ದರಿಂದ ಅವರಿವರೆನ್ನದೆ ಭುವನದ ಮಾನವರೆಲ್ಲರಿಗೂ ಬ್ರಹ್ಮನಿಷ್ಠರು ವೈಯಾಕರಣಿ ಸ್ಥಿತಿಯಿಂದ ಬೋಧ ಮಾಡುವರು.

ಆ ಕೆಲಸ, ಈ ಕೆಲಸ, ಆ ಯೋಗ, ಈ ಯೋಗ ಎಂಬುದನ್ನು ಲೆಕ್ಕಿಸದೆ ಸ್ವರೂಪದಲ್ಲಿದ್ದರೆ ಕೆಲಸವು ತೀರಿಯೇ ಹೋಗುವದು.

ಜನನ-ಮರಣವಿಲ್ಲದಂತೆ ಮಾಡುವದೇ ಜನಿವಾರವು. ಜನಿವಾರವನ್ನು ಧಾರಣ ಮಾಡುವದೆಂದರೆ ಜ್ಞಾನವನ್ನು ಪರಿಶುದ್ಧ ಅಂತಃಕರಣದಲ್ಲಿ ಧಾರಣ ಮಾಡುವದೇ ಆಗಿದೆ. ಅಜ್ಞಾನವನ್ನು ನಾಶ ಮಾಡುವದೇ ಜನಿವಾರವು.

ಬ್ರಹ್ಮನಿಷ್ಠರು ಎಲ್ಲಿ ಶರೀರ ಧಾರಣ ಮಾಡುವರು ಎಂದು ಹೇಳಲಿಕ್ಕೆ ಬರುವದಿಲ್ಲ. ಸ್ತ್ರೀಯಾಗಿ ಅಥವಾ ಪುರುಷನಾಗಿ ಯಾವದೇ ದೇಶದಲ್ಲಿ, ಯಾವದೇ ಕುಟುಂಬದಲ್ಲಿ ಜನಿಸಬಹುದು.



ಏನಾದರೂ ಕರ್ಮವನ್ನು ಮಾಡಬೇಕಾದರೆ ಅದಕ್ಕೆ ಉದ್ದೇಶವಿರಲಿಕ್ಕೇ ಬೇಕು. ಈ ಉದ್ದೇಶವು ಜಗತ್ತಿನ ಬಗ್ಗೆಯೇ ಇರುವದು. ಆದರೆ ಜಗತ್ತು ಬೇಸರವಾದವನಿಗೇನು? ಅವನಿಗೆ ಯಾವ ಕರ್ಮವಿದೆ? ಅವನಿಗೆ ಯಾವ ಭಯವು ಇದೆ. ಯಮನು ಬಂದರೆ ಅವನ ಎದೆಯು ಬಿರ್ರನೆ ಬಿರಿಯುವಂತೆ ಒದೆಯಬೇಕು. ಯಮನು ತನ್ನ ಕನಸಿನಲ್ಲಿಯವನು.

ಸ್ವರೂಪದ ಜ್ಞಾನದಲ್ಲಿ ರತವಾದಂಥ ದೇಶವು ಭಾರತವು. ಇದೇ ಭಾರತದ ಸಂಸ್ಕೃತಿಯು. ಆದ್ದರಿಂದ ಭಾರತೀಯರೆಲ್ಲರೂ ತಮ್ಮ ಸ್ವರೂಪಜ್ಞಾನದಲ್ಲಿ ರತರಾಗುವದು ಮುಖ್ಯವಾಗಿದೆ. ತನ್ನ ನಿಜವನ್ನು ಬಿಟ್ಟು ಉಳಿದೆಲ್ಲ ಜ್ಞಾನವು ನಿಷ್ಪ್ರಯೋಜಕವು. ಉದಾಹರಣೆಗೆ:- ಆಕಾಶಗಮನ, ಚಂದ್ರ ಲೋಕಕ್ಕೆ ಹೋಗುವದರಿಂದ ಸುಖ ಸಿಗುವದೇ?

ಅನೇಕ ಗುರಿಗಳಿದ್ದರೆ ಅವೆಲ್ಲ ಗುರಿಗಳನ್ನು ಸಾಧಿಸುವದು ಸಾಧ್ಯವಿಲ್ಲ. ಆದರೆ ಒಂದೇ ಗುರಿಯಿದ್ದರೆ ಅದನ್ನು ಸಾಧಿಸಲು ಹೆಚ್ಚು ಸಹಾಯಕವಾಗುವದು. ಆದ್ದರಿಂದ ಶಾಶ್ವತ ಸುಖವನ್ನು ಕೊಡುವ ಸ್ವರೂಪಜ್ಞಾನವನ್ನೇ ಗುರಿಯನ್ನಿಟ್ಟುಕೊಂಡು ಅದನ್ನೇ ಸಾಧಿಸತಕ್ಕದ್ದು.

* * * *

## 10-3-1978 ರ ಮುಂಜಾನೆ

ದೇಹವು ಜಡವಿರುವದು. ಅದು ಏನನ್ನೂ ತಿಳಿಯಲಾರದು. ದೇಹವು ನಿನಗೆ ಕಾಣಿಸುವದು. ಆದ್ದರಿಂದ ದೇಹವು ದೃಶ್ಯವು. ತಿಳಿಯುವ ರೂಪದಿಂದ ಇರುವವನೇ ಅಜಡ ದೃಶ್ಯವು. ಅಹಂಕಾರವು ಜಡಾಜಡ ದೃಶ್ಯವು. ಅದೂ ಜಡವೇ. ಅಹಂಕಾರವು ಆತ್ಮನಿಂದ ಚೈತನ್ಯವನ್ನು ಪಡೆದು ಉಳಿದ ವಸ್ತುಗಳನ್ನು ಬೆಳಗುವದು. ಆದರೆ ಅರಿವಿನ ಘಟ್ಟಿಯು ಎಲ್ಲವನ್ನು ಬೆಳಗುವದು.

ಬಾಳ್ವೆಯು ನೆಟ್ಟಗಾಗಬೇಕೆಂದರೆ ಯಾರ ಬಾಳ್ವೆಯು ನೆಟ್ಟಗಾಗುವದು? ನೀನು ಹಿಂದೆ ಏನನ್ನು ಮಾಡಿರುವೆಯೋ ಅದರ ಫಲವನ್ನು ಉಣ್ಣಲೇ ಬೇಕಾಗುವದು. ಹಾಗಾಗಬೇಕು, ಹೀಗಾಗಬೇಕು ಎಂದರೆ ಸಾಧ್ಯವಿಲ್ಲ. ಪ್ರಾರಬ್ಧವೆಂಬ ದೂತನು ಶರೀರ ಪಾಲನೆಗಾಗಿ ಟೊಂಕಕಟ್ಟಿ ನಿಂತಿದ್ದಾನೆ. ಅದರ ಚಿಂತೆ ನಿನಗೇತಕೆ?ಶರೀರವೇನು ಒಮ್ಮೆ ಆರೋಗ್ಯವಿರುತ್ತದೆ, ಮತ್ತೊಮ್ಮೆ ಅನಾರೋಗ್ಯಕರವಾಗಿರುವದು, ಅನಾರೋಗ್ಯವಾದ

ಶರೀರಕ್ಕೆ ಔಷಧ ಕೊಡಸಿದರೆ ರೋಗವು ತಾತ್ಪೂರ್ತಿಕಾಗಿ ಹೋಗುವದು. ಆದರೆ ಮತ್ತೆ ರೋಗವು ಬರುವದು. ಹಸಿವು ನೀರಡಿಕೆ ತೃಪ್ತಿಪಡಿಸಿದರೆ ಮತ್ತೆ ಅವು ಬರುವವು. ಈ ಶರೀರವೇ ಹೋದರೆ ಮತ್ತೊಂದು ಶರೀರವು ಬರುವದು. ಇದಕ್ಕೆಲ್ಲ ಮೂಲಕಾರಣ ಅಜ್ಞಾನವೇ. ಮರಣ ಕಾಲದಲ್ಲಿ ಶರೀರ ಹೋದರೂ ಅಜ್ಞಾನವು ಹಾಗೂ ಅನೇಕ ವಾಸನೆಗಳು ಉಳಿಯುತ್ತವೆ. ಆದ್ದರಿಂದ ಅಜ್ಞಾನವನ್ನು ನಾಶಮಾಡುವದೇ ಮುಖ್ಯ ಕೆಲಸವಾಗಿದೆ. ತನ್ನ ಸ್ವರೂಪಜ್ಞಾನವನ್ನು ಪಡೆದಾಗಲೇ ಅಜ್ಞಾನವನ್ನು ಕಳೆದುಕೊಳ್ಳಲು ಸಾಧ್ಯವಾಗುವದು. ಆದ್ದರಿಂದ ತಾನು ಯಾರೆಂದು ತಿಳಿದರೆ ಸಂಸಾರ ದುಃಖವೆಲ್ಲವೂ ನಾಶವಾಗುವದು. ಅಜ್ಞಾನದ ಕಾರ್ಯವನ್ನು ತೆಗೆದರೆ ಅಜ್ಞಾನವು ಹೋಗುವದಿಲ್ಲ. ತನ್ನ ಸ್ವರೂಪದ ಜ್ಞಾನದಿಂದಲೇ ಅಜ್ಞಾನವು ಹೋಗುವದು. ಇದನ್ನು ಬಿಟ್ಟು ಗೊಂಬೆಗೆ ಹೋದರೆ ಏನೂ ಪ್ರಯೋಜನವಿಲ್ಲ. ಆದ್ದರಿಂದಲೇ ಮಹಾತ್ಮರು "ಅಜ್ಞಾನಮ್-ಅಧ್ಯಾಸಂ ಅಪನಯ" ಎಂದು ಹೇಳಿದ್ದಾಗಿದೆ.

ಈ ಜನ್ಮದ ಮನೆ-ಮಾರು, ಹೆಂಡತಿ-ಮಕ್ಕಳು ಈ ಜನ್ಮಕ್ಕಷ್ಟೇ. ಮುಂದಿನ ಜನ್ಮಕ್ಕೆ ಇವು ಬರಲಾರವು. ಆದರೆ ನಮ್ಮಲ್ಲಿರುವ ಸಂಸ್ಕಾರಗಳು ಒಂದು ಜನ್ಮದಿಂದ ಇನ್ನೊಂದು ಜನ್ಮಕ್ಕೆ ಬರುತ್ತವೆ. ಹೀನ ಸಂಸ್ಕಾರವು ಹೀನ ಜನ್ಮಕ್ಕೆ ಒಯ್ಯುವದು. ಹೀನ ಸಂಸ್ಕಾರದಿಂದ ಮಾನವ ಜನ್ಮ ಬರದೆ ಮತ್ತಾವದಾದರೂ (ಪ್ರಾಣಿ-ಪಕ್ಷಿ, ಕ್ರಿಮಿ-ಕೀಟಕ, ಸಸ್ಯ, ಪಿಶಾಚಿ) ಜನ್ಮ ಬಂದು ನಮ್ಮ ದುಃಖವನ್ನು ನಾಶಪಡಿಸಿಕೊಳ್ಳಲಿಕ್ಕೆ ಆಗುವದಿಲ್ಲ. ಆದರೆ ತನ್ನ ಸ್ವರೂಪವನ್ನು ತಿಳಿದುಕೊಳ್ಳುವ ಸಂಸ್ಕಾರದಿಂದ ಮತ್ತೆ ಮಾನವ ಜನ್ಮ ಬಂದು, ಈ ಜನ್ಮದಲ್ಲಿ ತನ್ನ ಸ್ವರೂಪವನ್ನು ತಿಳಿದುಕೊಳ್ಳುವ ದುಡಿಕೆಯು ಮುಂದುವರೆಯುತ್ತದೆ. ಆದ್ದರಿಂದ ಬ್ರಹ್ಮಜಿಜ್ಞಾಸೆಯನ್ನು ತಪ್ಪಿಸಿಕೊಳ್ಳುವದು ಮಹಾಪಾಪವು. ಈ ರೀತಿಯಾಗಿ ಬ್ರಹ್ಮಜಿಜ್ಞಾಸೆಯು ಲೋಕೋತ್ತರ ಸಾಧನೆಯು.

ಮಹಾತ್ಮರು ಜಗತ್ತು ಅತ್ಯಂತಾಭಾವವು ಎಂದು ಹೇಳಿದ್ದಾರೆ. "ಬ್ರಹ್ಮಸ್ಥವೆನಲಿಲ್ಲ, ಬ್ರಹ್ಮಕಾರ್ಯವೆನಲಿಲ್ಲ, ಬ್ರಹ್ಮವೆನಲಿಲ್ಲ."

ನಿದ್ರೆ ಬಂದವನು ಜಗತ್ತನ್ನೇ ತಂದು ತನ್ನ ಕಿಸೆಯಲ್ಲಿ ಹಾಕಿದರೂ ಒಲ್ಲೆನೆಂದು ನಿದ್ರೆಯನ್ನೇ ಮಾಡುವನು. ಅದೇ ರೀತಿ ನಾವು ಯಾವುದನ್ನೂ ಲೆಕ್ಕಿಸದೇ ಸ್ವರೂಪವನ್ನು ಹೊಂದಬೇಕಾಗಿದೆ. ನಿದ್ರೆಯು ಬಂದಾಗ ಹೇಗೆ ಎಲ್ಲವೂ ಬೇಡಾಗುವದೋ, ಹಾಗೆ ಹುಟ್ಟುವದು, ಮತ್ತು ಹೊಂದುವದು ಬೇಸರವಾದಾಗ ಸ್ವರೂಪವನ್ನು ಹೊಂದಲು ಬರುವದು.



ಜ್ಞಾನಾಮೃತದಿಂದ ತೃಪ್ತನಾದವನಿಗೆ ಕರ್ತವ್ಯವೇ ಇಲ್ಲ. ಒಂದು ವೇಳೆ ಕರ್ತವ್ಯವು ಇದೆ ಎಂದರೆ ಅವನು ತತ್ತ್ವವನ್ನು ತಿಳಿದುಕೊಂಡವನೇ ಅಲ್ಲ.

ಯಾವದು ಎರಡನೆಯವರಿಗೆ ಅಸಂತೋಷವನ್ನುಂಟು ಮಾಡುವದೋ ಅದನ್ನು ಬಿಡಬೇಕು. ಪರಸ್ಪರರಿಗೆ ಸಂತೋಷಗೊಳಿಸುವದನ್ನೇ ಮಾಡಬೇಕು. ಇದೇ ಈಶ್ವರ ಪೂಜೆಯು.

* * * *

## 10-3-1978 ರ ಸಂಜೆ

"ನರಜನ್ಮದಿಂದ ಇಹದೊಳು ಮಿಗಿಲುಂಟೆ" ಶರೀರ ಧಾರಣಮಾಡಿದರೆ ದುಃಖವೇ. ಮಾನವಜನ್ಮದಿಂದ ಮತ್ತೊಮ್ಮೆ ಶರೀರ ಧಾರಣ ಮಾಡುವದನ್ನು ತಪ್ಪಿಸಿಕೊಳ್ಳಲು ಬರುತ್ತದೆ. ಆದರೆ ಪ್ರಾಣಿಗಳಿಗೆ ಇದು ಸಾಧ್ಯವಿಲ್ಲ. ಆದ್ದರಿಂದ ಮಾನವ ಜನ್ಮವು ಶ್ರೇಷ್ಠವು.

ಶರೀರವಿದ್ದದ್ದರಿಂದಲೇ ಸಂಕಟವಿದೆ. ನಾವು ಯಾವ ಶರೀರದಿಂದ ಸುಖವನ್ನು ಹೊಂದಬೇಕೆಂದು ಬಯಸುತ್ತೇವೆಯೋ ಆ ಶರೀರದ ಸಲುವಾಗಿಯೇ ದುಃಖವುಂಟಾಗಿದೆ. ಈ ದುಃಖವೆಲ್ಲ ಮನಸ್ಸಿಗೇ, ಶರೀರಕ್ಕಲ್ಲ. ಆತ್ಮನಿಗೆ ಬೇಡಿಕೆಯಿಲ್ಲ, ಮನಸ್ಸಿಗೇ ಬೇಡಿಕೆ ಇದೆ. ಮನಸ್ಸಿನ ಬೇಡಿಕೆ ವಿಷಯಗಳಿಗಾಗಿ ಇದೆ. ಆ ವಿಷಯಗಳನ್ನು ಶರೀರದ ಇಂದ್ರಿಯಗಳ ಮುಖಾಂತರ ಭೋಗಿಸುವದರಿಂದ ಸುಖವು ಸಿಗುತ್ತದೆ ಎಂಬ ತಿಳುವಳಿಕೆ ಇದೆ. ಆ ವಿಷಯಗಳ ಸಲುವಾಗಿ ಮನಸ್ಸಿಗೆ ಚಿಂತೆ. ಇದರಿಂದ ಮನಸ್ಸು ಚಂಚಲವಾಗುತ್ತದೆ. ಈ ಮನಸ್ಸಿನ ಚಂಚಲತೆಯಿಂದ ದುಃಖವು ಉಂಟಾಗಿದೆ. ಸುಖದ ಸಲುವಾಗಿ ಮನಸ್ಸಿನೊಳಗೆ ವಿಷಯಗಳನ್ನು ಪಡೆಯುವ ಕಾಮವು ಉದಯಿಸಿದರೂ, ಈ ಕಾಮದಿಂದಲೇ ಮನಸ್ಸಿಗೆ ದುಃಖವಾಗಿದೆ. ವಿಷಯ ಸುಖವು ತೋರಿ ಹೋಗುವದು, ಉಳಿಯುವದಿಲ್ಲ. ಶರೀರ ಧಾರಣ ಮಾಡುವದು ತಪ್ಪಿದರೆ ದುಃಖನಾಶವಾಗುವದು. ಶರೀರ ಧಾರಣ ಮಾಡಿದರೂ ಶರೀರ ತಾನು ಅಲ್ಲ. ಶರೀರ ತನಗೆ ಇಲ್ಲ ಎಂಬ ಅನುಭವವಿರಲು ಅವನಿಗೆ ದುಃಖವಿಲ್ಲ. ವಿಷಯಗಳನ್ನು ದೊರಕಿಸುವಾಗ, ಭೋಗಿಸುವಾಗ, ವಿಷಯಗಳು ಕಸಿದುಕೊಳ್ಳಲ್ಪಟ್ಟಾಗ, ಕಳೆದುಹೋದಾಗ, ನಾಶವಾದಾಗ ಮನಸ್ಸಿಗೆ ಚಿಂತೆಯೇ ದುಃಖವೇ ಇರುವದು. ಈ ದೇಹವು ತಾನೆಂಬ ತಿಳುವಳಿಕೆಯನ್ನು ಈ ಮಾನವ ಜನ್ಮದಲ್ಲಿ ತಾನು ಯಾರು

ಎಂಬ ವಿಚಾರದಿಂದ ನಾಶಮಾಡಿಕೊಳ್ಳಲು ಬರುತ್ತದೆ. ಆದ್ದರಿಂದ ಮಾನವ ಜನ್ಮವೇ ಶ್ರೇಷ್ಠವಾದುದು.

ಸಂಸ್ಕಾರ ಮತ್ತು ಕರ್ಮಕ್ಕನುಗುಣವಾದ ಜನ್ಮವು ಬರುವದು. ಮಾನವ ಜನ್ಮಕ್ಕೆ ಅನುಗ್ಗುಣವಾದ ಸಂಸ್ಕಾರ ಮತ್ತು ಕರ್ಮವಿದ್ದರೆ ಮಾನವ ಜನ್ಮ ಬರುವದು. ಇಲ್ಲದಿದ್ದರೆ ಮಾನವ ಜನ್ಮವು ಬರುವದು ಅಸಾಧ್ಯವು. ಉಳಿದ ಜೀವಿಗಳ ಜನ್ಮಕ್ಕೆ ಅನುಗುಣವಾದ ಸಂಸ್ಕಾರ ಮತ್ತು ಕರ್ಮವಿದ್ದರೆ ಆ ಜೀವಿಗಳ ಶರೀರವೇ ಬರುತ್ತದೆ. ಮಾನವರಿಗೆ ಸ್ವರೂಪಾನುಭವವಾಗುವದು ಅವರ ಪೂರ್ವಜನ್ಮದ ಸಂಸ್ಕಾರ ಮತ್ತು ಈಗಿನ ದುಡಿಕೆಯನ್ನವಲಂಬಿಸಿದೆ. ಯೋಗಾಭ್ಯಾಸಿಗಳ ಮಧ್ಯದಲ್ಲಿ ಹುಟ್ಟಿ ಸ್ವರೂಪಾವಸ್ಥಿತಿಯನ್ನು ಪಡೆಯಬಹುದು. ಬ್ರಹ್ಮನಿಷ್ಠರ ಹೊಟ್ಟೆಯಿಂದ ಹುಟ್ಟಿದರೂ ಅವನ ಸಂಸ್ಕಾರಗಳು ಯೋಗ್ಯವಾಗಿರದಿದ್ದರೆ ಬ್ರಹ್ಮಾಭ್ಯಾಸಕ್ಕನುಗುಣವಾಗಿರದಿದ್ದರೆ ಹಾಗೂ ಅವನ ಸುತ್ತಲೂ ಯೋಗಾಭ್ಯಾಸಿಗಳು ಇರದಿದ್ದರೆ, ಸ್ವರೂಪಜ್ಞಾನವು ಆಗುವದಿಲ್ಲ. ಆದ್ದರಿಂದ ಶರೀರವು ಬೀಳುವದರೊಳಗಾಗಿ ಸ್ವರೂಪಾವಸ್ಥಿತಿಯನ್ನು ಹೊಂದುವ ಕೆಲಸವನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ರೀತಿಯಾಗಿ ಮಾನವನಿಗೆ ತಾನು ಯಾರು ಎಂದು ತಿಳಿದು ಶಾಶ್ವತ ಸುಖವನ್ನು ಹೊಂದಲಿಕ್ಕೆ ಬರುವದರಿಂದ ಮಾನವ ಜನ್ಮವು ಶ್ರೇಷ್ಠವು.

ಮಾನವಜನ್ಮವಿದ್ದೂ ತನ್ನ ನಿಜಸ್ವರೂಪವೇನು ಎಂಬುದನ್ನು ತಿಳಿದುಕೊಳ್ಳದಿದ್ದರೆ ಮಾನವ ಜೀವನವು ವ್ಯರ್ಥವಾಗುವದು. ಊಟ-ಕೂಟಗಳಲ್ಲಿ ವೇಳೆ ಕಳೆದರೆ ಏನು ಪ್ರಯೋಜನ? ಮಾನವ ಶರೀರವಿದ್ದರೂ ಪಶುವೃತ್ತಿಯಿದ್ದರೆ ಅವನು ಪಶುವೇ ಸರಿ. ಆಕಾಶದಲ್ಲಿಯ ಹದ್ದಿನ ದೃಷ್ಟಿಯು ಭೂಮಿಯ ಮೇಲಿರುವ ಕೊಳಕು ಮಾಂಸದ ಮೇಲೆಯೇ ಇರುವದು. ಹಾಗೆ ಮಾನವ ಶರೀರವಿದ್ದರೂ ಹೀನ ವಿಷಯಗಳ ಮೇಲೆಯೇ ಮಾನವನ ದೃಷ್ಟಿಯು ಇರುವದು. ಭೋಗದ ಶಿಲ್ಕು ದುಃಖವೇ. ಎಲ್ಲವೂ ತದ್ವಿರುದ್ಧವಾಗಿ ನಡೆದಿದೆ. ಮಾನವ ಶರೀರವಿದೆ ಆದರೆ ತಾನಾರೆಂಬ ವಿಚಾರ ನಡೆದಿಲ್ಲ. ಪ್ರಾಣಿಗಳ ಕಾರ್ಯಗಳನ್ನೇ ಕೈಕೊಂಡಿದ್ದಾನೆ. ಪ್ರಾಣಿಗಳ ಜನ್ಮವಿದೆ, ಆದರೆ ತಾನಾರೆಂಬ ವಿಚಾರ ನಡೆಯಲು ಸಾಧ್ಯವಿಲ್ಲ. ಪ್ರಾಣಿಗಳಿಗೆ ಆಹಾರ, ನಿದ್ರೆ, ಮೈಥುನ, ವ್ಯವಹಾರ ಸುಲಭ. ಇದು ಮಾನವರಿಗೆ ಅತಿ ಕಠಿಣ. ಆದ್ದರಿಂದಲೇ ಮರಣಾನಂತರ ಕೆಲವರು ದುರ್ವಾಸನೆಗಳ ಮೂಲಕ ಪಿಶಾಚಿಯಾಗಿ, ಜೀವಿಗಳಿಗೆ ಪೀಡೆ ಕೊಡುವರು. ಈ ಪೀಡೆಯನ್ನು ಅನುಭವಿಸುವದು ತಮ್ಮ ತಮ್ಮ ಕರ್ಮಾನುಸಾರ ನಡೆದಿದೆ. ಕರ್ಮಫಲ ತೀರಲು ಕಾಕತಾಲೀಯವತ್ ಬ್ರಹ್ಮನಿಷ್ಠರ ಸಂಗದಿಂದ ಆ



ಪೀಡೆಗಳು ದೂರವಾಗಬಹುದು. ಎರಡನೆಯವರ ತಪ್ಪೆಣಿಸುವದರಲ್ಲಿ ಏನೂ ಪ್ರಯೋಜನವಿಲ್ಲ. ಇನ್ನೊಬ್ಬರ ಸುರಳಿತವಾದ ವ್ಯವಹಾರದಲ್ಲಿ ಕೈ ಹಾಕಿ ಅವರ ವ್ಯವಹಾರವನ್ನು ಕೆಡಿಸಿದರೆ ಅತಿ ಹೆಚ್ಚಿನ ಪಾಪವನ್ನು ಹೊರಬೇಕಾಗುತ್ತದೆ. ಬ್ರಹ್ಮನಿಷ್ಠರ ಸನ್ನಿಧಿಯಲ್ಲಿದ್ದರೂ ವಿಷಯಗಳ ಕಡೆಗೇ ಲಕ್ಷವಿರುವದು ಹಾಗೂ ಬ್ರಹ್ಮನಿಷ್ಠರು ವಿಷಯಗಳನ್ನು ಯಾರಿಗೆ ಕೊಡುವರು ಮತ್ತು ಅವುಗಳನ್ನು ಯಾರು ತೆಗೆದುಕೊಳ್ಳುವರು ಎಂಬುದರ ಕಡೆಗೇ ಲಕ್ಷವಿರುವದು. ಶಾಸ್ತ್ರವನ್ನು ಕೇಳುತ್ತಿದ್ದರೂ ಜೀವನ ಮನಸ್ಸು ಹೀನ ವಿಷಯಗಳ ಕಡೆಗೆ ಹರಿಯುವದು ಇದ್ದರೆ ಏನೂ ಪ್ರಯೋಜನವಿಲ್ಲ. ಅದು ಮತ್ತಷ್ಟು ಕೆಡಕೇ ಸರಿ.

ಗುರುತಿಲ್ಲದೆ ಅಜ್ಞಾನವು ಬಂದು ಆವರಿಸುವದು. ವಿವೇಕವು ಯಾವಾಗಲೂ ಜಾಗ್ರವಿರಬೇಕಾಗುವದು. ನಿನ್ನ ಲಕ್ಷವು ಶಿವಸಾಯುಜ್ಯದ ಕಡೆಗೇ ಇರಲಿ. ಉತ್ತರೋತ್ತರ ಪಾರಮಾರ್ಥಿಕ ಏಳಿಗೆಯು ಆಗಬೇಕು. ಮನಸ್ಸು ಸುಖದೊಡನೆ ಸಾಮರಸ್ಯವಾಗಬೇಕು. ಸುಖದ ವಿಚಾರ ಯುಕ್ತಿ, ದೃಷ್ಟಾಂತಗಳ ಬಗ್ಗೆಯೇ ವಿಚಾರವು ನಡೆಯಬೇಕು. ಮನಸ್ಸು ಹೊರಗೆ ಹೋಗುವದನ್ನು ನಿಲ್ಲಿಸಬೇಕು. ಶ್ರವಣ ಮಾಡುವ ಕಾಲಕ್ಕೆ ಎಲ್ಲ ಅಧ್ಯಾತ್ಮ ವಿಚಾರಗಳನ್ನು ಸಂಗ್ರಹ ಮಾಡಿಕೊಳ್ಳಬೇಕು. ಅದನ್ನು ಮನನ ಮಾಡಿ ಅನುಭವಿಸಬೇಕು. ಈ ಶರೀರದ ಮತ್ತು ಜಗತ್ತಿನ ಗೊಡವೆ ನಿನಗ್ಯಾತಕೊ? ಇದೆಲ್ಲವೂ ಮಾನವನಿಗೆ ಸಾಧ್ಯವಿರುವದರಿಂದ ಮಾನವ ಜನ್ಮವು ಶ್ರೇಷ್ಠವಾದುದು.

ದಿನಾಲು ಧ್ಯಾನಕ್ಕೆ ಕೂಡ್ರಬೇಕು. ಧ್ಯಾನಕ್ಕೆ ಕೂತಾಗ ಸುಖದ ಬಗ್ಗೆ ವಿಚಾರವು ನಡೆಯಬೇಕು. ಬಕಧ್ಯಾನವು ಏನೂ ಪ್ರಯೋಜನವಿಲ್ಲ. ಧ್ಯಾನದಲ್ಲಿ ತೊಡಗಿದ ಮನಸ್ಸಿನಿಂದಲೇ ಸುಖವು ಅನುಭವಕ್ಕೆ ಬರುವದು. ವಿಷಯಗಳ ಕಡೆಗೆ ಮನಸ್ಸು ಹರಿಯುವದು ನಿಂತರೆ ಆನಂದವೇ ಇರುತ್ತದೆ. ವಿಶ್ವದ ಎಲ್ಲ ವಿಚಾರವು ನಾಶವಾದಾಗ ಆನಂದವೇ ಇರುತ್ತದೆ. ಆನಂದಕ್ಕೆ ನಾಮ ರೂಪ ಕ್ರಿಯೆ ಇಲ್ಲ. ಆನಂದವು ಸಮ, ವ್ಯಾಪಕ ಮತ್ತು ನಿರ್ದೋಷವಿದೆ. ಇದನ್ನು ಸಾಧಿಸುವದು ಅತಿ ಕಠಿಣವಿರುತ್ತದೆ. ಆದ್ದರಿಂದ ಪೂರ್ಣಸಿದ್ಧನಾಗುವವರೆಗೆ ಬ್ರಹ್ಮನಿಷ್ಠನ ಹತ್ತರವಿರು. ಇದು ಮಾನವನಿಗೆ ಬರುತ್ತದೆ. ಆದ್ದರಿಂದ ಮಾನವ ಜನ್ಮವು ಶ್ರೇಷ್ಠವು.

ಸ್ವರೂಪಾನಂದವನ್ನು ವಿಷಯಾನಂದಕ್ಕೆ ಹೋಲಿಸಲಿಕ್ಕೆ ಬರುವದಿಲ್ಲ. ಜಪ, ತಪ, ಪೂಜೆಗಳು ವ್ಯರ್ಥವು. ಮೂರು ಲೋಕದ ಐಶ್ವರ್ಯವನ್ನು ಪಡೆದರೂ ದುಃ

ಖವೇ. ಇರುವು ಪೂರ್ಣವಿದೆ. ಆನಂದಮಯವಿದೆ. ಇದೆಲ್ಲವೂ ಮಾನವ ಜನ್ಮದಿಂದ ಪಡೆಯಲು ಮಾತ್ರ ಸಾಧ್ಯ. ಆದ್ದರಿಂದ ಮಾನವ ಜನ್ಮವು ಶ್ರೇಷ್ಠವಾದುದು.

* * * *

## 11-3-1978 ರ ಮುಂಜಾನೆ

ಜಗತ್ತಿನ ತೆಗಳಿಕೆಗೆ ಕಿವಿಗೊಡಬೇಕಾಗಿಲ್ಲ ವಿಶ್ವವೇ ಹೊಯ್ಯಕೊಂಡರೂ ಕಿವಿಗೊಡಬೇಕಾಗಿಲ್ಲ. ನಿನ್ನ ನಿಜಕ್ಕೆ ಯಾರೂ ಏನೂ ಅನ್ನಲಿಕ್ಕೆ ಬರುವದಿಲ್ಲ.

ಮಂದಿಯ ವಿಷಯಗಳಿಗೆ ಕೈ ಹಾಕಲಿಕ್ಕೆ ಹೋಗಬಾರದು. ನಿನ್ನ ಪ್ರಾರಬ್ಧಕ್ಕೆ ತಕ್ಕಂತೆ ಇರುವದರಲ್ಲಿಯೇ ತೃಪ್ತಿಯನ್ನು ಹೊಂದು.

ವಿಷಯೇಂದ್ರಿಯ ಸಂಪರ್ಕಭೋಗವು ಸುಖವಲ್ಲ. ಸುಖದಾಯಕವಿದ್ದಿದ್ದರೆ ಅದು ಬೇಸರವಾಗುತ್ತಿರಲಿಲ್ಲ. ಅದು ದುಃಖದಾಯಕವೇ ಸರಿ.

ವಿಶ್ವದಲ್ಲಿ ಸತ್ಯತ್ವ ಬುದ್ಧಿ ಇದ್ದರೆ ಸಂಕಟವು ಹೋಗುವದಿಲ್ಲ. ಈ ಜಗತ್ತು ಕನಸಾದಾಗಲೇ ಚಿಂತೆಯು ಕಡಿಯುವದು. ನಿನ್ನ ಭಾವಕ್ಕೆ ಅವಸ್ಥೆಗಳು, ನಿನ್ನ ಭಾವವು ಅಡಗಿದಾಗ ಮತ್ತು ನಾಶವಾದಾಗ ಸುಖವೇ ಇರುತ್ತದೆ.

* * * *

## 13-3-1978 ರ ಸಂಜೆ

ರಾಗದ್ವೇಷ ರಹಿತನಾಗಿದ್ದು ಇಂದ್ರಿಯಗಳ ವ್ಯವಹಾರವು ನಡೆದರೂ ನಮ್ಮ ಲಕ್ಷವು ನಮ್ಮ ನಿಜದಿರುವಿನ ಕಡೆಗೆ ಇದ್ದರೆ ಸುಖವೇ ಇರುತ್ತದೆ.

ಬರೇ ಉದರಪೋಷಣೆಯ ವ್ಯವಹಾರ ನಡೆದರೆ ಜನ್ಮ ತಪ್ಪಿದ್ದಲ್ಲ. ತನ್ನ ಶರೀರದ, ತನ್ನ ಹೆಂಡತಿ ಮತ್ತು ಮಕ್ಕಳ ಶರೀರದ ಪಾಲನೆ-ಪೋಷಣೆ, ಮಾನ-ಮರ್ಯಾದೆಯ ಸಲುವಾಗಿಯೇ ಜನ್ಮವೇ ಕಳೆದು ಹೋಗುತ್ತದೆ. ಶರೀರ ಚರಿತಾರ್ಥಕ್ಕಾಗಿ ಎಷ್ಟು ಬೇಕೋ ಅಷ್ಟು ದುಡಿಯಬೇಕು. ಹೆಚ್ಚಿನ ಸಂಗ್ರಹವು ಬೇಡ. ಊರೂರು ತಿರುಗಾಡಿದರೂ ಹೊಟ್ಟೆಯ ಚಿಂತೆಯು ಹೋಗುವದಿಲ್ಲ. ಬ್ರಹ್ಮವಿದ್ಯೆಯಿಂದ ಹೊಟ್ಟೆಯ ಚಿಂತೆಯು ನಾಶವಾಗುವದು. ಆಗ ಶರೀರವೇ ಉಳಿಯುವದಿಲ್ಲ.



ಕಲಿತಂತೆ, ಓದಿದಂತೆ, ಬರೆದಂತೆ, ಪ್ರವಚನ ಹೇಳಿದಂತೆ ಅವೆಲ್ಲವುಗಳ ಬಗ್ಗೆ ಅಹಂಕಾರವು ಬೆಳೆಯುವ ಸಂಭವವೂ ಇದೆ. ಈ ಅಹಂಕಾರವು ಬರೇ ಆಡಂಬರವನ್ನೇ ನಡೆಸಲು ಕಾರಣೀಭೂತವಾಗುತ್ತದೆ. ನಂತರ ಹೀನ ಕೃತ್ಯಗಳು ನಡೆದು ಹೀನ ಜನ್ಮಕ್ಕೆ ಕಾರಣವಾಗುತ್ತವೆ.

ಮಗ ಹುಟ್ಟಿದರೇನು, ಸತ್ತರೇನು? ಆ ಶರೀರದ ಪ್ರಾರಬ್ಧವಿದ್ದಂತೆ ಆಗುತ್ತದೆ. ಪ್ರಾರಬ್ಧವು ಪ್ರತಿಯೊಬ್ಬರ ಶರೀರದ ಪಾಲನೆ ಪೋಷಣೆ ಮಾಡುತ್ತದೆ. ಶರೀರವು ನಮಗೆ ಅಂಟಿಕೊಂಡಿಲ್ಲ. ಶರೀರ ಹೋದರೆ ನಾವು ಹೋಗುವುದಿಲ್ಲ. ಶರೀರ ಬಂದರೆ ನಾವು ಬರುವದಿಲ್ಲ. ಅದು ಹೋದರೆ ಅದರೊಡನೆ ನಾವು ಹೋಗುವದಿಲ್ಲ. ಶರೀರದ ಚಿಂತೆ ಇದ್ದಾಗ ದುಃಖವು, ಆದ್ದರಿಂದ ಶರೀರದ ಚಿಂತೆಯನ್ನು ಬಿಡು.

ಶ್ರವಣವೆಂದರೆ ಅಡಿಗೆಯ ಸಾಮಾನುಗಳ ಸಂಗ್ರಹ ಮಾಡಿದಂತೆ. ಮನನವು ಅಡಿಗೆ ಮಾಡಿದಂತೆ, ನಿಧಿಧ್ಯಾಸನವು ಊಟ ಮಾಡಿದಂತೆ. ಮನನ ಮಾಡದಿದ್ದರೆ ಶ್ರವಣ ಮಾಡಿದ್ದು ಏನೂ ಉಳಿಯುವದಿಲ್ಲ.

ಹೊರಗೆ ಬಾಳ್ವೆ ಒಳಗೆ ಆತ್ಮಚಿಂತನೆ ನಡೆಯಬೇಕು. ಅಂದರೆ ಚಿಂತೆಯು ನಾಶವಾಗುತ್ತದೆ. ಆದರೆ ತದ್ವಿರುದ್ಧ ನಡೆದಿದೆ. ಆದ್ದರಿಂದಲೇ ಚಿಂತೆಯು ಹೆಚ್ಚಾಗಿದೆ. ಶಿವಾನಂದರು ದಿನಾಲು ಎರಡು ವೇಳೆ ಗಸ್ತಿ ತಿರುಗುತ್ತಿದ್ದರೂ ಅಂತರಂಗದಲ್ಲಿ ಆತ್ಮಚಿಂತನವು ನಡೆಯುತ್ತಿತ್ತು. ಬ್ರಹ್ಮನಿಷ್ಠರ ಜೀವನವು ಅಡ್ಡಗೋಡೆಯ ಮೇಲಿನ ದೀಪದಂತಿರುತ್ತದೆ. (ಒಳಗೂ-ಹೊರಗೂ ಕೂಡಿ) ಮಹಾತ್ಮರ ಚರಿತ್ರೆ ನೋಡಿದರೆ ಸ್ವರೂಪ ಜ್ಞಾನವಾಗುವಂತಿರುತ್ತದೆ. ಏಕೆಂದರೆ ಅವರು ತಮ್ಮ ಜೀವನದಲ್ಲಿ ನಡೆದು ತೋರಿಸಿರುತ್ತಾರೆ.

ನಾವು ಸ್ವರೂಪ ಹೊಂದಿದರೆ ಉಳಿದ ಎಲ್ಲ ಕೆಲಸಗಳು ಪ್ರಾರಬ್ಧದಂತೆ ಹಿಂಬಾಲಿಸಿ ಬರುತ್ತವೆ. ಆದ್ದರಿಂದ ಸ್ವರೂಪವನ್ನು ಹೊಂದುವದರಿಂದ ವ್ಯವಹಾರವೂ ಸುಗಮವಾಗಿ ಸಾಗುವದು ಮತ್ತು ಶಾಶ್ವತ ಸುಖವೂ ಸಿಗುವದು. ವಿಷಯಾಲಂಬಿತವಾದರೆ ವ್ಯವಹಾರವೂ ಸುಗಮವಾಗಿ ನಡೆಯುವದಿಲ್ಲ. ಮತ್ತು ಸುಖವಂತೂ ಸಿಗುವದಿಲ್ಲ. ದುಃಖವೇ ಹೆಚ್ಚಾಗುವದು. (ಹಿಂದಿನ ಮನೆಯ ಭಿಕ್ಷೆ ಇಲ್ಲ, ಮುಂದಿನ ಮನೆಯ ಕೋರಾನ್ನ ಇಲ್ಲ).

ಸತತವೂ ಮನಸ್ಸಿನ ಸ್ಥಿತಿಯನ್ನು ಅಭ್ಯಾಸ ಮಾಡಿದರೆ ಹೊರಗಿನ ಯಾವದೇ

ವಸ್ತುವು ಸುಖವನ್ನು ಕೊಡಲಾರದು ಎಂಬುದು ತಿಳಿಯುವದು. ಆದರೆ ಇದು ಅತಿ ಕಠಿಣವಿದೆ. ಎಲ್ಲವನ್ನು ಬಿಟ್ಟು, ಆತ್ಮಚಿಂತನೆಯನ್ನು ಮಾಡುವವರಿಗೇನೇ ಇದು ಸಾಧ್ಯವು. ಅದಕ್ಕಾಗಿ ಎಲ್ಲ ವೇಳೆಯನ್ನು ಸ್ವಾನಂದ ಸಾಮ್ರಾಜ್ಯದಲ್ಲಿ ನಿಲ್ಲುವದಕ್ಕಾಗಿ ಕಳೆಯಬೇಕು. ಜಾಗ್ರವು ಮನಸ್ಸಿನ ಕಲ್ಪನೆಯು, ಕನಸಿನಂತೆ ಇರುತ್ತದೆ. ಹೀಗಾದಾಗ ದೇಹದ ಚಿಂತೆ ಕಳೆಯುತ್ತದೆ. ತಾನು ಅವಿಕಾರಿ ಇದ್ದಾನೆ, ದ್ರಷ್ಟಾ ಇದ್ದಾನೆ ಎಂಬುದು ತಿಳಿಯುತ್ತದೆ. ಆಗ ತನ್ನ ಶರೀರವನ್ನು ಸಾಕ್ಷಿಯಾಗಿ ನೋಡುವನು. ಈ ಸುಖವನ್ನು ತನ್ನೊಳಗೇ ಹೊಂದಬೇಕಾಗುತ್ತದೆ. ಆದ್ದರಿಂದ ತನ್ನ ನಿಜವನ್ನು ತಿಳಿಯುವದೇ ಅತಿ ಶ್ರೇಷ್ಠ ಕೆಲಸವು. ಈ ಜ್ಞಾನವನ್ನು ಹೇಳುವವರು ಹಿರಿಯರು. ಜಗತ್ತಿನ ವಸ್ತುಗಳ ಜ್ಞಾನವನ್ನು ಮಾಡಿ ಕೊಡುವವರು ಕಿರಿಯರು. ನಿದ್ರೆಯ ಆನಂದವನ್ನು ಮತ್ತು ಸ್ವರೂಪಾನಂದವನ್ನು ಮರೆಯಲು ಸಾಧ್ಯವಿಲ್ಲ.

* * * *

## 14-3-1978 ರ ಮುಂಜಾನೆ

"ಎಂತೊಲಿವನೋ ತನಗಿನ್ನೆಂತೊಲಿವನೋ, ಕರಣತ್ರಯ ದೋಷಮಿರೆ, ಕಂತು ಕಾಲ ಪುರವೈರಿ ಗುರುಶಂಭುಲಿಂಗ"

ಶಾಶ್ವತ ಸುಖವನ್ನು ಹೊಂದಬೇಕಾದರೆ ಕರಣವಿಜಯಿಗಳಾಗಬೇಕಾಗುತ್ತದೆ. ಶಾಶ್ವತ ಸುಖವನ್ನು ಹೊಂದಲು ಮೂರು ಪ್ರಕಾರದ ಕರಣದೋಷಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಮೊದಲನೆಯದು ಕಾಯದ ದೋಷ. ಎರಡನೆಯದು ಮಾತಿನ ದೋಷ ಮೂರನೆಯದು ಮನಸ್ಸಿನ ದೋಷ.

I. ಕಾಯದ ದೋಷ: 1) ಪರವಧುವಿನ ಕೂಟ: ಪರರ ಸ್ತ್ರೀಯರ ಕೂಡ ಭೋಗವನ್ನು ಮಾಡದೆ ಇರುವದು. ಸ್ವಸ್ತ್ರೀಯು ಕೂಡ ಕೆಲವು ನಿಯಮಗಳಿಗನುಸಾರವಾಗಿ ಭೋಗವನ್ನು ಮಾಡಬೇಕಾಗುವದು. (ಋತುಮತಿಯಾದ ಕಾಲ (5 ದಿನಗಳು), ಪ್ರದೋಷ, ಅಮವಾಸ್ಯೆ, ಕೆಲವು ನಕ್ಷತ್ರ, ತಿಥಿ, ವಾರ ಇವುಗಳನ್ನು ಬಿಟ್ಟು ಉಳಿದ ಕಾಲದಲ್ಲಿ ಭೋಗವನ್ನು ಮಾಡುವದು.) ಇದೇ ತಪಸ್ಸು. ಮಣಿ ಎಣಿಸುವದು ತಪಸ್ಸಲ್ಲ. ಮನಸ್ಸಿನ ಚಂಚಲತೆಯನ್ನು ಕಡಿಮೆ ಮಾಡಲು ಸ್ವಸ್ತ್ರೀ ಗಮನವನ್ನು ಕಡಿಮೆ ಮಾಡಬೇಕು.

2. ಅನ್ಯರ ವಿತ್ತಾಪಹರಣ: ಎರಡನೆಯವರ ಹಣವನ್ನು ನಿಷಿದ್ಧ ರೀತಿಯಿಂದ



ತೆಗೆದುಕೊಳ್ಳದೇ ಇರುವದು. ಹೆಣ್ಣು, ಮಣ್ಣು, ಹೊನ್ನು, ಎಲ್ಲವೂ ವಿತ್ತವೇ. ಇವುಗಳನ್ನು ನಿಷಿದ್ಧ ರೀತಿಯಿಂದ ಬಳಸಬಾರದು. ನಡತೆಹೀನನ ಮಾತುಗಳನ್ನು ಕಡೆತನಕ ನಂಬಬೇಡ. ಕ್ರಿಯಾಘಟ್ಟಿ ಅಂದರೆ ನಡತೆ ಘಟ್ಟಿ ಇರುವದು. ನೀತಿ ಇಲ್ಲದೆ ಬ್ರಹ್ಮಜ್ಞಾನವಾಗುವದಿಲ್ಲ.

3. ಅಭಕ್ಷ್ಯ ಸೇವನೆ:- ರಾಜಸಿಕ-ತಾಮಸಿಕ ಆಹಾರವನ್ನು ಬಿಡಬೇಕು. ಚಹಾ, ಕಾಫಿ, ಕುಡಿಯಬಾರದು. ಅಮಲಿನ ಪದಾರ್ಥಗಳನ್ನು ಸೇವಿಸಬಾರದು. (ಶೆರೆ, ಸಿಂದಿ ಮುಂತಾದವು) ಸಾತ್ವಿಕ ಆಹಾರವನ್ನು ಕೂಡ ಮಿತಿಯಂದ ಸೇವಿಸಬೇಕು. ಈ ನಿಯಮಗಳನ್ನು ಪಾಲಿಸದಿದ್ದರೆ ಆರೋಗ್ಯವು ಕೆಡುತ್ತದೆ. ಬುದ್ಧಿಯು ಕೆಡುತ್ತದೆ.

4. ಹಿಂಸೆ: ಶರೀರದಿಂದ ಜೀವಿಗಳಿಗೆ ಪೀಡೆಯನ್ನು ಕೊಡಬಾರದು.

II. ಮಾತಿನ (ವಾಣಿಯ ದೋಷ): ಸುಳ್ಳು ಹೇಳುವದು, (ಪುಸಿ) ಅಸಹ್ಯವಾಗಿ ಮಾತನಾಡುವದು (ಅನುಚಿತ), ನಿಷ್ಠುರತ್ವತನದಿಂದ ಮಾತನಾಡುವುದು (ನಿಷ್ಠುರತ್ವ) ಚಾಡೀ ಹೇಳುವದು, ಇವುಗಳನ್ನು ಬಿಡಬೇಕು. ಇದನ್ನು ಆಚರಿಸದಿದ್ದರೆ ಪಶು-ಪಕ್ಷಿಯಾಗಿ ಜನ್ಮತಾಳಬೇಕಾಗುವದು.

III. ಮನಸ್ಸಿನ ದೋಷ:- ಜೀವಿಗಳಿಗೆ ಕೆಡುಕನ್ನು ಬಯಸುವದು, (ಜನರೊಲಿಯದ ಕಾರ್ಯದೆರಕ), ಕೆಟ್ಟ ವಿಚಾರ (ಅನಿಷ್ಟ ಚಿಂತನೆ) ಅನ್ಯರ ಧನವನ್ನು ಬಯಸುವದು (ಅನ್ಯರ ಧನದ ಆಕಾಂಕ್ಷೆ) ಪರಸ್ತ್ರೀಯರನ್ನು ಬಯಸುವದು (ಅನ್ಯಸತಿಯರ ಆಕಾಂಕ್ಷೆ)ಇವುಗಳನ್ನು ಬಿಡಬೇಕು. ಈ ಮನಸ್ಸಿನ ದೋಷಗಳು ಹೀನ ಜನ್ಮಕ್ಕೆ ಒಯ್ಯುವವು. ಬಾಯಿಯಿಂದ ಸಿಹಿ ಮಾತು, ಆದರೆ ಹೃದಯದಲ್ಲಿ ಕಾಮನ ಕದನ ನಡೆದಿದೆ. ಈ ಮೇಲಿನ ಕರಣದ ದೋಷಗಳನ್ನು ಕಳೆದುಕೊಳ್ಳದೆ ಶಾಶ್ವತಸುಖವನ್ನು ಹೊಂದಲು ಸಾಧ್ಯವಿಲ್ಲ.

* * * *

## 14-3-1978 ರ ಸಂಜೆ

ಅದು ಆದ ಮೇಲೆ, ಇದು ಆದ ಮೇಲೆ ಆತ್ಮವಿಚಾರ ಮಾಡಬೇಕೆಂದು ಸಾಮಾನ್ಯವಾಗಿ ಅನಿಸುತ್ತದೆ. ಆದರೆ ಅದು, ಇದು ಆಗೋದು ಯಾವಾಗ?ಆತ್ಮವಿಚಾರವು ನಡೆಯುವದು ಯಾವಾಗ?ಉದಾಹರಣೆಗೆ ಶರೀರದ ರೋಗ ಹೋದ ಮೇಲೆ ಆತ್ಮವಿಚಾರ ಮಾಡಬೇಕು ಎಂಬ ವಿಚಾರವಿದ್ದಾಗ ಶರೀರವು

ಎಂದಿಗಾದರೂ ರೋಗದಿಂದ ಮುಕ್ತವಾಗಬಲ್ಲುದೇ? ಸಾಧ್ಯವಿಲ್ಲ. ವಯಸ್ಸಾದಂತೆ ಶರೀರವು ರೋಗಕ್ಕೀಡಾಗುವದೇ ಸರಿ. ಶರೀರದ ಗುಣಧರ್ಮವೇ ಅದು. ಅದರಂತೆ ಬಾಳ್ವೆ ನೆಟ್ಟಗಾದ ಮೇಲೆ ಆತ್ಮವಿಚಾರ ಮಾಡಬೇಕೆಂಬ ವಿಚಾರವಿದ್ದರೆ ಎಂದಿಗೆ ಬಾಳ್ವೆಯು ನೆಟ್ಟಗಾಗುವದು? ಬಾಳ್ವೆಯು ಸೊಟ್ಟವಾಗುವದೇ ಹೊರತು ನೆಟ್ಟಗಾಗುವದಿಲ್ಲ. ಈಗ ತಾನು ಬಯಸಿದಂತೆ ಯಾವದೂ ಆಗುವದಿಲ್ಲ. ಎಲ್ಲವೂ ಪ್ರಾರಬ್ಧದಂತೆ ನಡೆಯುತ್ತದೆ. ಆದ್ದರಿಂದ ನನ್ನ ಪ್ರಾರಬ್ಧದ ಪ್ರಕಾರ ಹಾಗಾಯಿತಲ್ಲ! ಹೀಗಾಯಿತಲ್ಲ! ಎನ್ನುತ್ತ ಚಿಂತೆ ಮಾಡುತ್ತ ಕುಳಿತರೆ ಪ್ರಯೋಜನವೇನು? ಆದ್ದರಿಂದ ಪ್ರಾರಬ್ಧವನ್ನು ಲೆಕ್ಕಿಸದೆ ಆತ್ಮಚಿಂತನೆಯಲ್ಲಿ ಕಾಲವನ್ನು ಕಳೆಯಬೇಕು. ನೋವು, ಸಾವು, ವ್ಯಾಧಿ, ಹಸಿವು, ಅಪನಿಂದೆ ಬಂದರೂ ಲೆಕ್ಕಿಸಬಾರದು. ಪ್ರತಿಯೊಬ್ಬರು ಉಳಿದವರನ್ನು ತಮ್ಮಂತೆಯೇ ಮಾಡಿಕೊಳ್ಳುವ ಗುಣಧರ್ಮದವರಾಗಿದ್ದಾರೆ. ವಿಷಯೀ ಜನರು ಯಾವಾಗಲೂ ಜಗತ್ತಿನ ಬಗೆಗೆ ಹೇಳುವದನ್ನೂ ಕೇಳುವದನ್ನೂ ಮಾಡುವರು. ಇಂಥ ಪ್ರಾಪಂಚಿಕ ಜಡ ಸಂಗವನ್ನು ಮಾಡುವದರಿಂದ ನಾವೂ ಅವಿವೇಕಿಗಳಾಗುವ ಸಂಭವವೇ ಹೆಚ್ಚು. ಆತ್ಮಚಿಂತನೆ ಮಾಡುವವರೇ ವಿವೇಕಿಗಳು. ಅವರೇ ಆಪ್ತರು. ಏಕೆಂದರೆ ಅವರೇ ಸುಖವನ್ನು ಕೊಡಬಲ್ಲರು. ಆದರೆ ವಿವೇಕಿಗಳ ಸಂಗವು ದೊರೆಯುವದು ದುರ್ಲಭ. ಆದ್ದರಿಂದ ತಾನು ಮಾತ್ರ ಹೊರಗಿನ ಪರಿಸರವನ್ನು ಲಕ್ಷಿಸದೆ ಆತ್ಮಚಿಂತನೆಯಲ್ಲಿ ತೊಡಗಬೇಕು.

ತನ್ನ ನಿಜವನ್ನು ತಿಳಿದುಕೊಳ್ಳಲು ಸತತವಾದ ಅಭ್ಯಾಸವು ಬೇಕಾಗುತ್ತದೆ. ಆದ್ದರಿಂದ ಮೊದಲು ಬ್ರಹ್ಮನಿಷ್ಠರ ವಚನಗಳನ್ನು ನೆನಪಿಡಬೇಕು. ನಂತರ ಅವುಗಳನ್ನು ದಿನಾಲೂ ಮನನ ಮಾಡಬೇಕು.

ಶರೀರವು ದುಃಖಮಯ, ಸ್ವರೂಪವು ಸುಖಮಯ, ಆದ್ದರಿಂದ ಸುಖ ಬೇಕಾದರೆ ಸ್ವರೂಪ ಅವಲಂಬಿಸು. ದುಃಖವು ಬೇಕಾದರೆ ಶರೀರ ಜಗತ್ತನ್ನು ಅವಲಂಬಿಸು.

ನಿಂದೆ, ಸ್ತುತಿ, ಆಸ್ತಿ, ವಿದ್ಯೆ, ಸಂಬಂಧಿಕರು ಯಾವವೂ ನಿಮ್ಮ ಬೆನ್ನು ಹತ್ತಿ ಬರುವದಿಲ್ಲ. ಆದರೆ ನಮ್ಮ ಸಂಸ್ಕಾರಗಳೇ ನಮ್ಮ ಬೆನ್ನುಹತ್ತಿ ಬರುವವು. ಯಾವ ಸಂಸ್ಕಾರದ ದುಡಿಕೆಯಿಂದ ಶರೀರವನ್ನು ಬಿಡುತ್ತಾನೋ ಅದೇ ಸಂಸ್ಕಾರದಿಂದ ಮುಂದಿನ ಜನ್ಮವನ್ನು ಪಡೆಯಬೇಕಾಗುತ್ತದೆ. (ಯಾವ ಸಂಸ್ಕಾರದಿಂದ ಮಲಗುವೆವೋ ಅದೇ ಸಂಸ್ಕಾರವು ಮುಂಜಾನೆ ಎಚ್ಚರವಾದ ಕೂಡಲೇ ಬರುವದು.)



ಪ್ರಬಲವಾದ ಸಂಸ್ಕಾರವು ಮೊದಲು ಬರುವದು, ನಂತರ ದುರ್ಬಲ ಸಂಸ್ಕಾರಗಳು ಬರುವವು. ಬಾಲ್ಯಾವಸ್ಥೆಯಲ್ಲಿ ಅನೇಕ ಸಂಸ್ಕಾರಗಳು ಬೆಳೆಯುವವು. ಪ್ರಬಲವಾದ ಸಂಸ್ಕಾರವೇ ನೆನಪಿಗೆ ಬರುವದು. ಯಾವದರ ಸುದ್ದಿಯು ನಮಗೆ ಪ್ರಿಯವೋ ಆ ಪ್ರಬಲ ಸಂಸ್ಕಾರವೇ ಹಿಂದಿನ ಜನ್ಮದಿಂದ ಬಂದಿರುವದು. ಜೀವನ ಕಳೆದಂತೆ ಸಂಸಾರ ವಾಸನೆಗಳು ಪ್ರಬಲವಾಗುವವು. ಮುಪ್ಪಿನಲ್ಲಿ ಆ ಪ್ರಬಲ ಸಂಸಾರ ವಾಸನೆಗಳನ್ನು ನಾಶಪಡಿಸುವದು ಅತಿ ಕಠಿಣವಿದೆ. ಆದ್ದರಿಂದ ಬಾಲ್ಯಾವಸ್ಥೆಯಿಂದಲೇ ಆತ್ಮಚಿಂತನೆಯ ಸಂಸ್ಕಾರಗಳನ್ನು ಬೆಳೆಸಿಕೊಳ್ಳಬೇಕು. ಹೊರಗಿನ ವಿಷಯಗಳ ಚಿಂತೆ ಮಾಡದೆ ಆತ್ಮಚಿಂತನೆಯಲ್ಲಿಯೇ ಕಾಲ ಕಳೆಯಬೇಕು. ಮೊದಲು ವಿಷಯಗಳ ಸಂಸ್ಕಾರಗಳಿರುವವು (ಸುಪ್ತವಾಗಿರುವವು) ಬೇರೆಯವರು ಆ ವಿಷಯಗಳ ಬಗ್ಗೆ ಮಾತನಾಡಿದರೆ ನಮ್ಮಲ್ಲಿರುವ (ಸುಪ್ತವಿರುವ) ಆ ವಿಷಯಗಳ ವಾಸನೆಗಳು ಪ್ರಬಲವಾಗುವವು. ಮದುವೆಯನ್ನು ಒಮ್ಮೆಯೇ ಮಾಡುತ್ತಾರೆ. ಆಗ ಈಕೆಯೇ ನನ್ನ ಹೆಂಡತಿ, ಅಥವಾ ಇವನೇ ನನ್ನ ಗಂಡ ಎಂಬುದು ಜೀವನವಿಡೀ ಮರೆಯುವದಿಲ್ಲ. ಯಾಕೆಂದರೆ ಹಿಂದಿನ ಜೀವನದಲ್ಲಿ ಅದರ ಬಗ್ಗೆ (ಗಂಡ-ಹೆಂಡತಿ) ಅಥವಾ ಗಂಡು ಹೆಣ್ಣುಸಂಸ್ಕಾರವು ಪ್ರಬಲವಿರುವದು. ಆದರೆ ಆತ್ಮವಿಚಾರ ಸಾವಿರ ಸಲ ಹೇಳಿದರೂ ನೆನಪೇ ಉಳಿಯುವದಿಲ್ಲ. ತನ್ನ ಸ್ವರೂಪದ ಸೂತ್ರವೇ ಸುಸೂತ್ರವು. ಬಾಳ್ವೆಯ ಸೂತ್ರವು ಸುಸೂತ್ರವಲ್ಲ. ಬಾಳ್ವೆಯು ಎಂದಿಗೂ ಸುಸೂತ್ರವಾಗಿ ನಡೆಯುವಂಥದ್ದಲ್ಲ. ಸ್ವರೂಪದ ಬಗೆಗೆ ಮನನವು ಸತತವಾಗಿ ನಡೆದರೆ ಸಂಸ್ಕಾರವು ಗಟ್ಟಿಯಾಗುವದು. ಅನೇಕ ಯುಕ್ತಿಗಳಿಂದ ಸ್ವರೂಪದ ಸೂತ್ರವನ್ನು ಅನುಭವದಲ್ಲಿ ತೆಗೆದುಕೊಳ್ಳುವದಕ್ಕೆ ಸತತವೂ ಪ್ರಯತ್ನಿಸಬೇಕು. ಈ ರೀತಿ ನಡೆದರೆ ಇದೇ ಜನ್ಮದಲ್ಲಿ ಸಂಸಿದ್ಧನಾದರೆ ತೀರಿಯೇ ಹೋಯಿತು. ಇಲ್ಲದಿದ್ದರೆ ಮಾನವ ಜನ್ಮಕ್ಕೆ ಅನುಗುಣವಾದ ಕರ್ಮ ಮತ್ತು ವಾಸನೆಗಳಿರುವದರಿಂದ, ಮಾನವ ಜನ್ಮವು ಬಂದು ಈ ಸ್ವರೂಪ ಸೂತ್ರದ ಸಂಸ್ಕಾರವೇ ಮುಂದುವರಿದು ಸಂಸಿದ್ಧನಾಗಬಹುದು. ಆದ್ದರಿಂದ ಮತ್ತೆ ಜನ್ಮ ಬರದಂತೆ ಸ್ವರೂಪವನ್ನು ಹೊಂದುವದೇ ಕೆಲಸ. ಆದರೆ ಇದನ್ನು ಬಿಟ್ಟು ಹೀನ ಕರ್ಮಗಳನ್ನೆಸಗಿದರೆ ಮತ್ತು ಹೀನ ವಾಸನೆಗಳಿದ್ದರೆ ಅವು ನಮ್ಮನ್ನು ಹೀನ ಜನ್ಮಕ್ಕೇ ಒಯ್ಯುವವು. ಹಿತ-ಅಹಿತಗಳನ್ನು ಮಾಡಿದ್ದಕ್ಕಾಗಿ ಪ್ರತಿಫಲವನ್ನು ಭೋಗಿಸಿಯೇ ತೀರಿಸಬೇಕಾಗುತ್ತದೆ.

* * * *

## 15-3-1978 ರ ಮುಂಜಾನೆ

ತನ್ನ ಸ್ವರೂಪದ ಅಜ್ಞಾನವೇ ಅನ್ಯಥಾ ಜ್ಞಾನಕ್ಕೆ ಕಾರಣವಾಗಿದೆ. ಅನ್ಯಥಾ ಜ್ಞಾನವು ರಾಗ-ದ್ವೇಷಗಳಿಗೆ ಕಾರಣವಾಗಿದೆ. ರಾಗ-ದ್ವೇಷಗಳು ಕರ್ಮಕ್ಕೆ ಕಾರಣವಾಗಿವೆ. ಕರ್ಮವು ದೇಹದ ಉತ್ಪತ್ತಿಗೆ ಕಾರಣವಾಗಿದೆ. ದೇಹವು ದುಃಖಕ್ಕೆ ಕಾರಣವಾಗಿದೆ. ತನ್ನ ದೇಹವೂ, ಉಳಿದವರ ದೇಹಗಳೂ ದುಃಖವನ್ನೇ ಕೊಡುವವು. ಆದ್ದರಿಂದ ದುಃಖಕ್ಕೆ ಅಜ್ಞಾನವೇ ಕಾರಣವಾಗಿದೆ. ಈ ಅಜ್ಞಾನವು ತನ್ನ ಸ್ವರೂಪದ ಜ್ಞಾನದಿಂದಲೇ ನಾಶವಾಗುವದು. ತನ್ನ ಸ್ವರೂಪ ಜ್ಞಾನವನ್ನು ಹೊಂದಲು ದೇಶ, ಕಾಲ, ವ್ಯಕ್ತಿ, ಲಿಂಗ ಭೇದಗಳಿಲ್ಲ.

ಪ್ರಥಮಾನುಭೂತಿಯಲ್ಲಿ ಯಾವ ಮಾಧ್ಯಮವೂ ಇಲ್ಲ, ತರ್ಕವಿಲ್ಲ, ಪ್ರಮಾಣವಿಲ್ಲ, ಷಟ್‌ಶಾಸ್ತ್ರವಿಲ್ಲ. ಅದನ್ನು ಮರೆತದ್ದಾಗಿದೆ. ಈಗ ಅದನ್ನು ನೆನಪಿಸಿಕೊಳ್ಳಬೇಕಾಗಿದೆ. ಇದಕ್ಕೆ ತನ್ನ ಅರಿವಿನ ಗುಲಾಮ ತಾನಾಗಬೇಕಾಗಿದೆ. ಕರ್ಮಕ್ಕೆ ಅನುಸಾರವಾಗಿ ಎಲ್ಲವೂ ನಡೆಯುವದೇ, ಅದನ್ನು ತಪ್ಪಿಸಲಿಕ್ಕೆ ಸಾಧ್ಯವಿಲ್ಲ.

* * * *

## 15-3-1978 ರ ಸಂಜೆ

ಬಯಲಿಗೆ ದಾರಿ ತೋರಿಸಲಿಕ್ಕೆ ಬರುವದೇ? ಇಲ್ಲ ಏಕೆಂದರೆ ಬಯಲು ಎಲ್ಲ ಕಡೆಗೂ ಇದೆ. ಬಯಲು ಪಾರಮಾರ್ಥಿಕ ದೃಷ್ಟಿಯಿಂದ ಪರಿಚ್ಛಿನ್ನವಿದೆ. ಸತ್ಯವು ಇದ್ದೇ ಇದೆ. ಅಜ್ಞಾನದಿಂದ ಆವೃತವಾಗಿದೆ. ಸತ್ಯವೂ ಬಯಲಿಗಿಂತ ಬಯಲು, ನಿರ್ಬಯಲು. ಈಗಾಗಲೇ ನೀವು ಸದ್ರೂಪವೇ ಇದ್ದೀರಿ. ಆದ್ದರಿಂದ ಅದಕ್ಕೆ ದಾರಿ ಬೇಕಾಗಿಲ್ಲ.

ಅಜ್ಞಾನದಿಂದ ನಾವಲ್ಲದಂಥಹ ವಸ್ತುಗಳನ್ನು ಕಲ್ಪಿಸಿಕೊಂಡು ಅವುಗಳನ್ನೇ ಬಂಧನಕಾರಿಯಾಗಿ ಮಾಡಿಕೊಂಡಿದ್ದೇವೆ. ಆದ್ದರಿಂದ ಈ ಕಲ್ಪನೆಗಳನ್ನು ನಾಶಪಡಿಸುವದೇ ಕೆಲಸ. ಸದ್ರೂಪ ಇರುವು ಇದ್ದಕ್ಕಿದ್ದಂತೆ ಇದೆ. ಪಂಚಕೋಶಗಳೆಲ್ಲವೂ ಕಲ್ಪನೆಯೇ. ಇವುಗಳಿಂದ ಇರುವು ಬಾಧವಾಗಿಲ್ಲ. ಐದೂ ಕೋಶಗಳನ್ನು ಮೀರಿ ಅವುಗಳನ್ನು ಸಾಕ್ಷಿರೂಪದಿಂದ ತಿಳಿಯುತ್ತೀ. ಅವಸ್ಥೆಗಳೆಲ್ಲ ಕಲ್ಪನೆಗಳೇ. ಅವಸ್ಥೆಗಳಿಗೆ ಆಧಾರವಾಗಿರುವವನು ತಾನು. ಭಾವ, ಅಭಾವಗಳನ್ನು ಹೇಳಬೇಕಾದರೆ ತಾನು ಇದ್ದೇ ಹೇಳಬೇಕಾಗುತ್ತದೆ. ನಿದ್ರೆಯಲ್ಲಿ ಆಕಾಶವಿಲ್ಲ. ಆದರೆ



ತಾನಿರುವನು. ನೀನು ಎಲ್ಲ ಅವಸ್ಥೆಗಳಲ್ಲಿರುವಿ. ಆ ಅವಸ್ಥೆಗಳ ವಿಕಾರ, ವ್ಯವಹಾರ ತನಗೆ ಹತ್ತಿಲ್ಲ. ತನ್ನ ಸ್ವರೂಪವನ್ನು ಮರೆತಿದ್ದಾನೆ. ಪುನಃ ಅದನ್ನು ನೆನಪು ಮಾಡಿಕೊಳ್ಳಬೇಕಾಗಿದೆ.

ಮನಸ್ಸು ಅಡಗಿದಾಗ ಶರೀರ ನಾನು ಅನ್ನುವವರಾರು? ಆದ್ದರಿಂದ ಮೂರ್ಛೆ, ನಿದ್ರೆ, ಸಮಾಧಿಯಲ್ಲಿ ಈ ಶರೀರವು ನಾನು ಎನ್ನಲಿಕ್ಕೆ ಬರುವದಿಲ್ಲ. ಎಲ್ಲವೂ ಮನಸ್ಸಿನಲ್ಲಿಯೇ ತೋರಿ ಮನಸ್ಸಿನಲ್ಲಿಯೇ ಅಡಗುತ್ತದೆ. ನಿದ್ರೆಯಲ್ಲಿ ನಾವು ಆನಂದರೂಪರಾಗಿರುತ್ತೇವೆ. ಮನಸ್ಸಿನ ಕಲ್ಪನೆ ಮನಸ್ಸಿಗೇ, ಸ್ವರೂಪಕ್ಕೇನೂ ಬಾಧೆಯಿಲ್ಲ. ನಿದ್ರೆಯಲ್ಲಿ ಇನ್ನೊಬ್ಬರಿದ್ದಾರೆಂಬ ಕಲ್ಪನೆಯೂ ಇಲ್ಲ. ನಿದ್ರೆಯಲ್ಲಿ ಎಲ್ಲರೂ ಆನಂದರೂಪರೇ. ಅಲ್ಲಿ ಯಾರು ಯಾರನ್ನು ನೋಡುವರು? ಯಾರೂ ಯಾರನ್ನೂ ನೋಡಲಾರರು. ಅಲ್ಲಿ ಭೇದವನ್ನುಂಟು ಮಾಡುವವರು ಯಾರೂ ಇಲ್ಲ. "ನ ಅತ್ರ ಕಾಚನ ಭಿದಾ ಅಸ್ತಿ". ನಿದ್ರೆಯ ಆನಂದವನ್ನು ಅಲ್ಲಿ ಅನುಭವಿಸಿ ಎಚ್ಚರವಾದ ಮೇಲೆ ಆ ಆನಂದದ ಸ್ಮೃತಿಯು ಉಳಿದಿರುವದು. ಮನಸ್ಸು ತಾನೇ ಕಲ್ಪಿಸಿ ತಾನೇ ಬಂಧನಕ್ಕೊಳಗಾಗಿದೆ. ಕಲ್ಪನೆಯೆಲ್ಲ ಮನಸ್ಸಿಗೆ ಸ್ವರೂಪಕ್ಕಲ್ಲ. ನಿದ್ರೆಯಲ್ಲಿ ಏನೂ ತಿಳಿಯದೆ ಆನಂದರೂಪದಿಂದಿದ್ದೆ. ಮನಸ್ಸಿಟ್ಟುಕೊಂಡು ಆನಂದವಿರಲಿಕ್ಕೆ ಬರುವದಿಲ್ಲ. ಆದ್ದರಿಂದ ಸುಜ್ಞಾನದಿಂದ ಮನೋನಾಶವಾಗಬೇಕು. ಕನಸು ಎಚ್ಚರಿಕೆಗಳು ಮನಸ್ಸಿನ ಸೃಷ್ಟಿಯೇ. ಎಚ್ಚರಿಕೆಯೂ ಕನಸೆಂದು ನಿಶ್ಚಿತವಾಗಬೇಕು. ಸಮಾಧಿಯನ್ನು ಹೊಂದಲು ಜಾಗ್ರವು ಇಲ್ಲವೆಂಬುದು ನಿಶ್ಚಿತವಾಗಬೇಕಾಗುತ್ತದೆ. ಆಗ (ಸಮಾಧಿಯಲ್ಲಿ) ನಿನ್ನ ನಿಜ ಸ್ವರೂಪವೇ ಉಳಿದಿರುವದು. ಜಾಗ್ರಕ್ಕೆ ಬಂದಾಗ ಎಲ್ಲವೂ ಬುರ್ ಬುಶ್ ಎಂದೆನಿಸುವದು. ನಿನ್ನಲ್ಲಿ ಜಗತ್ತು ಇಲ್ಲವೆಂದ ಮೇಲೆ ಅದರ ಬಗ್ಗೆ ಚಿಂತೆಯಾತಕೆ? ಮನಸ್ಸು ಸಚ್ಚಿದಾನಂದವನ್ನು ಎಂದಿಗೂ ಕೆಡಿಸಲಾರದು. ಮನಸ್ಸು ತಾನೇ ದಣಿದು ನಿದ್ರೆಯಲ್ಲಿ ಲಯವಾಗುವದು. ಮನಸ್ಸು ನಿದ್ರೆಯಿಂದ ಎಚ್ಚರಿಕೆಗೆ ಬಂದು ದಣಿದು ತಿರುಗಿ ನಿದ್ರೆಗೆ ಹೋಗುವದು. ಆನಂದಮಯ ಇರುವಿಗೆ ಯಾವ ಬಾಧೆಯೂ ಇಲ್ಲ. ಆದ್ದರಿಂದ ಮನಸ್ಸಿನ ಪರೀಕ್ಷಣೆ ನಿರೀಕ್ಷಣೆಯನ್ನು ಶಾಂತರೀತಿಯಿಂದ ಮಾಡಬೇಕು. ಎಲ್ಲವೂ ಮನಸ್ಸಿನಲ್ಲಿ ತೋರಿ ಅಡಗುವದು "ಮನಸ್ಸು ನಿನ್ನಲ್ಲಿ ತೋರುವದು. ಆದ್ದರಿಂದ ಎಲ್ಲದಕ್ಕೂ ನೀನೇ ಆಧಾರನು, "ನೇಹ ನಾನಾಸ್ತಿ ಕಿಂಚನ" ಅನೇಕವಿಲ್ಲವೇ ಇಲ್ಲ. ಒಂದೇ ಇದ್ದರೆ ತೋರಿಸುವ ಕ್ರಿಯೆಯು ನಡೆಯಲಾರದು. ಅನ್ಯವಿದ್ದರೆ ತೋರಿಸುವದು ನಡೆಯುವದು. ಒಂದೆಂಬ ಎರಡೆಂಬ ಭಾವವೂ ಇಲ್ಲ. "ಅಧ್ಯರೋಪ

ಅಪವಾದಾಭ್ಯಾಂ ನಿಷ್ಪ್ರಪಂಚಂ ಪ್ರಪಂಚ್ಯತೆ" ಪ್ರಪಂಚವು ಮನಸ್ಸಿಗೆ ಕಾಣಿಸುವದು. ನಿನಗೆ ಕಾಣಿಸುವದಿಲ್ಲ. ಮನಸ್ಸು ನಿದ್ರೆಯಲ್ಲಿ ಅಡಗಿದಾಗ ನೀನಿರುವಿ. ಆಗ ನಿನಗೆ ಜಗತ್ತು ಕಾಣಿಸುತ್ತದೆಯೇ? ಮನಸ್ಸನ್ನು ಚೆನ್ನಾಗಿ ಪರೀಕ್ಷಿಸಿದರೆ ಮನಸ್ಸಿನ ಕಲ್ಪನೆಯು ನಾಶವಾಗುವದು.

* * * *

## 16-3-1978 ರ ಮುಂಜಾನೆ

ತ್ರಿಪುಟಿ ಇರುವವರೆಗೆ ಜ್ಞಾನವಿಲ್ಲ. ಮಾಯೆಯು ಅಜಡ ದೃಶ್ಯವು. ಎಲ್ಲವೂ ಮಾಯೆ ಮತ್ತು ಮಾಯೆಯ ಕಾರ್ಯವು. ಇದೆಲ್ಲವೂ ಬಿಸಿಲ್ಗುದುರೆಯಂತೆ ಇದೆ. ಅಜ್ಞಾನ ಮತ್ತು ಅಜ್ಞಾನದ ಕಾರ್ಯವು ಇರುವಿನಲ್ಲಿ ತೋರಿ ಅಡಗುತ್ತದೆ. ಎಳ್ಳಷ್ಟೂ ವಿಕಾರವನ್ನು ಇರವಿಗೆ ಮಾಡಲಾರದು. ಆದ್ದರಿಂದ ಸಾಕ್ಷಿಯಾಗಿರು, ಇಲ್ಲದಿದ್ದರೆ ಸಮಾಧಿಯಲ್ಲಿರು. ಸಮಾಧಿಯಲ್ಲಿದ್ದಾಗ ಪ್ರಾಣೋತ್ಕ್ರಮಣವಾಗಬಹುದು. ಆಗಲಿ ಅದರಿಂದೇನು ಹಾನಿ?

ಜ್ಞಾನದಿಂದ ಅಜ್ಞಾನದ ಎಲ್ಲ ಭೀತಿಗಳು ಓಡಿ ಹೋಗುತ್ತವೆ. ವಿಷ ಕೊಟ್ಟರೆ ತೆಗೆದುಕೊಂಡು ಬಾ ಎನ್ನಬೇಕು. ಮೇಲೆ ಬೆಂಕಿ ಸುರುವಿದರೂ ಸುಮ್ಮನೇ ಇರಬೇಕು. ಜ್ಞಾನಿಯು ಶರೀರ ಸಾಯುತ್ತದೆ ಎಂದಾಗ ಹೆದರುವುದಿಲ್ಲ. ಜ್ಞಾನಿಯು ಯೋಗನಿದ್ರೆಯಲ್ಲಿರುವನು.

ನಿನ್ನ ಕೂಡ ಯಾರೂ ಬರಲಾರರು. ದೇಹ ಇರುವದರೊಳಗೆ ಜ್ಞಾನವನ್ನು ಹೊಂದು. ದೇಹವು ಬಿದ್ದಮೇಲೆ ಅದನ್ನು ಸಾಧಿಸುವದು ಆಗುವದಿಲ್ಲ. ಆದ್ದರಿಂದ ದೇಹವಿರುವದರೊಳಗೇ ಜಡಾಜಡ, ಆತ್ಮನಾತ್ಮ, ನಿತ್ಯಾನಿತ್ಯ, ಸುಖಾಸುಖ ವಿವೇಕದ ಮುಖಾಂತರ ತನ್ನ ನಿಜವನ್ನು ಹೊಂದಬೇಕು. ಜ್ಞಾನಿಗಳ ನಿಂದೆ ಚೇಷ್ಟೆ ಮಾಡುವವರಿಗೆ ಕೆಡಕು ತಪ್ಪಿದ್ದಲ್ಲ. ಸಿದ್ಧಾರೂಢರಿಗೆ ಅಭಕ್ಷ್ಯ ಪದಾರ್ಥಗಳನ್ನು ಕೊಟ್ಟರಂತೆ, ಅವು ಹೂಗಳಾದವು ಎಂಬ ವದಂತಿ ಇದೆ.

* * * *



## 16-3-1978 ರ ಸಾಯಂಕಾಲ

ಪ್ರತಿ ನಿತ್ಯವೂ ತಪ್ಪದೆ ನಿದ್ರೆಯಿಂದ ಎಚ್ಚತ್ತಕೂಡಲೆ ವಿಷಯ ರೂಪಿ ವಿಷವನ್ನು ಕುಡಿಯುವದನ್ನು ಪ್ರಾರಂಭಿಸಿ ಮತ್ತೆ ತಿರುಗಿ ನಿದ್ರೆಗೆ ಹೋಗುವವರೆಗೆ ಅದನ್ನೇ ಪಾನ ಮಾಡುತ್ತೇವೆ. ಆದರೆ ವಿಷವನ್ನು ಕುಡಿಯುವದಿಲ್ಲ. ಏಕೆಂದರೆ ವಿಷವನ್ನು ಕುಡಿಯುವದರಿಂದ ಈ ದೇಹವು ಹೋಗುವದು. ವಿಷಯರೂಪಿ ವಿಷವನ್ನು ಕುಡಿಯುವದರಿಂದ ಜನ್ಮ-ಜನ್ಮಾಂತರವು ಬರುವದು. ಆದ್ದರಿಂದ ವಿಷಯರೂಪಿ ವಿಷವು ಅನೇಕ ಶರೀರಗಳ ದುಃಖಕ್ಕೆ ಕಾರಣವಾಗಿದೆ. ವಿಷವನ್ನು ಕುಡಿದರೆ ಈ ಶರೀರವು ನಾಶವಾಗಿ ಮುಂದೆ ವಿಷಯಭೋಗದಿಂದುಂಟಾಗುವ ವಾಸನೆಗಳು ತಡೆಹಿಡಿಯಲ್ಪಡುವವು ಆದರೆ ಅದರಿಂದ ಆತ್ಮಹತ್ಯೆಯ ದೋಷವು ಬರುವದು. ಮತ್ತೆ ಮುಂದಿನ ಜನ್ಮದಲ್ಲಿ, ಒಳ್ಳೆಯ ಸಂಸ್ಕಾರದಿಂದ ಉತ್ತಮನಾಗಬಹುದು ಅಥವಾ ದುರ್ವಾಸನೆಗಳಿಂದ ಹೀನಜನ್ಮವೂ ಬರಬಹುದು. ಆದ್ದರಿಂದಲೇ ಅಷ್ಟಾವಕ್ರ ಮುನಿಗಳು "ಮುಕ್ತಿಮಿಚ್ಛಸಿಚೇತ್ತಾತ ವಿಷಯಾನ್ವಿಷತ್ತ್ಯಜ" ಎಂದು ಹೇಳಿದ್ದಾಗಿದೆ.

ವಿಷವನ್ನು ಕುಡಿಯುವದರಿಂದ ಈ ಶರೀರದ ಸಂಕಟವು ಹೋಗಬಹುದು. ಆದರೆ ವಿಷಯದ ಆಶೆ ಇದ್ದರೆ ಮುಂದೆ ಬರುವ ಶರೀರಕ್ಕೆ ಸಂಕಟವು ಬರುವದು. ಆದ್ದರಿಂದ ವಿಷಯವೆಂಬ ವಿಷದ ವಾಸನಾತ್ಯಾಗವಾಗಬೇಕಾಗಿದೆ.

ಸ್ವರೂಪದಲ್ಲಿ ನೆಲೆಯಾಗಿ ನಿಲ್ಲುವದೇ ಮಾನವನ ಜನ್ಮಸಿದ್ಧ ಹಕ್ಕು. ಅದನ್ನು ಬಿಟ್ಟು, ಶರೀರದಲ್ಲಿ ನೆಲೆಯಾಗಿ ನಿಂತಿದ್ದಾನೆ. ಎಲ್ಲೆಡೆಯಲ್ಲಿಯೂ ವಿಷಯಸಂಗ್ರಹ ನಡೆದು ದೇಹಭಾವವನ್ನು ನೆಲೆಗೊಳಿಸುವದೇ ನಡೆದಿದೆ. ಎಂದಿಗೆ ವಿಷಯವಾಸನೆ ಹೋಗುವದು ? ಎಂದಿಗೆ ದೇಹದ ಮೇಲಿನ ಮೋಹ ಹೋಗುವದು? ಇದು ಅತಿ ಕಠಿಣವಿದೆ.

ಮನಸ್ಸನ್ನು ತನ್ನ ಸ್ವರೂಪದ ಕಡೆಗೆ ಹರಿಸುವದನ್ನು ಬಿಟ್ಟು, ವಿಷಯಗಳ ಕಡೆಗೆ ಯಾವನು ಹರಿಸುವನೋ ಅವನು ಅಧ್ಯಾತ್ಮಿಕ ದೃಷ್ಟಿಯಿಂದ ವ್ಯಭಿಚಾರಿಯು. ಶರೀರದ ಮೇಲೆ ಹೇಗೆ ಮೋಹವಿದೆಯೋ ಹಾಗೆ ತನ್ನ ಸ್ವರೂಪದ ಮೇಲೆ ಮೋಹವಿರಬೇಕು. ಶರೀರ ಭಾವ ಇದ್ದಾಗ ಯಾವದಾದರೊಂದು ಚಿಂತೆಯು ಇದ್ದೇ ಇರುತ್ತದೆ. ಅಂತಃಕರಣ ಪರಿಶುದ್ಧವಾಗಬೇಕಾದರೆ ದೇಹಭಾವ ಬಿಡಬೇಕು. ದೇಹಭಾವವನ್ನು ಒಳಗೂ ಹೊರಗೂ ಕೂಡಿಕೊಂಡೇ ಹಿಡಿದುಕೊಂಡಿದ್ದೇವೆ. ದೇಹಭಾವವನ್ನು ಹೊರಗೆ ಹಿಡಿ ಅಥವಾ ಬಿಡು, ಆದರೆ ಒಳಗೆ ಮಾತ್ರ ಹಿಡಿಯಬೇಡ.

ಯಾವನಿಗೆ "ಬ್ರಹ್ಮಸತ್ಯ ಜಗನ್ಮಿಥ್ಯ" ಎಂಬುದು ನೆಲೆಗೊಂಡಿದೆಯೋ ಅವನಿಗೆ ಚಿಂತೆಯಿಲ್ಲ.

ಅತಿ ಪ್ರಸಿದ್ಧ ಪ್ರವಚನಕಾರನಾಗಬೇಕು, ತೇರು, ಪಲ್ಲಕ್ಕಿಗಳಲ್ಲಿ ಮೆರೆಯಬೇಕು ಎಂಬ ಪ್ರಲೋಭನೆಗಳು ಸ್ವರೂಪಹೊಂದಬೇಕೆನ್ನುವವರಿಗೆ ವಿಘ್ನವಾಗಿ ಬರುತ್ತವೆ. ಮನರಂಜನೆಗೆ ಬಿದ್ದ ಕೂಡಲೆ ಅತಿ ಹೀನಸ್ಥಿತಿಗಿಳಿಯುತ್ತಾನೆ. ಇದರಿಂದ ಮನುಷ್ಯ ಜನ್ಮವು ಬರುವದು ಕೂಡ ತಪ್ಪಿ ಹೋಗುತ್ತದೆ. ಈ ಪ್ರಲೋಭನಗಳಿಂದ ಯಾವನಿಗೆ ಪಾರಾಗಲು ಸಾಧ್ಯವಿದೆಯೋ ಅವನೇ ಪುಣ್ಯವಾನನು. ವಿಷಯಾಭಿರತಿ ಇದ್ದಾಗ ನಿದ್ರೆಯು ಹತ್ತುವದಿಲ್ಲವೆಂದ ಮೇಲೆ ಸ್ವರೂಪಾವ ಸ್ಥಿತಿಯನ್ನು ಪಡೆಯುವದು ಹೇಗೆ ಸಾಧ್ಯ?

ವಿಷಯಾದಿಗಳ ಕಡೆಗೆ ಲಕ್ಷ್ಯಕೊಡುತ್ತ ಹೋದಂತೆ ಸತ್ಯವು ನಮ್ಮಿಂದ ದೂರಾಗುವದು. ವಿಷಯಾಸಕ್ತಿಗಳನ್ನು ದೃಢಪಡಿಸುತ್ತ ಬಂದಿದ್ದೇವೆ. ಆದ್ದರಿಂದ ಅವುಗಳನ್ನು ಬಿಡುವದು ಅತಿ ಕಠಿಣವಾಗಿದೆ. ರಂಜನೆಯ ಮೇಲೆ ಆಸಕ್ತಿ ಹೆಚ್ಚಾದಂತೆ ದುಃಖವು ಹೆಚ್ಚಾಗುತ್ತದೆ. ನಾಲಿಗೆ ಚಟಕ್ಕೆ ಬಿದ್ದರೆ ದುಃಖವು, ಆ ಚಟವನ್ನು ಬಿಟ್ಟರೆ ಸುಖವು.

ಸತ್ಯದ ಮಾರ್ಗದಲ್ಲಿ ಯಾವದು ವಿಘ್ನವಾಗುವದೋ ಅದನ್ನು ಬಿಡಬೇಕು. (ತಂದೆ-ತಾಯಿ, ಹೆಂಡತಿ, ಮಕ್ಕಳು, ಗುರು) ಸತ್ಯದ ಮಾರ್ಗದಲ್ಲಿ ನಮ್ಮ ಮನಸ್ಸಿನಲ್ಲಿರುವ ಕಾಮಕ್ರೋಧಾದಿಗಳೇ ವಿಘ್ನವಾಗಿರುವವು. ಆದ್ದರಿಂದ ಮನಸ್ಸಿನಲ್ಲಿಯ ಕಾಮಕ್ರೋಧಾದಿಗಳನ್ನು ನಾಶಮಾಡಬೇಕು. ಮನಸ್ಸಿನಲ್ಲಿರುವ ಕಾಮಕ್ರೋಧಾದಿಗಳು ಮನಸ್ಸನ್ನು ಪ್ರೇರೇಪಿಸುವವು. ಮನಸ್ಸು ಇಂದ್ರಿಯಗಳನ್ನು ಪ್ರೇರೇಪಿಸುವದು. ಆಗ ಇಂದ್ರಿಯಗಳ ಕಾರ್ಯಗಳು ನಡೆಯುವವು. ಆದ್ದರಿಂದ ಶಾಶ್ವತ ಆನಂದವನ್ನು ಪಡೆಯಲಿಕ್ಕೆ ಮನಸ್ಸೇ ವಿಘ್ನವು. ಆದ್ದರಿಂದ ಆ ಮನಸ್ಸನ್ನೇ ನಾಶಮಾಡು.

* * * *

## 17-3-1978 ರ ಮುಂಜಾನೆ

ವಿವೇಕವಿದ್ದರೂ ಭೂತ ವರ್ತಮಾನ ಭಾವೀ ವಾಸನೆಗಳು ವಿವೇಕವನ್ನು ತಿರುವಿ ಹಾಕುತ್ತವೆ. ಆದ್ದರಿಂದಲೇ "ಆಗದಾಗದು ವರವಿವೇಕಿಗೆ ಮುಕ್ತಿ ನೀಗದೆ



ಭೂತಾದಿ ಪ್ರತಿಬಂಧಕವನು" ಎಂದು ಮಹಾತ್ಮರು ಹೇಳಿದ್ದಾಗಿದೆ. ಏಕಾಂತದಲ್ಲಿ ಕುಳಿತಾಗ ಅಗಣಿತ ವಾಸನೆಗಳು ಏಳುವವು. ಅತಿ ಶಾಂತ ಮತ್ತು ದೀರ್ಘವಿಚಾರದಿಂದ ಆ ವಾಸನೆಗಳನ್ನೆಲ್ಲ ನಾಶಮಾಡಬೇಕು. ಆದ್ದರಿಂದಲೇ "ಮುಕ್ತಿ ಕಾಂತೆಯ ರತಿ ಸುಮ್ಮನಾಗುವದೆ ಪರಯುಕ್ತಿಯರಿದು ಕೂಡುವರಿಗಲ್ಲದಿಂತು." ಎಂದು ಮಹಾತ್ಮರು ಹೇಳಿದ್ದಾಗಿದೆ. ಎಡೆಬಿಡದೆ ಸ್ವರೂಪ ಚಿಂತನೆಯು ನಡೆದರೆ ಎಲ್ಲ ವಾಸನೆಗಳನ್ನು ನಾಶಮಾಡಲು ಸಾಧ್ಯವಾಗುವದು. ಎಲ್ಲ ವಾಸನೆಗಳನ್ನು ನಾಶಮಾಡಿದ ಮೇಲೆ ಆನಂದಮಯ ಕೋಶವನ್ನು (ನಿದ್ರೆ) ಮೀರಬೇಕಾಗುತ್ತದೆ.

ಯೋಗಿಗಳ ಮಕ್ಕಳು ಯೋಗಿಗಳೇ ಆಗುವರು ಎಂಬುದು ಅಪವಾದವೇ ಸರಿ. ಹಿಂದಿನ ಜನ್ಮದಲ್ಲಿ ಆತ್ಮಚಿಂತನೆಯ ದುಡಿಕೆಯಿದ್ದವರು ಬ್ರಹ್ಮನಿಷ್ಠರಿಂದ ಜನಿಸಿ, ಅವರ ಸಂಗದಲ್ಲಿದ್ದುಕೊಂಡು, ಆತ್ಮಚಿಂತನೆಯನ್ನು ಮುಂದುವರಿಸಿದರೆ ಸ್ವರೂಪಾವಸ್ಥಿತಿಯನ್ನು ಪಡೆಯಲು ಸಾಧ್ಯವಾಗುವದು. ಹಿಂದಿನ ಜನ್ಮದ ದುಡಿಕೆಯಿಲ್ಲದಿದ್ದರೂ ಬ್ರಹ್ಮನಿಷ್ಠರಿಂದ ಜನಿಸಿ ಇದೇ ಜನ್ಮದಲ್ಲಿ ಉತ್ಕಟ ಇಚ್ಛೆಯಿಂದ ಸ್ವರೂಪಾವಸ್ಥಿತಿಯನ್ನು ಹೊಂದಬಹುದು. ಹಿಂದಿನ ಜನ್ಮದ ದುಡಿಕೆ ಇದ್ದರೂ ಬ್ರಹ್ಮನಿಷ್ಠರಿಂದ ಜನಿಸಿದರೂ, ಈ ಜನ್ಮದಲ್ಲಿ ಸ್ವರೂಪ ಅಭ್ಯಾಸಿಗಳ ಸಂಗ ಮತ್ತು ಸ್ವತಃ ಪ್ರಯತ್ನವಿಲ್ಲದಿದ್ದರೆ ಸ್ವರೂಪಾವ ಸ್ಥಿತಿಯನ್ನು ಪಡೆಯುವದು ಸಾಧ್ಯವಾಗುವದಿಲ್ಲ.

ವಿಷಯೀ ಜನರ ಸಂಗವನ್ನು ಬಿಡುವ ಮತ್ತು ನಿರ್ವಿಷಯೀ ಜನರ ಸಂಗವನ್ನು ಹೊಂದುವ ದೃಢನಿಶ್ಚಯ ಕೈಕೊಳ್ಳಬೇಕು. ಸ್ವರೂಪಾವಸ್ಥಿತಿಯನ್ನು ಹೊಂದಲು ಅತಿ ಉತ್ಕಟ ಇಚ್ಛೆಯು ಬೇಕಾಗುವದು. ದೇಹವು ನಾಶವಾಗಿ ಹೋದರೂ ಸ್ವರೂಪವನ್ನು ಹೊಂದಿಯೇ ತೀರುವೆನೆಂಬ ಬಲವಾದ ಇಚ್ಛೆಯು ಬೇಕು.

* * * *

## 17-3-1978 ರ ಸಾಯಂಕಾಲ

ನಿನ್ನ ಮನಸ್ಸೇ ನಿನ್ನ ಕನಸನ್ನು ಸೃಷ್ಟಿಸುತ್ತದೆ. ಅದರಂತೆ ಈ ಜಾಗ್ರವೂ ನಿನ್ನ ಕಲ್ಪನೆಯೇ ಆಗಿದೆ ಎಂಬುದು ತಿಳಿದಿಲ್ಲ. ಏಕೆಂದರೆ ತನ್ನ ನಿಜಸ್ವರೂಪದ ತಿಳುವಳಿಕೆ ಆಗಿಲ್ಲ. ನೀನು ನಿಜವಾಗಿ ಆನಂದ ಸ್ವರೂಪನೇ ಇದ್ದಿ. ನಮ್ಮ ನಿಜದ ಅಜ್ಞಾನದ ಮೂಲಕ ಶರೀರಾದಿಗಳು ನಾವೆಂದು ತಿಳಿದುಕೊಂಡಿದ್ದೇವೆ. ತಾನೇ

ಆನಂದರೂಪಿಯೆಂದು ಯಾವನು ತಿಳಿಯುತ್ತಾನೋ ಅವನಿಗೆ ಇನ್ನೊಂದು ಬೇಕಾಗಿಲ್ಲ. (ನಿದ್ರೆಯಲ್ಲಿದ್ದವನಿಗೆ ಯಾವದರ ಬಗ್ಗೆಯೂ ಇಚ್ಛೆ ಇಲ್ಲವೋ ಹಾಗೆ) ಯಾವನಿಗೆ ಈ ಜಗತ್ತು ಬೇಸರವಾಗಿದೆಯೋ ಅವನು ಈ ಜಗತ್ತಿನ ಆಟವನ್ನು ನೋಡುವದಿಲ್ಲ. ಈ ಜಗತ್ತು ಬೇಕಾದಷ್ಟು ಸುಂದರ ಕಂಡರೂ ಅದರ ಮೂಲವೇ ತಾನೆಂದು ಅದರ ಕಡೆಗೆ ಲಕ್ಷ್ಯವೇ ಕೊಡುವದಿಲ್ಲ. ಅವನ ಪಾಲಿಗೆ ಜಗತ್ತೇ ಇಲ್ಲವಾಗಿರುತ್ತದೆ. ತನ್ನ ಸ್ವರೂಪವು ಮಾತು-ಮನಗಳನ್ನು ಮೀರಿದ್ದಾಗಿದೆ. ತಾನೇ ಸುಖರೂಪವೆಂದಮೇಲೆ ಸುಖಕ್ಕಾಗಿ ಯಾರನ್ನು ಬೇಡಿಕೊಳ್ಳುವದು? ಬೇಡಿಕೊಂಡರೂ ಕೊಡುವವರಾರು? ದೇವರು ಕೊಡುವನು ಅನ್ನುವಿರೋ? ದೇವರಿಗೆ ದೇವರು ನೀವೇ. ದೇವರು ಎನ್ನುವ ಭಾವ ನಿಮ್ಮಲ್ಲಿದೆ. ಅಂದ ಮೇಲೆ ನಿಮ್ಮ ಭಾವದಲ್ಲಿರುವವನೇ ದೇವರು.

ಸತ್ಯವು ಕರ್ಮದ ಫಲವಲ್ಲ. ಆದರೆ ಶರೀರವು ಕರ್ಮದ ಫಲವು. ತಂದೆ-ತಾಯಿಗಳು ಶರೀರವು ಉತ್ಪನ್ನವಾಗಲು ಅನುಕೂಲವಾದರು. ಆದರೆ ಅವರು ನಿನ್ನನ್ನು ಹುಟ್ಟಿಸಿಲ್ಲ. ನಿನ್ನನ್ನು ಬದಲು ಮಾಡಿಲ್ಲ. ಆನಂದವನ್ನು ಕೊಡಲಿಕ್ಕೂ ತೆಗೆದುಕೊಳ್ಳುವದಕ್ಕೂ ಬರುವದಿಲ್ಲ. ಏಕೆಂದರೆ ಆನಂದವನ್ನು ಪಡೆಯಲು ಆನಂದವಾಗಿಯೇ ಉಳಿಯಬೇಕಾಗುತ್ತದೆ. ಆದ್ದರಿಂದ ಯಾರೂ ಕಸಿದುಕೊಳ್ಳಲಾರರು. ಆನಂದವೇ ನೀನಿದ್ದೀ, ನೀನೇ ಇರುತ್ತೀ.

ತನ್ನ ನಿಜಸ್ವರೂಪದ ಮರವೆಯಿಂದಲೇ ದೇಹವೆಂದರೆ ತಾನು ಮತ್ತು ವಿಷಯೇಂದ್ರಿಯ ಸಂಪರ್ಕ ಭೋಗದಿಂದ ಸುಖವು ಸಿಗುವದು ಎಂಬ ತಪ್ಪು ತಿಳುವಳಿಕೆಯುಂಟಾಗಿದೆ. ಈ ತಪ್ಪು ತಿಳುವಳಿಕೆಯಿಂದಲೇ ಮಾನವನು ಭಯ, ರಾಗ-ದ್ವೇಷಗಳಿಗೆ ಒಳಗಾಗಿದ್ದಾನೆ ಮತ್ತು ದೇಹ ಮತ್ತು ವಿಷಯುಗಳ ಬಗ್ಗೆ ಆಸಕ್ತಿಯುಂಟಾಗಿದೆ. ಈ ಆಸಕ್ತಿಯೇ ದುಃಖಕ್ಕೆ ಕಾರಣ. ಈ ಆಸಕ್ತಿಯನ್ನು ಬಿಟ್ಟಾಗ ಸುಖವು. ಮಾನ ಹೋದೀತೆಂಬ ಚಿಂತೆ, ಅಧಿಕಾರ, ಜನಪ್ರಿಯತೆ ಪಡೆಯಬೇಕೆಂಬ ಚಿಂತೆಯು ದೇಹಾಸಕ್ತಿ ಇರುವದರಿಂದಲೇ. ಯಾವಾತನು ತನ್ನ ಸ್ವರೂಪದಲ್ಲಿ ನೆಲೆಯಾಗಿ ನಿಲ್ಲುವನೋ ಅವನು ಎಲ್ಲ ಆಸೆಗಳಿಂದ ಮುಕ್ತನಾಗುತ್ತಾನೆ. ಯಾವನು ನಿರ್ವಿಷಯದಿಂದ ಸುಖವು ಎಂದು ತಿಳಿದುಕೊಂಡಿರುವನೋ ಅವನೇ ರಾಜನು. ಆನಂದದ ಸಮೀಪದಲ್ಲಿ ಮನಸ್ಸು ನಿಲ್ಲುವದೇ ಉಪವಾಸವು. ತನ್ನ ಸ್ವರೂಪದಲ್ಲಿ ಯಾವನು ನೆಲೆಯಾಗಿ ನಿಲ್ಲುವನೋ ಅವನೇ ಪುಣ್ಯವಾನನು.

* * * *



## 18-3-1978 ರ ಮುಂಜಾನೆ

ಜ್ಞಾನಿಯ ಸಂಚಿತ ಕರ್ಮಗಳು ನಿಂದಿಸಿದವರಿಗೆ ಹಾಗೂ ಹೊಗಳಿದವರಿಗೆ ಹಂಚಿ ಹೋಗುತ್ತವೆ. ಆಗಾಮಿ ಕರ್ಮಗಳ ಬಗ್ಗೆ ಅವನಿಗೆ ಕರ್ತೃತ್ವಭಾವವಿರುವದಿಲ್ಲ. ತುರ್ಯದಲ್ಲಿ ಜರುಗಿದ ಘಟನೆಗಳಿಗೆ ಅವನು ಜವಾಬ್ದಾರನಲ್ಲ. ಅವನ ಕೃತಿಗಳು ಮುಮುಕ್ಷುಗಳ ಕಲ್ಯಾಣಕ್ಕಾಗಿ ನಟನೆ ಮಾತ್ರವಿರುತ್ತವೆ. ಸಹಜಾವಸ್ಥೆಯಲ್ಲಿ ನೀತಿಯುಡಗದೆ ಇರುತ್ತಾನೆ. ಸಮಾಧಿಯಿಂದ ಉತ್ಥಾನರಾದವರು ಸಮಾಧಿಹೊಂದಲು ಸಾಧಕವಾದ ನಿಯಮಗಳನ್ನು ಸಹಜಾವಸ್ಥೆಯಲ್ಲಿ ಪಾಲಿಸುವರು. ಆದ್ದರಿಂದ ಸಾಧಕನ ಸಾಧನಗಳು ಸಿದ್ಧನ ಲಕ್ಷಣಗಳಾಗಿವೆ. ಜ್ಞಾನಿಗೆ ನೋಡುವವರ ದೃಷ್ಟಿಯಲ್ಲಿ ಪ್ರಾರಬ್ಧ. ಆದರೆ ಅವನಿಗೆ ಪ್ರಾರಬ್ಧವಿಲ್ಲ. ಬ್ರಹ್ಮನಿಷ್ಠರು ಬೇಕಾದಷ್ಟು ಸಿಟ್ಟು ಮಾಡಿ ಬುದ್ಧಿ ಹೇಳಿದರೂ ಅದೆಲ್ಲವೂ ಆ ಜೀವಿಗಳ ಕಲ್ಯಾಣಕ್ಕೋಸ್ಕರವಾಗಿಯೇ ಇರುವದು. ಜ್ಞಾನಿಯು ಪಾಪಿಗಳನ್ನು ರಕ್ಷಿಸಿ ಅವರು ಪವಿತ್ರರಾಗಲು ಬುದ್ಧಿವಾದ ಹೇಳುವನು. ಸಿದ್ಧಪುರುಷರ ಕೃತಿಗಳು ಹುರಿದ ಬೀಜಗಳಂತೆ ಇರುವವು. ಲೋಕೋತ್ತರ ಮುಕ್ತರ ಹೃದಯವು ಹೂವಿನಂತೆ ಮೃದು ಮತ್ತು ವಜ್ರದಂತೆ ಕಠೋರವಾಗಿರುವದು.

ಧ್ಯಾನವೆಂದರೆ ಮನನ ಮಾಡುವದು, ಮನಸ್ಸು ಆತ್ಮಾಕಾರವಾಗುವದು, ಕೆಲವೊಂದು ವೇಳೆಯನ್ನು ಮನನ ಮಾಡಲಿಕ್ಕೆ ಮೀಸಲಾಗಿಡಲಿಕ್ಕೇ ಬೇಕು. ಇಲ್ಲದಿದ್ದರೆ ಅಧ್ಯಾತ್ಮಿಕ ಮುನ್ನಡೆಯು ಸಾಧ್ಯವಿಲ್ಲ. ಮನನಕ್ಕೆ ಕೂತಾಗ ಅನೇಕ ಅಂತರಂಗ ವಿಘ್ನಗಳು ಬರುವವು. ಯಾವದನ್ನೂ ಅಹಂಕಾರದಿಂದ ವಿಚಾರ ಮಾಡಬಾರದು. ಎಲ್ಲವನ್ನೂ ನಿಷ್ಪಕ್ಷಪಾತೀಯವಾಗಿ ವಿಚಾರ ಮಾಡಬೇಕು. ವಿವೇಕೋದಯವಾದರೂ ಭೂತಾದಿ ಪ್ರತಿಬಂಧಗಳನ್ನು ಗೆಲ್ಲುವದು ಕಠಿಣವಿದೆ. ಜ್ಞಾನವಿದ್ದು ವೈರಾಗ್ಯ-ಉಪರತಿಗಳಿರದಿದ್ದರೆ ಮುಕ್ತಿಯು ಲಭಿಸುವದು ಎಂಬುದು ತಪ್ಪು ತಿಳುವಳಿಕೆಯು. ಮುಕ್ತಿಯು ವಿಚಾರದ ದುಡಿಕೆಯಿಂದ ಪ್ರಾಪ್ತವಾಗುವದು."ಕೋಪಿಗಳಿದ್ದಲ್ಲಿ ಅನುಭವಗೋಷ್ಠಿ ಹೇಳಬಾರದು. ಪಾಪಿಗಳಿದ್ದಲ್ಲಿ ರೂಪುಳ್ಳ ವಸ್ತುವ ತೋರಬಾರದು. ಧರಣಿಯ ಕಲ್ಲಿಗೆ ಶರಣೆಂದು ಪೂಜೆಯ ಮಾಡಬಾರದು. ವರಕವಿಗಳ ಮುಂದೆ ನರಕವಿಗಳ ವಿದ್ಯೆ ತೋರಬಾರದು." ಎಂದು ಮಹಾತ್ಮರು ಹೇಳಿದ್ದಾರೆ.

* * * *

## 18-3-1978 ರ ಸಂಜೆ

ಹಠಯೋಗದಿಂದ ಜ್ಞಾನವಾಗುವದಿಲ್ಲ. ನಿದ್ರೆಯಲ್ಲಿ ಮುಳುಗಿದಂಥ ಸ್ಥಿತಿಯದು. ಪುನಃ ಎಚ್ಚರಿಕೆಗೆ ಬಂದ ಕೂಡಲೇ ಮೊದಲಿನಂತೆ ವಿಷಯಗಳ ಮೇಲಿನ ಮೋಹ ಹೋಗಿರುವದಿಲ್ಲ. ದೇಹವು ಹೋದೀತೆಂಬ ಚಿಂತೆಯು ನಾಶವಾಗಿರುವದಿಲ್ಲ. ತನ್ನ ನಿಜವಾದ ಇರುವಿನ ತಿಳುವಳಿಕೆಯು ಆಗಿರುವದಿಲ್ಲ. "ಬ್ರಹ್ಮಾಕಾರತಯಾವೃತ್ತಿಃ ನಿರ್ವಿಕಾರತಯಾ ಸ್ಥಿತಿಃ ವೃತ್ತಿ ವಿಸ್ಮರಣಂ ಸಮ್ಯಕ್ ಸಮಾಧಿರ್ ಜ್ಞಾನ ಸಂಜ್ಞಕಂ" ಎಂಬಂತೆ ಆಗಿರುವದಿಲ್ಲ. ನಿದ್ರೆಯ ಮಬ್ಬು ಇರಬಾರದು, ಕನಸು, ವ್ಯವಹಾರಿಕ ಎಚ್ಚರಿಕೆಯು ಇರಬಾರದು. ಅರಿವು ಸಹಿತ ಆನಂದದ ಅನುಭೂತಿಯು ಇರಬೇಕು. ಇದೇ ಬ್ರಹ್ಮಸೂತ್ರವು.

* * * *

## 19-3-1978 ರ ಮುಂಜಾನೆ

ಸ್ವತಃ ವಿಚಾರ ಮಾಡುವದನ್ನು ಕಲಿಯಬೇಕು. ಅಂದರೆ ಸಂಶಯ ಸಂದಿಗ್ಧಗಳುಂಟಾಗುವದಿಲ್ಲ. ಬೇರೆ ಬೇರೆ ಆಚಾರ್ಯರು ಬೇರೆ ಬೇರೆ ಗ್ರಂಥಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ವಿಷಯ ಪ್ರತಿಪಾದನೆಯನ್ನು ಮಾಡಿರುವದರಿಂದ, ಅವುಗಳನ್ನು ಓದುವದರಿಂದ ಅನೇಕ ಸಂಶಯ ಸಂದಿಗ್ಧಗಳುಂಟಾಗುವವು. ಅನೇಕ ಗ್ರಂಥಗಳನ್ನು ಓದುವದರಿಂದ, ಅಷ್ಟು ಗ್ರಂಥಗಳನ್ನು ಓದಿದೆ ಎಂಬ ಅಹಂಕಾರವೂ ಬರಬಹುದು. ಓದುವ ಚಟವನ್ನು ಬಿಡುವದು ಕಠಿಣವಾಗುವದು. ಸ್ವರೂಪ ಚಿಂತನೆಯು ಮುಂದುವರಿಯುವದಿಲ್ಲ. ನಿದ್ರೆ ಮಾಡಲಿಕ್ಕೆ ಗ್ರಂಥಗಳ ಅವಶ್ಯಕತೆ ಇದೆಯೇ? ನಿದ್ರೆಯ ಕಡೆಗೆ ಭಾವ ಹೊರಳಿದಾಗ ಜಗತ್ತು ಮುಗಿಯಿತು. ಜಗತ್ತಿನಲ್ಲಿಯ ಗ್ರಂಥಗಳೆಲ್ಲವೂ ಮುಗಿದವು. ಆದ್ದರಿಂದ ವೇದ, ಉಪನಿಷತ್ತು, ಗೀತೆ ಯಾವದನ್ನೂ ಓದಬೇಕಾಗಿಲ್ಲ. ಸತತವೂ ಅನುಭವ ದೃಷ್ಟಿಯಿಂದ ವಿಚಾರವು ನಡೆಯಬೇಕು. ಆದ್ದರಿಂದ ಸ್ವತಃ ವಿಚಾರದಿಂದ ಸ್ವರೂಪವನ್ನು ಹೊಂದಬೇಕು.

ಜಗತ್ತಿನ ಎಲ್ಲ ವಿಶ್ವವಿದ್ಯಾಲಯಗಳು ಕಾಮನ ಆಧಾರದ ಮೇಲೆ ಸ್ಥಾಪಿಸಲ್ಪಟ್ಟಿವೆ. ಎಂದರೂ ಅಡ್ಡಿಯಿಲ್ಲ. ಆದ್ದರಿಂದ ಪಶುಗಳಂತೆ ವಿಶ್ವವಿದ್ಯಾಲಯದ ಜನರ ಜೀವನವು ನಡೆದಿದೆ. ಇಂಥ ವಿಶ್ವವಿದ್ಯಾಲಯಗಳಿಂದ ಆನಂದವು ಸಿಗಲಾರದು. ಆದ್ದರಿಂದ ಆನಂದದ ಆಧಾರದ ಮೇಲೆ (ಋಷಿಕುಲ) ವಿಶ್ವವಿದ್ಯಾಲಯಗಳು ಸ್ಥಾಪಿತವಾಗಬೇಕು. ಇಂಥ ವಿಶ್ವವಿದ್ಯಾಲಯಗಳಿಂದ ಜನರು ಆನಂದದ ಬಗೆಗಿನ



ಶಿಕ್ಷಣವನ್ನು ಪಡೆದು, ಶಾಶ್ವತ ಆನಂದವನ್ನು ಹೊಂದುವಂಥವರಾಗಬೇಕು.

ಸೃಷ್ಟಿಯು ಕಾಣಿಸುವದು, ಆದರೆ ನಿನ್ನ ಇರುವಿನಲ್ಲಿ ಇಲ್ಲ. ಶರೀರವು ಮತ್ತು ಜಗತ್ತು ಅತ್ಯಂತ ಅಭಾವವು. ಅಂದ ಮೇಲೆ ಶರೀರವು ಇದ್ದರೇನು ಬಿಟ್ಟರೇನು? ಆದ್ದರಿಂದ ಶರೀರವು ಹೋದೀತೆಂಬ ಭಯವಿರಬಾರದು. ತೋರಾನುತೋರಿಕೆಯು ನಿಮ್ಮ ಸ್ವರೂಪದಲ್ಲಿ ಯಾವ ವಿಕಾರವನ್ನೂ ಮಾಡುವದು ಸಾಧ್ಯವಿಲ್ಲ. ಇಂಥ ವಿಚಾರವಿದ್ದವನಿಗೆ ಜಗತ್ತಿನ ವ್ಯವಹಾರದಿಂದ ಯಾವ ಬಾಧೆಯೂ ಆಗುವದಿಲ್ಲ. "ನಿಜವನರಿದ ಯೋಗಿಗೆ ಆವ ಕರ್ಮದ ಕಾಟ, ಭಜನೆಯಿಂದಾವ ಪುಣ್ಯದೊಳೊಡಗೂಟ".

ಶರೀರದೊಡನೆ ಮನಸ್ಸಿಗಿರುವ ಸಂಬಂಧ ನಿದ್ರೆಯಲ್ಲಿ ಅಡಗಲು ಆನಂದವೇ ಇರುವದು. ಆದ್ದರಿಂದ ಶರೀರದೊಡನೆ ಮನಸ್ಸಿಗಿರುವ ಸಂಬಂಧವನ್ನು ಜಾಗ್ರದಲ್ಲಿಯೇ ಕಡಿದುಹಾಕಬೇಕು. ಅಂದರೆ ಆನಂದವೇ ಇರುತ್ತದೆ. ಸುಖ-ದುಃಖ, ರೋಗ ಎಂಬ ಪರಿಣಾಮವು ನಿದ್ರೆಯಲ್ಲಿ ಇಲ್ಲವೇ ಇಲ್ಲ. ಮನಸ್ಸಿನ ಕಲ್ಪನೆಗಳ ಚಿಂತೆಯು ಶರೀರದ ಮೇಲೆ ಪರಿಣಾಮ ಮಾಡುವದು. ಶರೀರದ ರೋಗಾದಿಗಳು ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡುವವು. ಶರೀರ ಭಾವ, ಮನಸ್ಸಿನ ಕಲ್ಪನೆಗಳು ನಾಶವಾದರೆ ಕೆಲಸವು ಮುಗಿಯುವದು. ಶರೀರ, ಮನ, ಬುದ್ಧ್ಯಾದಿಗಳು ನಮ್ಮ ಇರುವಿನಲ್ಲಿ ತೋರಿ ಅಡಗುವವು.

ತ್ರಿಪುರಾರಿ ಎಂದರೆ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳನ್ನು ಮೀರಿದವನು. ಅಂದರೆ ತುರ್ಯವನ್ನು ಹೊಂದಿದವನು. ತುರ್ಯದಲ್ಲಿ ತಿಳುವಳಿಕೆಯ ಮುಖಾಂತರ ಆನಂದದ ಅನುಭವವಿರುವದು. ನಿದ್ರೆಯಲ್ಲಿ ಮರವೆಯ ಮೂಲಕ ಆನಂದದ ಅನುಭವವಿರುವದು.

ನಾನು ಯಾರೆಂದು ವಿಚಾರಿಸಲು ಎಲ್ಲ ಸಮಸ್ಯೆಗಳು ಬಗೆಹರಿಯುವವು. ವೇದಾಂತವೆಂಬ ಸಿಂಹವು ಗರ್ಜಿಸಿದಾಗ ಉಳಿದೆಲ್ಲವೂ (ಪ್ರಾರ್ಥನೆ ಯೋಗ ಮುಂತಾದವುಗಳು) ಓಡಿ ಹೋಗುತ್ತವೆ.

ಲೌಕಿಕ ದೊಡ್ಡಸ್ತಿಕೆಯು ಏನು ಪ್ರಯೋಜನ? ಯಾರಾದರೂ ಖಂಡನ ಮಾಡಿದರೆ ಖಂಡನ ಮಾಡಿದರಲ್ಲ ಎಂಬ ಚಿಂತೆಯಾಗುವದು. ಜಗವೆಲ್ಲವೂ ನನ್ನ ಕಲ್ಪನೆಯೆಂದಾಗ ಆ ಖಂಡನೆಯಿಂದ ಬಾಧೆ ನನಗೇಕೆ? ಜಗತ್ತು ನಿಂದೆ ಮಾಡುತ್ತದೆ ಖಂಡನ ಮಾಡುತ್ತದೆ ಎಂಬ ಚಿಂತೆ ಮಾಡುವದು ನಿಷ್ಪ್ರಯೋಜಕ. * * * *

## 21-3-1978 ರ ಸಂಜೆ

ವಿಷಯ ಬುದ್ಧಿಯವರಿಗೆ ಅಧ್ಯಾತ್ಮ ಹೇಳಿದರೆ ನಾಟುವದಿಲ್ಲ. ಇದಕ್ಕೆ ವಿರುದ್ಧವಾಗಿ ವಿಪರೀತ ಅರ್ಥವಾಗುವ ಸಂಭವವಿದೆ. ಶರೀರ ಭಾವವೇ ಬಯಕೆಗೆ ಕಾರಣ. ಬಯಕೆಯೇ ದುಃಖಕ್ಕೆ ಕಾರಣ. ಆದರೆ ನಾವು ದೃಶ್ಯವು ಬದಲಾಗಬಾರದು ಎಂದು ಇಚ್ಛಿಸುತ್ತೇವೆ. ಆದರೆ ದೃಶ್ಯವು ಕ್ಷಣ-ಕ್ಷಣಕ್ಕೆ ಬದಲಾವಣೆಯನ್ನು ಹೊಂದುವ ಗುಣವುಳ್ಳದ್ದಾಗಿದೆ. ಬದಲಾವಣೆ ಹೊಂದುವ ದೃಶ್ಯಕ್ಕೆಲ್ಲ ಸಾಕ್ಷಿಯಾಗಿ (ನಿರ್ಲಿಪ್ತನಾದರೆ) ವೀಕ್ಷಿಸಲು ಸುಖವೇ ಇರುವದು. ಬದಲಾವಣೆಯನ್ನು ಹೊಂದುವ ಶರೀರ ಮತ್ತು ವಿಷಯಗಳನ್ನು ಅವಲಂಬಿಸಿದರೆ ದುಃಖ, ಬದಲಾವಣೆಯಾಗದ ತನ್ನ ನಿಜವನ್ನವಲಂಬಿಸಿದರೆ ಸುಖವು.

"ಜಾಣನು ಲೌಕಿಕ ಪಾರಮಾರ್ಥವೆರಡನು ಮಾಣದೆ ಕೂಡಿ ನಡೆಸುತಿಹ ನಿಂತು." ಇದು ಜ್ಞಾನಿಗೆ ಮಾತ್ರ ಸಾಧ್ಯವು. ಆದರೆ ಸಾಧಕನಿಗೆ ಸಾಧ್ಯವಿಲ್ಲ. ಜ್ಞಾನಿಗೆ ವಿಶ್ವದ ಬಗ್ಗೆ ಸತ್ಯತ್ವ ಬುದ್ಧಿಯಿರುವದಿಲ್ಲ. ಆದ್ದರಿಂದ ಜ್ಞಾನಿಯು ಲೌಕಿಕ ಪಾರಮಾರ್ಥವೆರಡನು ಮಾಣದೆ ಕೂಡಿ ನಡೆಸುವನು. ಅಜ್ಞಾನಿಗೆ ವಿಶ್ವದ ಬಗ್ಗೆ ಸತ್ಯತ್ವ ಬುದ್ಧಿ ಇರುವದರಿಂದ ಇವನಿಗೆ ಜ್ಞಾನಿಯ ಹಾಗೆ ಲೌಕಿಕ ಪಾರಮಾರ್ಥವೆರಡನು ಮಾಣದೆ ಕೂಡಿ ನಡೆಸಲಿಕ್ಕೆ ಸಾಧ್ಯವಾಗುವದಿಲ್ಲ. ಜ್ಞಾನಿಗೆ ಮನಸ್ಸಿನೊಳಗೆ ಸ್ವರೂಪದ ನೆನಪು ಇದ್ದು ವ್ಯವಹಾರಿಕ ಪ್ರಪಂಚದ ಕೆಲಸಗಳನ್ನು ಮಾಡುತ್ತಾನೆ.

ಶರೀರಕ್ಕೆ ಏನೇ ನೋವಾದರೂ, ಶರೀರದ ಯಾವದಾದರೂ ಭಾಗವು ಕತ್ತರಿಸಿ ಹೋದರೂ ಬಾಧೆಪಡದೆ ಶರೀರಕ್ಕೆ ಸಾಕ್ಷಿಯಾಗಿರಬೇಕು. ಆದರೆ ಇದು ಬಹಳ ಕಠಿಣವಿದೆ. ದೇವರು ನಿಷ್ಕ್ರಿಯನು. ಅವನು ಏನನ್ನೂ ಮಾಡುವದಿಲ್ಲ. ವಿಶ್ವವೆಲ್ಲವೂ ಅಜ್ಞಾನದ ಕಾರ್ಯವು. ಎಲ್ಲವೂ ಪ್ರಥಮಾಧ್ಯಾಸದ ಸೃಷ್ಟಿಯು, ಅಹಂಭಾವದ ಕ್ರಿಯೆಯು, ಕಲ್ಪನಾ ಸಾಮ್ರಾಜ್ಯವು. ನಿದ್ರೆಯಲ್ಲಿ ಏನು ಮಾಡುವಿ? ಏನೂ ಮಾಡುವದಿಲ್ಲ. ಏನೂ ಮಾಡದಿದ್ದರೂ ಆನಂದರೂಪವಿರುವಿರಿ. ಮಾಡುವದೆಲ್ಲ ಮನಸ್ಸೇ. ಆದರೆ ಮನಸ್ಸು ನಿನಗೇನೂ ಮಾಡಲಾರದು. ಭಾವದೊಳಗೆ ಎಲ್ಲ ಕ್ರಿಯೆ, ಭಾವವಡಗಿದಾಗ ಕ್ರಿಯೆ ಇಲ್ಲ. ಜಾಗ್ರದ ಗದ್ದಲದಿಂದ ಬೇಸತ್ತು, ನಿದ್ರೆಯಲ್ಲಿ ಅಡಗಿ ಮತ್ತೆ ಎಚ್ಚತ್ತು ಗದ್ದಲದಲ್ಲಿ ಬೀಳುವೆವು.

ನಾವು ಭಾವಿಸಿದ್ದು ಆಗುವೆವು. ಇಲ್ಲದ್ದನ್ನು ಭಾವಿಸಿದರೆ ಇಲ್ಲದ್ದು ಆಗುವೆವು. ಅಂದ ಮೇಲೆ ಇದ್ದದ್ದನ್ನು ಭಾವಿಸಿದಾಗ ಇದ್ದದ್ದು ಆಗಲಿಕ್ಕಿಲ್ಲವೇ? ಮನಸ್ಸಿನ



ಸಾಮ್ರಾಜ್ಯವನ್ನು ನಾಶಮಾಡಿದಾಗ ತಾನೇ ಶಿವನು.

* * * *

## 21-3-1978 ರ ಮುಂಜಾನೆ

ಋಷಿಯ ಋಣವು ಧನ-ಧಾನ್ಯ ಕೊಡುವದರಿಂದ ತೀರುವದಿಲ್ಲ. ಋಷಿಯ ಋಣವು ಋಷಿಯಾದಾಗಲೇ, ಋಷಿಗಳನ್ನು ತಯಾರು ಮಾಡಿದಾಗಲೇ ತೀರುವದು. ಋಷಿಗಳೇನು ಚಿಗುರೆಲೆಯ ಮೇಲೆ ಇರಬಹುದು. ಯಾಜ್ಞವಲ್ಕ್ಯರ ಗುರುಗಳು ಅವರಿಗೆ ಒಂದು ಸಾವಿರ ಬ್ರಹ್ಮರ್ಷಿಗಳನ್ನು ತಯಾರು ಮಾಡಿದರೆ ತಮ್ಮ ಋಣವು ತೀರುವದೆಂದು ಹೇಳಿದರು. ಶಾಸ್ತ್ರ ಹೇಳುವದರಿಂದ ಋಷಿಯ ಋಣ ತೀರುವದಿಲ್ಲ. ಋಷಿಯ ಋಣ ತೀರಿಸಿದರೆ ಎಲ್ಲ ಋಣಗಳೂ ತೀರುವವು. ಮಹಾತ್ಮರು ಮಾಡುವಂಥ ಸೇವೆಯನ್ನು ಸಾಮಾನ್ಯರು ಮಾಡುವಂಥ ಸೇವೆಗೆ ಹೋಲಿಸಲಿಕ್ಕೆ ಬರುವದಿಲ್ಲ. ಬ್ರಹ್ಮನಿಷ್ಠರು ಜ್ಞಾನಾನಂತರ ನಿವೃತ್ತಿ ಅಥವಾ ಪ್ರವೃತ್ತಿ ಪಥವನ್ನು ಅನುಕರಿಸಬಹುದು. ಉದಾ :- ಇಲಕಲ್ ಗ್ರಾಮದ ಸಕ್ರೆ ಶ್ರೀ ಶಂಕರೆಪ್ಪನವರು. ಜ್ಞಾನಿಗಳು ವೈಯಾಕರಣಿಗಳಿರಬಹುದು ಅಥವಾ ಮೌನಿಗಳಾಗಿರಬಹುದು. ಸದ್ಗುರು ಶಿವಾನಂದರು ವ್ಯವಹಾರವನ್ನೂ ಮಾಡಿದರು, ಸಮಾಧಿಯನ್ನೂ ಸಾಧಿಸಿದರು.

ಸಂಸಾರದಲ್ಲಿ ವಿಘ್ನಗಳು ಬಂದರೆ ಅವು ಸ್ವರೂಪದ ಕಡೆಗೆ ಒಯ್ಯಲಿಕ್ಕೆ ಬಂದಿರುವವು ಎಂದರ್ಥ. ಜಾಗ್ರವು ಬಿಸಿಲ್ಗುದುರೆಯ ನೀರಿನಂತೆ ತೋರಿದರೂ ಅತ್ಯಂತಾಭಾವವು ಎಂಬುದು ಅನುಭವದಲ್ಲಿ ಬಂದಾಗ ಸಮಾಧಿ ಹೊಂದುವದು ಸಾಧ್ಯವಾಗುವದು.

ತನ್ನ ಸಚ್ಚಿದಾನಂದ ಸ್ವರೂಪವನ್ನು ಬಿಟ್ಟು ಅನ್ಯವಾದ ಶರೀರವೇ ತಾನೆಂದು ತಿಳಿದುಕೊಂಡಿರುವದೇ ಮಹಾಪಾಪ. ಏಕೆಂದರೆ ಈ ದೇಹ ಭಾವನೆಯಿಂದಲೇ ರೋಗ, ಹಸಿವು, ನೀರಡಿಕೆ, ರಾಗ-ದ್ವೇಷ ಮೊದಲಾದವುಗಳು ಬಂದಿವೆ. ಇವುಗಳೇ ನಮಗೆ ದುಃಖವನ್ನುಂಟು ಮಾಡುವವು. ತನ್ನ ನಿಜಸ್ವರೂಪ ತಿಳಿದ ಮೇಲೆ ಇನ್ನೊಂದನ್ನು ಹೊಂದಬೇಕೆಂಬ ಆಸೆಯು ಉಳಿಯುವದಿಲ್ಲ. ಏಕೆಂದರೆ ತನಗೆ ಬೇಕಾದ ಪರಮಶಾಂತಿಯು ತನ್ನ ಸ್ವರೂಪವೇ ಇರುತ್ತದೆ. ತನ್ನನ್ನು ಬಿಟ್ಟು ಅನ್ಯವಿಲ್ಲದ್ದರಿಂದ ಏನನ್ನೂ ಬೇಡಲಿಕ್ಕೆ ಬರುವದಿಲ್ಲ.

ದೇಹಾತಾದಾತ್ಮ್ಯ ಭಾವವಿದ್ದಾಗಲೇ (ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಕೋಶಗಳಲ್ಲಿಯೇ) ಬೇಡಿಕೆ ಇದೆ. ಆನಂದಮಯ

ಕೋಶದಲ್ಲಿ ಬೇಡಿಕೆಯಿಲ್ಲ. ಅನ್ಯವೆಂಬುದು ಒಂದು ಇದೆಯೆಂದರೆ ರಾಗ, ದ್ವೇಷ, ರಾಗ-ದ್ವೇಷ ಮಿಶ್ರಣವು ಪ್ರಾರಂಭವಾಗುವದು. ಆನಂದಮಯ ಇರುವಾಗಿರುವದನ್ನು ಬಿಟ್ಟು ಇನ್ನೇನಾದರೂ ಆದರೆ ದುಃಖವೇ.

ತಾಯಿಯೇ ಮೊದಲನೆಯ ಗುರು. ತಾಯಿಯು ತನ್ನ ಮಕ್ಕಳು ದುಃಖಮಯ ಸಂಸಾರಸಾಗರದಲ್ಲಿ ಬೀಳದೆ ಶಾಶ್ವತ ಸುಖವನ್ನು ಹೊಂದಲೆಂದು ಅವರಿಗೆ ಆತ್ಮವಿದ್ಯೆಯನ್ನು ಬೋಧಿಸಬೇಕು. ಭಾರತದಲ್ಲಿ ಮದಾಲಸಾ ಎಂಬ ಒಬ್ಬ ಮಹಾರಾಣಿ ಇದ್ದಳು. ಆಕೆ ತನ್ನ ಎಲ್ಲ ಮಕ್ಕಳನ್ನೂ ಆತ್ಮಜ್ಞಾನಿಗಳನ್ನಾಗಿ ಮಾಡಬೇಕೆಂಬ ವ್ರತ ತೊಟ್ಟಳು. ಆಕೆಯು ತನ್ನ ಮಕ್ಕಳನ್ನು ತೊಟ್ಟಿಲಲ್ಲಿ ಹಾಕಿ ತೂಗುವಾಗ, ಮೊಲೆ ಕುಡಿಸುವಾಗ, ಆಡಿಸುವಾಗ ಅಧ್ಯಾತ್ಮ ಗೀತೆಗಳನ್ನೇ ಹಾಡುತ್ತಿದ್ದಳು. ಆಕೆಗೆ ಎಂಟು ಜನ ಮಕ್ಕಳಿದ್ದರು. ಅವರಲ್ಲಿಯ ಏಳು ಜನ ಮಕ್ಕಳು ದಿವ್ಯತೆಯನ್ನು ಪಡೆದು ಮನೆಯನ್ನು ಬಿಟ್ಟು ಹೊರಟು ಹೋದರು ಮತ್ತು ವೇದಾಂತ ಪ್ರಚಾರ ಮಾಡಿದರು. ರಾಜ್ಯಕ್ಕೆ ಉತ್ತರಾಧಿಕಾರಿಯು ಬೇಕೆಂದು ರಾಜನು ಎಂಟನೆಯ ಮಗನನ್ನು ತನ್ನ ಹತ್ತಿರ ಇಟ್ಟುಕೊಂಡು ಒಬ್ಬ ದಾದಿಯ ಆಶ್ರಯದಲ್ಲಿ ಅವನನ್ನು ಬೆಳೆಯಿಸಿದನು. ಆದ್ದರಿಂದ ಮದಾಲಸಾ ಮಹಾರಾಣಿಗೆ ತನ್ನ ಎಂಟನೆಯ ಮಗನಿಗೆ ಉಳಿದಮಕ್ಕಳಂತೆ ಆತ್ಮವಿದ್ಯೆಯನ್ನು ಬೋಧಿಸುವದಾಗಲಿಲ್ಲ. ಆದ್ದರಿಂದ ತನ್ನ ವ್ರತ ಕೈಗೂಡಿಸುವದಕ್ಕಾಗಿ ಆಕೆಯು ತಾನು ಸಾಯುವ ಕಾಲದಲ್ಲಿ ತನ್ನ ಎಂಟನೆಯ ಮಗನನ್ನು ಕರೆದು ತನ್ನ ಅಧ್ಯಾತ್ಮಗೀತೆಯ ಜೋಗುಳವನ್ನು ಬರೆದಿದ್ದ ಕಾಗದವನ್ನು ಮಡಿಸಿ, ಪೀತಾಂಬರ ರತ್ನಾಭರಣಗಳಿಂದ ಸುತ್ತಿ ಅದನ್ನು ಅವನ ತೋಳಿಗೆ ಕಟ್ಟಿದಳು. ಆ ರಕ್ಷಾಯಂತ್ರ (ರಕ್ಷಾಬಂಧ) ವನ್ನು ರಕ್ಷಿಸಲು ಹೇಳಿ ಅತ್ಯಂತ ಗಂಡಾಂತರ ಕಾಲ ಒದಗಿದಾಗ ಬಿಚ್ಚಿ ನೋಡಬೇಕೆಂದು ಹೇಳಿದಳು. ಅವಳ ಎಂಟನೆಯ ಮಗನು ರಾಜನಾದನು. ಅನೇಕ ವರ್ಷಗಳ ನಂತರ ಅವನ ಏಳು ಜನ ಅಣ್ಣಂದಿರು ತಮ್ಮ ರಾಜ್ಯವನ್ನು ಬಿಟ್ಟುಕೊಡು ಎಂದು ಕೇಳಿದರು. ಆಗ ಇವನಿಗೆ ಅತಿ ದುಃಖವಾಯಿತು. ಆಗ ಈ ರಕ್ಷಾಯಂತ್ರವನ್ನು ಬಿಚ್ಚಿ ನೋಡಿದನು. ಅದರಲ್ಲಿ "ನೀನು ಸಚ್ಚಿದಾನಂದ ಸ್ವರೂಪನಿದ್ದೀ" ಎಂದು ಬರೆಯಲಾಗಿತ್ತು. ಇದನ್ನು ಓದಿ ಅವನು ಶರೀರ, ಜಗತ್ತಿನ ಭಾವ ಮೀರಿ ಬ್ರಹ್ಮೀಭೂತನಾದನು. ಹೀಗೆ ಮದಾಲಸಾ ಮಹಾತಾಯಿಯ ವ್ರತವು ನೆರವೇರಿತು. ತಾಯಿಯರು ಮದಾಲಸಾ ಮಹಾರಾಣಿಯಂತಿರಬೇಕು. ಈಗಲೂ ನಮ್ಮ ದೇಶದಲ್ಲಿ ಈ ರಕ್ಷಾಬಂಧನವು ಏನೂ ಅರ್ಥವಿಲ್ಲದ ಹಬ್ಬವಾಗಿ ಮುಂದುವರಿಯುತ್ತಿದೆ.



ವಿಷಯಗಳಿಂದ ಸುಖವು ಸಿಗಲಾರದು. ಏಕೆಂದರೆ ವಿಷಯಗಳು ಜರ್ಜರಿತವಾಗುವವು, ನಾಶವಾಗುವವು, ಕಳೆದು ಹೋಗುವವು, ಮಾನವನ ಇಂದ್ರಿಯಗಳೂ ಶಿಥಿಲವಾಗುವವು. ದೇಹವು ನಾಶವಾಗುವದು. ಆದರೆ ವಾಸನೆಗಳು ನಾಶವಾಗುವದಿಲ್ಲ. ಆ ವಾಸನೆಗಳಿಂದ ಪುನರ್ಜನ್ಮ ಬರುವದು.

"ಭಾರತ" ಎಂದರೆ ಸ್ವರೂಪದಲ್ಲಿ ರತನಾದವನು ಅಥವಾ ಸ್ವರೂಪದಲ್ಲಿ ರತರಾದಂಥವರು ವಾಸಿಸುವ ದೇಶ ಎಂಬ ಅರ್ಥವಾಗುವದು. ಭಾರತವು ಒಂದಾನೊಂದು ಕಾಲಕ್ಕೆ ಅನೇಕ ಬ್ರಹ್ಮನಿಷ್ಠರ ನೆಲೆವೀಡಾಗಿತ್ತು. ಆ ಪರಂಪರೆಯು ಇಂದು ನಮ್ಮಿಂದ ಪಾಶ್ಚಿಮಾತ್ಯರ ಪ್ರಭಾವದಿಂದ ಮರೆಯಾಗಿ ಹೋದಂತಾಗಿ ಅದು ಇದ್ದರೂ ಇಲ್ಲದಂತಾಗಿದೆ.

ತನ್ನ ನಿಜಸ್ವರೂಪವನ್ನು ಅನೇಕ ಯುಕ್ತಿಗಳಿಂದ ಸತತವೂ ಮನನ ಮಾಡುತ್ತಿರಬೇಕು. ಮನನವಾದ ಮೇಲೆ ನಿದಿಧ್ಯಾಸನವು ಮುಂದುವರಿಯಬೇಕು. ಆನಂದಭಾವ ಯಾವಾಗಲೂ ಇದ್ದರೆ ಆನಂದವಾಗಿ ಉಳಿಯಲು ಬರುವದು. ಆನಂದವನ್ನು ನೆಲೆಗೊಳಿಸುವಾಗ ನಿದ್ರೆಯು ಬರುವದು. ಆದ್ದರಿಂದ ನಿದ್ರೆಯನ್ನು ಮೀರಬೇಕೆಂದು ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದ್ದಾನೆ. ವ್ಯವಹಾರಿಕ ಕೆಲಸಗಳನ್ನು ಮಾಡುತ್ತಿದ್ದರೂ ಆನಂದಭಾವದಲ್ಲಿಯೇ ಇರಬೇಕು. ಉಸಿರಾಟವು "ಸೋಹಂ" ಎಂಬ ಉಚ್ಚರಣೆಯಂತಿದೆ. ಆದ್ದರಿಂದ ಪ್ರತಿ ಉಸಿರಿಗೆ "ಸೋಹಂ" ಎಂಬುದು ನೆನಪಾಗುವಂತೆ ಸಾಧನೆಯು ಮುಂದುವರಿಯಬೇಕು. ಆಗ ಜಾಗ್ರವು ಅತ್ಯಂತಾಭಾವವೆಂಬುದು ನೆಲೆಗೊಂಡು ಸಮಾಧಿ ಹತ್ತುವದು. ಈ ವಿಶ್ವವೆಲ್ಲ ತನ್ನ ಕಲ್ಪನೆ ಮಾತ್ರ ಎಂಬುದು ತಿಳಿಯುವದು. ಆದ್ದರಿಂದ ಸಾಧ್ಯವಾದಷ್ಟು ಹೆಚ್ಚು ವೇಳೆಯನ್ನು ಸಾಧನೆಯಲ್ಲಿಯೇ ಕಳೆಯಬೇಕು.

* * * *

## 21-3-1978 ರ ಮುಂಜಾನೆ

ಹಿಂದಿನ ಜನ್ಮದಲ್ಲಿ ಓದಿದ್ದು ಮುಂದಿನ ಜನ್ಮದಲ್ಲಿ ಉಳಿಯುವದಿಲ್ಲ. ಆದರೆ ಸಂಸ್ಕಾರಗಳು (ಹೀನ ಮತ್ತು ಒಳ್ಳೆಯ) ಮಾತ್ರ ಉಳಿಯುತ್ತವೆ. ಆತ್ಮವಿದ್ಯೆಯನ್ನು ಹೇಳಿದರೂ ಅದನ್ನು ತೆಗೆದುಕೊಳ್ಳುವವರಿಲ್ಲ. ಏಕೆಂದರೆ ಹಿಂದಿನ ಜನ್ಮದಲ್ಲಿ ಆತ್ಮ ವಿಚಾರದ ದುಡಿಕೆಯು ಇಲ್ಲ. ಸ್ವರೂಪವು ಸುಖವು, ದೇಹವು

ದುಃಖವು. ತಾನೇ ಸ್ವರೂಪವಿದ್ದರೂ ಅನ್ಯ ದೇಹವು ತಾನೆಂದು ತಿಳಿದುಕೊಳ್ಳುವದೇ ವಂಚನೆಯು, ಕಳ್ಳತನವು, ನಾಸ್ತಿಕತೆಯು. ಆದ್ದರಿಂದ ಸ್ವರೂಪ ಜ್ಞಾನವೇ ಪ್ರಯೋಜಕವು. ಇಡೀ ವಿಶ್ವದ ಜ್ಞಾನವೆಲ್ಲ ನಿಷ್ಪ್ರಯೋಜಕವೇ ಸರಿ.

ಮಹಾಂತರೆಂದರೆ ಪೂಜಾರಿಗಳಲ್ಲ, ಮಹಾತ್ಮರು, ಸ್ವರೂಪದಲ್ಲಿ ನೆಲೆಗೊಂಡು ನಿಂತವರು. ಯಾವಾಗ ಬೇಕಾದಾಗ ಸುಖವನ್ನು ಹೊಂದಲಿಕ್ಕೆ ಬರುವಂಥವರು. ತತ್ತ್ವಾರ್ಥಕ್ಕಾಗಿ ಇಂಥವರ ದರ್ಶನವನ್ನು ಪಡೆಯಬೇಕು.

* * * *

## 21-3-1978 ರ ಸಾಯಂಕಾಲ

ಸುಖರೂಪವೇ ನಾವಿದ್ದೇವೆ. ಅದನ್ನು ಮರೆತು ಅವಸ್ಥೆಗಳನ್ನು ಕಲ್ಪಿಸಿ, ಕಲ್ಪಿತ ಅವಸ್ಥೆಗಳ ವಸ್ತುಗಳಲ್ಲಿಯೇ ನಾವು ಸುಖವನ್ನು ಹುಡುಕುತ್ತಿದ್ದೇವೆ. ಸುಖವನ್ನು ನಮ್ಮನ್ನು ಬಿಟ್ಟು ಹೊರಗೇ ಹುಡುಕುತ್ತಿದ್ದೇವೆ. ಅದೆಂದಿಗೆ ಸಿಗಬೇಕು? ಸಾಧ್ಯವಿಲ್ಲ. ವೇದಾಂತವು ತಿಳುವಳಿಕೆಯ ಕೊನೆಯ ಮೆಟ್ಟಲು. ವೇದಾಂತವು ನಮ್ಮ ಸುಖದ ಆಸೆಯನ್ನು ಪೂರ್ತಿಗೊಳಿಸುವದು.

ನಿದ್ರೆಯಲ್ಲಿ ಶರೀರಭಾವವಿಲ್ಲ. ನೀನು ಆನಂದಮಯನಾಗಿರುವಿ. ಎಚ್ಚತ್ತ ಕೂಡಲೆ ಶರೀರ ಭಾವವು ಬಂದು ದುಃಖವಾಗುವದು.

ಹರಿಹರ ಬ್ರಹ್ಮಾದಿಗಳು ಮನಸ್ಸಿನ ಕೂಲಿ ಆಳುಗಳು. ಮನಸ್ಸಿನ ಕರ್ಮಕ್ಕನುಗುಣವಾಗಿ ಹರಿಹರ ಬ್ರಹ್ಮಾದಿಗಳು ವಸ್ತುಗಳನ್ನು ತಯಾರಿಸಿ ಕೊಡುವ ಮುಂತಾದ ಕಾರ್ಯಗಳನ್ನು ಮಾಡುವರು.

ಪರರ ಮಾತಿಗೆ ಮರುಳಾಗಬೇಡಿರಿ. ಗ್ರಂಥದಲ್ಲಿ ಹೇಳಿದ ವಿಚಾರವೆಂದು ಮರುಳಾಗಬೇಡಿರಿ. ಎಲ್ಲವನ್ನೂ ನಿಮ್ಮ ಸ್ವಂತ ಅನುಭವದಿಂದ ತಿಕ್ಕಿ ನೋಡಿ. ಬುದ್ಧಿಯ ಮಾಲಿನ್ಯತೆಯನ್ನು ತೊಳೆದು ನೋಡಿರಿ.

ಜಾಗ್ರದ ವ್ಯವಹಾರವು ದುಃಖವನ್ನೇ ಕೊಡುವದು. ಆದ್ದರಿಂದಲೇ ಸುಖವನ್ನು ಪಡೆಯುವದಕ್ಕಾಗಿ ನಿದ್ರೆಗೆ ಹೋಗುವೆವು. ಪ್ರತಿದಿನದ ಕೊನೆಗೆ ಸುಖದ ಶಿಲ್ಕು ಉಳಿಯುವದಿಲ್ಲ. ದುಃಖದ ಬೇಸರಿಕೆಯ ಶಿಲ್ಕು ಮಾತ್ರ ಉಳಿದಿರುವದು. ಆದ್ದರಿಂದ ಜಾಗ್ರದ ವ್ಯವಹಾರದಿಂದ ಏನೂ ಪ್ರಯೋಜನವಿಲ್ಲ.



ಎಲ್ಲಾ ತೋರಿಕೆಗೂ ಆಧಾರಭೂತನು ನೀನು. ತೋರಿಕೆಯು ನಿನ್ನಲ್ಲಿ ಯಾವ ಬಾಧೆಯನ್ನೂ ಮಾಡಲಾರದು.

ನಿದ್ರೆಯಲ್ಲಿ ಬೇಡಿಕೆಯಿಲ್ಲ, ಆನಂದವಿದೆ. ಜಾಗ್ರದಲ್ಲಿ ಬೇಡಿಕೆಯಿದೆ, ದುಃಖವಿದೆ.

ನಿದ್ರೆಯ ಆರಾಮ ನಿದ್ರೆ ಮಾಡಿದಾಗ, ಸಮಾಧಿಯ ಆರಾಮ ಸಮಾಧಿಯನ್ನು ಹೊಂದಿದಾಗ. ಇಹಪರ ಭೋಗವು ದುಃಖಮಯವೆಂದು ತಿಳಿದು ಭೋಗಕ್ಕೆ ಮನವೆಳಸದಿರುವದೇ ಸನ್ಯಾಸ. ಭೋಗದ ಸಾಮರ್ಥ್ಯವಿದ್ದರೂ, ಭೋಗಕ್ಕೆ ವಿಘ್ನಗಳು ಇರದಿದ್ದರೂ, ಭೋಗವು ದುಃಖಮಯವೆಂದು ಅದಕ್ಕೆ ಮನವೆಳಸದೇ ಇರಬೇಕು. ಹೊರಗೆ ಭೋಗದ ವಸ್ತುಗಳನ್ನು ಬಿಟ್ಟು, ಮನಸ್ಸಿನೊಳಗೆ ಬಿಟ್ಟ ವಿಷಯಗಳ ಅಥವಾ ಇತರ ವಿಷಯಗಳ ಬಗೆಗೆ ಸುಖದ ತಿಳುವಳಿಕೆ ಇದ್ದರೆ ಏನೂ ಪ್ರಯೋಜನವಿಲ್ಲ. ಮೈಮೇಲಿನ ಅರಿವೆಗಳ ಬಣ್ಣ ಬದಲು ಮಾಡಿದರೆ ಪ್ರಯೋಜನವೇನು? ಇಹ-ಪರ ಭೋಗವು ದುಃಖಮಯವು, ಸುಖಮಯವಲ್ಲ ಎಂಬ ತಿಳುವಳಿಕೆಯನ್ನು ರೂಢಿ ಮಾಡಿಕೊಳ್ಳಬೇಕು. ಮನಸ್ಸು ಭೋಗದಿಂದ ದಣಿಯುವದು. ದಣಿವು ದುಃಖಮಯವೇ. ಸುಖದ ಅನುಭವ ನಡೆದಾಗ ದಣಿವಿಲ್ಲ. ನಿದ್ರೆಯಿಂದ ದಣಿವಾಗುವದೇ?

ನಿದ್ರೆಯ ಆನಂದವು ಅಜ್ಞಾನದ ಮುಖಾಂತರ ಆನಂದವು. ಮೂರ್ಛೆ, ಅಮಲು ಪದಾರ್ಥಗಳ ಸೇವನೆಯಿಂದ ಪ್ರಾಪ್ತವಾದ ಸ್ಥಿತಿ, ನಿದ್ರೆ, ಹಠ ಯೋಗಾಭ್ಯಾಸದಿಂದ ಅನುಭವಕ್ಕೆ ಬಂದ ಆನಂದವು ನಿಜವಾದ ಆನಂದವಲ್ಲ. ಸುಜ್ಞಾನದ ಮೂಲಕ ಇರುವ ಆನಂದವೇ ನಿಜವಾದ ಆನಂದವು. (ತುರ್ಯದ ಆನಂದವು) ಕಣ್ಣು ತೆರೆದಿದ್ದರೂ, ಶರೀರವು ಓಡಾಡುತ್ತಿದ್ದರೂ ಸದ್ಗುರು ಶಿವಾನಂದರು ತುರ್ಯದಲ್ಲಿರುತ್ತಿದ್ದರು. (ಕರ್ಮೇಂದ್ರಿಯಗಳು ರೂಢಿಗತವಾಗಿ ತಮ್ಮ ಕೆಲಸದಲ್ಲಿ ತೊಡಗಿರುವವು. ಆದರೆ ಜ್ಞಾನೇಂದ್ರಿಯಗಳು ತಮ್ಮ ಕ್ರಿಯೆಗಳಲ್ಲಿ ತೊಡಗಿರುವದಿಲ್ಲ.)

ಧ್ಯಾನಕ್ಕೆ ಕೂತಾಗ ಕಣ್ಣು ಮುಚ್ಚಿದರೆ ನಿದ್ರೆಯ ಸುಂದು ಬರಬಹುದು, ಬರುತ್ತದೆ. ಕಣ್ಣು ತೆರೆದರೆ ಸಂಕಲ್ಪ-ವಿಕಲ್ಪಗಳು ಹೆಚ್ಚಾಗುವವು. ಆದ್ದರಿಂದ ಧ್ಯಾನಕ್ಕೆ ಕೂತಾಗ ಕಣ್ಣುಗಳನ್ನು ಮುಚ್ಚುವ ಅವಶ್ಯಕತೆಯೇನೂ ಇಲ್ಲ. ಕಣ್ಣುಗಳನ್ನು ಮುಚ್ಚಬಹುದು ಅಥವಾ ತೆರೆದಿಡಬಹುದು. ಕಣ್ಣು ತೆರೆದರೂ ಏನೂ ಕಾಣಿಸಬಾರದು,

ಸಂಕಲ್ಪ-ವಿಕಲ್ಪಗಳು ಉಳಿಯಬಾರದು. ಸ್ವರೂಪದ ಕಡೆಗೆ ಮನಸ್ಸು ಏಕಾಗ್ರವಾಗಬೇಕು. ಈ ರೀತಿಯಾಗಿ ಧ್ಯಾನವು ಮುಂದುವರಿಯಬೇಕು. ಮನಸ್ಸು ಅಮನಸ್ಕಾಗಬೇಕು.

ಮನಸ್ಸಿದ್ದಾಗಲೇ ಹಸಿವು, ತೃಷೆ, ಮಾನ, ಮರ್ಯಾದೆ, ಶೋಕ, ಮೋಹ ಎಲ್ಲವೂ. ಉಪಾಧಿಯಲ್ಲಿ (ಕನಸು ಜಾಗ್ರಗಳಲ್ಲಿ ಮಾತ್ರ) ಮನಸ್ಸು ಕರ್ಮ ಮಾಡುವದು, ಫಲ ಉಣ್ಣುವದು ನಡೆಯುವದು. ಪ್ರಾಜ್ಞನಿಗೆ ಆನಂದ ಮಾತ್ರವಿರುವದು, ಕರ್ಮ ಮತ್ತು ಕರ್ಮದ ಫಲವಿಲ್ಲ. ಆತ್ಮನು ನಿಷ್ಕ್ರಿಯನು. ಎಲ್ಲವೂ ಅಹಂಭಾವ ಇದ್ದಾಗ ಮಾತ್ರ. ಹಮ್ಮು ಅಜ್ಞಾನದಲ್ಲಿ ಅಡಗಿದಾಗ ಕರ್ಮ ಮತ್ತು ಅದರ ಫಲವಿಲ್ಲ. ಕರ್ತೃತ್ವ-ಭೋಕ್ತೃತ್ವವಿಲ್ಲ. ಕರ್ಮ ಮತ್ತು ಅದರ ಫಲ ಉಣ್ಣುವದು ಕನಸು ಜಾಗ್ರಗಳಲ್ಲಿ ಮಾತ್ರ. ಕರ್ಮ ರೂಪಿ ಕೂಲಿಯ ಮುಖಾಂತರ ಹರಿಹರ ಬ್ರಹ್ಮಾದಿಗಳು ಕರ್ಮಫಲವೆಂಬ ಸಾಮುಗ್ರಿ ತಯಾರು ಮಾಡಿ ಕೊಡುವರು.

ಜೀವನವೆಲ್ಲವೂ ಆಹಾರ, ನಿದ್ರೆ, ಭಯ, ಮೈಥುನಗಳಿಗಾಗಿಯೇ ಕಳೆದುಹೋಗುತ್ತಿದೆ. ಆದರೂ ಯಾವದೇ ಒಂದು ಇಂದ್ರಿಯವನ್ನು ಕೂಡ ತೃಪ್ತಿಪಡಿಸುವದು ಸಾಧ್ಯವಾಗಿಲ್ಲ. ಅಂದರೆ ಭೋಗಪಡೆಯಬೇಕೆಂಬ ವಾಸನೆಗಳು ಹಾಗೆಯೇ ಉಳಿದಿವೆ. ಈ ವಾಸನೆಗಳು ಮತ್ತು ಕರ್ಮಗಳಿಗನುಗುಣವಾಗಿ ಮುಂದಿನ ಜನ್ಮವು ಬರುತ್ತದೆ. ಹೀಗೆ ಜನ್ಮ-ಜನ್ಮಾಂತರ ಭೋಗ ನಡೆಸಿದಾಗ್ಯೂ ಇಂದ್ರಿಯಗಳನ್ನು ತೃಪ್ತಿಪಡಿಸಲಿಕ್ಕೆ ಸಾಧ್ಯವಾಗಿಲ್ಲ. ಮಾನವ ಜನ್ಮದ ಹೊರತಾಗಿ ಉಳಿದ ಯಾವದೇ ಜನ್ಮದಿಂದ ಪುನಃ ಜನ್ಮವು ಬರದಂತೆ ಮಾಡಿಕೊಳ್ಳಲಿಕ್ಕೆ ಬರುವದಿಲ್ಲ. ಮಾನವನಿಗೆ ಮಾತ್ರ ವಿಚಾರ ಶಕ್ತಿಯು (ವಿವೇಕ) ಇದೆ. ಈ ವಿಚಾರದಿಂದ ವಾಸನಾನಾಶ ಮಾಡಿಕೊಳ್ಳಲು ಬರುವದು. ಅದರಿಂದ ಪುನರ್ಜನ್ಮವನ್ನು ತಪ್ಪಿಸಿಕೊಳ್ಳಲು ಬರುವದು. ಆದರೆ ಇಂಥ ಉಪಯುಕ್ತವಾದ (ಮುಕ್ತಿಯ ದ್ವಾರವಾದ) ಮಾನವ ಜನ್ಮವನ್ನೇ ಇಂದ್ರಿಯಗಳನ್ನು ತೃಪ್ತಿಪಡಿಸುವ ಪ್ರಯತ್ನದಲ್ಲಿ ಕಳೆದುಕೊಳ್ಳುತ್ತೇವೆ. ಆದ್ದರಿಂದ ಮಾನವ ಜನ್ಮದ ಗುರಿ ತುರ್ಯವನ್ನು ಹೊಂದುವದೇ (ತನ್ನ ಸ್ವರೂಪದ ಅಜ್ಞಾನವನ್ನು ಕಳೆದುಕೊಳ್ಳುವದೇ) ಆಗಿದೆ. ಆಹಾರ ಮೈಥುನಾದಿಗಳು ಪ್ರಾರಬ್ಧದಂತೆ ನಡೆಯುತ್ತವೆ. ಆದ್ದರಿಂದ ಮಾನವ ಜನ್ಮದಲ್ಲಿಯ ಹೆಚ್ಚಿನ ವೇಳೆಯನ್ನು ಸ್ವರೂಪಚಿಂತನೆಗಾಗಿ ಉಪಯೋಗಿಸಬೇಕು. ವ್ಯವಹಾರದ ಕೃತ್ಯಗಳನ್ನು ಮಾಡುವಾಗಲೂ ಮನನ ಮಾಡಲು ಬರುವದು. ಎಲ್ಲೆಡೆಯಲ್ಲಿಯೂ ಸ್ವರೂಪವನ್ನು ಲಕ್ಷಿಸಲು ಬರುವದು. ಮೋಹವು ನಾಶವಾಗಿ ನಿರ್ಮೋಹ ಬಂದು



ಸ್ವರೂಪದ ಕಡೆಗೆ ಲಕ್ಷವು ಹರಿಯಬೇಕು. ಪ್ರಾರಬ್ಧಕ್ಕನುಸಾರವಾಗಿ ಉದ್ಯೋಗಗಳು ಭಿನ್ನವಾಗಿರಬಹುದು.(ಉದಾಹರಣೆಗೆ ಜನಕನು ರಾಜನು, ಕೃಷ್ಣನು ಆಕಳುಗಳನ್ನು ಕಾಯುತ್ತಿದ್ದನು, ರಾಮನು ರಾಜನು, ಹನುಮಂತನು ದೂತನು, ಸಕ್ರೆ ಶಂಕರೆಪ್ಪನವರು ವ್ಯಾಪಾರಿಗಳು, ಕೌಸಿದ್ದ ಮಲ್ಲಪ್ಪನವರು ನೇಕಾರರು, ಶಿವಾನಂದರು ಪೋಲೀಸಗೌಡರು ಮತ್ತು ಶಿಕ್ಷಕರು)

ವಿಷಯಗಳಿಗಾಗಿ ಅನೇಕ ಶರೀರಗಳು ಹೋಗಿವೆ. ಸೇಡು ತೀರಿಸಿಕೊಳ್ಳುವ ಪ್ರವೃತ್ತಿಯಿದ್ದರೆ ಮುಂದೆ ಪಿಶಾಚಿ ಜನ್ಮವು ಬರಬಹುದು. ಆದ್ದರಿಂದ ಸೇಡು ತೀರಿಸಿಕೊಳ್ಳುವ ಪ್ರವೃತ್ತಿಯನ್ನು ತ್ಯಜಿಸಬೇಕು. ವಿಚಾರದಿಂದಲೇ ಮೋಹವು ನಾಶವಾಗುವದು. ಬುದ್ಧಿ ಎಂಬ ಕಾಗದಕ್ಕೆ ನಿರಂತರವಾಗಿ ಮೋಹರೂಪಿ ಎಣ್ಣೆಯು ಸುರಿಯುತ್ತಲಿದೆ (ಜೀವನವೆಲ್ಲವೂ ಮೋಹದಿಂದಲೇ ತುಂಬಿರುವದು) ಆದರೆ ಅದು ಸ್ವಲ್ಪ ವಿಚಾರವೆಂಬ ಬೆಂಕಿಯಿಂದ ಆರುವದಿಲ್ಲ. ನಿರಂತರ ಪ್ರಶಾಂತ ಕುಶಾಗ್ರ ಬುದ್ಧಿಯಿಂದ ವಿವೇಕದಿಂದ ಮಾತ್ರ ಮೋಹವನ್ನು ಸುಡುವದು ಸಾಧ್ಯ.

ಸಾಧಕರು ಎಲ್ಲಿ ಇರುವರೋ ಅಲ್ಲಿಗೆ ಬ್ರಹ್ಮನಿಷ್ಠನ ಶರೀರವು ಹೋಗಬಹುದು. ತುರ್ಯವನ್ನು ಹೊಂದುವದು ಅತಿ ಕಠಿಣ. ಕಬ್ಬಿಣದ ಕಡಲೆಗೆ ವಜ್ರದ ಹಲ್ಲೇ ಬೇಕು ಎಂಬಂತಿದೆ.

ಇಂದ್ರಿಯವು ಪರಗ್ರಾಮವು, ಶರೀರವು ಪರಸ್ಥಳವು, ಪಿಶಾಚಿ, ರಾಕ್ಷಸ ಇವೆಲ್ಲ ಮನಸ್ಸಿನ ಭ್ರಮೆಯು. (ಮನೋಕಲ್ಪಿತವು)

ಧ್ಯಾನದ ಕಾಲಕ್ಕೆ ಕೆಲಸ ಕಾರ್ಯಗಳಿಲ್ಲ. ನಂತರ ವ್ಯವಹಾರಿಕ ಕೆಲಸಗಳನ್ನು ಮಾಡಲು ಬರುತ್ತದೆ. ವಶಿಷ್ಠರು 101 ಮಕ್ಕಳನ್ನು ಪಡೆದಿದ್ದರು. ವ್ಯವಹಾರವು ಕಡಿಮೆಯಾಗಬೇಕು. ಏಕೆಂದರೆ ಎಷ್ಟು ಮಾಡಿದರೂ ಅದು ವಿಷಮವೇ. ಸ್ವರೂಪ ಚಿಂತನೆಯು ಅತಿಯಾಗಬೇಕು. ಏಕೆಂದರೆ ಅದು ಅತಿಯಾದಷ್ಟು ನಾವು ತುರ್ಯವನ್ನು ಹೊಂದಲು ಸಹಾಯಕವಾಗುವದು.

ನೋಡುವ ಬುದ್ಧಿಗೆ ಶರೀರ ಮತ್ತು ವಿಶ್ವ ಕಾಣಿಸುವವು. (ಜಾಗ್ರ ಮತ್ತು ಕನಸು) ನೋಡಲಾರದ ಬುದ್ಧಿಗೆ ಏನೂ ಕಾಣಿಸುವದಿಲ್ಲ. ನಿದ್ರೆಯಲ್ಲಿ ಶರೀರ ಮತ್ತು ಜಗತ್ತು ಕಾಣಿಸುವದಿಲ್ಲ. ಆತ್ಮಜ್ಞನಿಗೆ ಇರುವಿನಲ್ಲಿ ಶರೀರ ಮತ್ತು ವಿಶ್ವ ಇಲ್ಲವೆಂಬ ತಿಳುವಳಿಕೆ ನೆಲೆಗೊಂಡಿರುವದರಿಂದ ಶರೀರವು ಕಾಣಿಸಿದರೂ ಬಾಧಿಸುವದಿಲ್ಲ. ಶರೀರ ಭಾವವಿದ್ದಾಗಲೇ ಹಸಿವು-ನೀರಡಿಕೆ, ರೋಗದ ಸಂಕಟ, ರಾಗ-ದ್ವೇಷಾದಿಗಳು, ಶರೀರ

ಭಾವ ಅಳಿದಾಗ ಇವುಗಳ ಬಾಧೆಯಿಲ್ಲ. ತುರ್ಯದಲ್ಲಿ ದೇಹಭಾವ ಅಳಿದು ಸ್ವರೂಪ ಭಾವ ನೆಲೆಗೊಂಡಿರುವದರಿಂದ ಶಾಶ್ವತ ಸುಖವು.

ಯಾವ ಪುಸ್ತಕವನ್ನೂ ಓದದೆ ನಿಮ್ಮ ಅನುಭವವನ್ನೇ ಪರಿಶೀಲಿಸಿ ಶಾಶ್ವತ ಸುಖವನ್ನು ಪಡೆಯಿರಿ. ಪುಸ್ತಕಗಳು ಸಹಾಯವಾಗುವವು. ಆದರೆ ಸ್ವಾನುಭವವು ಮುಖ್ಯವು. ಯಸ್ಯನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯಕರೋತಿ ಕಿಮ್,

ಹಿಂದಿನ ಜನ್ಮದ ವಾಸನೆಗಳೇ ಮುಂದುವರಿಯುವವು. ಹಿಂದಿನ ಜನ್ಮದಲ್ಲಿ ಕಾಮುಕತ್ವವಿದ್ದರೆ ಈ ಜನ್ಮದಲ್ಲಿ ಕಾಮುಕತ್ವವೇ ಮುಂದುವರಿಯುವದು. ಹಿಂದಿನ ಜನ್ಮದಲ್ಲಿ ಅಧ್ಯಾತ್ಮದ ದುಡಿಕೆ ಇದ್ದರೆ ಈ ಜನ್ಮದಲ್ಲಿ ವಿಷಯೇಂದ್ರಿಯ ಭೋಗವು ದುಃಖಮಯವು ಎಂಬ ತಿಳುವಳಿಕೆಯು ಉಂಟಾಗಿ ಸ್ವರೂಪಾನಂದದ ಸ್ವಾದವು ಹತ್ತುವದು. ಓದುವದು, ಕೇಳುವದು, ಹೇಳುವದು, ಬರೆಯುವದು, ಇವುಗಳಿಂದ ವಿಶೇಷ ಏನೂ ಪ್ರಯೋಜನವಿಲ್ಲ, ಸಹಾಯವಾಗಬಹುದು. ಬ್ರಹ್ಮ ನಿಷ್ಠತ್ವವನ್ನು ಹೊಂದುವದೇ ನಿಜವಾದ ಸಾಧನೆ.

ಬ್ರಹ್ಮನಿಷ್ಠರು ಮಾರ್ಗದರ್ಶಕರು ಮಾತ್ರ. ಆದರೆ ನಮ್ಮ ವಾಸನೆಗಳನ್ನು ನಾಶಮಾಡಿಕೊಂಡು ನಮ್ಮ ಸ್ವರೂಪವನ್ನು ಹೊಂದುವವರು ನಾವೇ.

ನಿದ್ರೆಯ ಮಬ್ಬು ನಿದ್ರೆಯಾಗಿ ಮುಂದುವರಿಯುವದು. ಅದರಂತೆ ಆನಂದ ಸೂತ್ರವು. (ಬ್ರಹ್ಮಸೂತ್ರ ಅಥವಾ ಸಂಧ್ಯಾ) ಆನಂದವಾಗಿ ಮುಂದುವರಿಯುವದು. ಆನಂದ ಸೂತ್ರವು ಪ್ರಾರಂಭವಾಗುವಾಗ ವಿಘ್ನ ಬಂದರೆ ಆನಂದಾನುಭವವು ನಡೆಯುವದಿಲ್ಲ. ಆದ್ದರಿಂದ ಆನಂದ ಸೂತ್ರವನ್ನು ಹೊಂದುವಾಗ ಶರೀರವನ್ನು ಏಕಾಂತ ಸ್ಥಳದಲ್ಲಿ ಇಡುವರು. ಆನಂದ ಸೂತ್ರವನ್ನು ಹೊಂದುವದು ರೂಢಿಯಾದಾಗ ಯಾವದೇ ವಿಘ್ನ ಬಂದರೂ ಅದು ಆನಂದವನ್ನು ಹೊಂದುವದಕ್ಕೆ ವಿಘ್ನವಾಗುವದಿಲ್ಲ.

ಮನಸ್ಸಿನ ಕಳ್ಳತನವನ್ನು ಕಳೆದುಕೊಂಡಾಗ ಸಾಧುವಾಗಲು ಬರುವದು. ಧ್ಯಾನಕ್ಕೆ ಕೂತಾಗ ಕಣ್ಣು ತೆರೆದರೂ ಏನೂ ಕಾಣಿಸಬಾರದು. ಕಿವಿ ತೆರೆದರೂ ಏನೂ ಕೇಳಿಸಬಾರದು. ಆದ್ದರಿಂದ ಧ್ಯಾನಕ್ಕೆ ಕೂತಾಗ ಇಂದ್ರಿಯಗಳು ತೆರೆದಿರಬೇಕು, ಮನಸ್ಸು ಮುಚ್ಚಿರಬೇಕು. ಯಾವಾಗಲೂ ವಾಸನಾ ತೆರೆಯು ಬರದಂತೆ ಜಾಗ್ರತೆ ವಹಿಸಬೇಕು. ಅಭ್ಯಾಸದಿಶೆಯಲ್ಲಿ ನಿದ್ರೆಯು ವಿಘ್ನವಾಗುವದು. ನಿದ್ರೆಯು ಬರದಂತೆ ನೋಡಿಕೊಳ್ಳಬೇಕು. ಈ ರೀತಿಯಾಗಿ ಅಭ್ಯಾಸವು ಮುಂದುವರಿದಾಗ ತುರ್ಯವು ಸಾಧಿಸುವದು.

* * * *



## 24-3-1978 ರ ಸಾಯಂಕಾಲ

ಬ್ರಹ್ಮನಿಷ್ಠರ ವ್ಯವಹಾರವು ಸಾಮಾನ್ಯರಂತೆ ನಡೆದಿರುವದು. ಆದರೆ ಸಂಕಟ, ಭಯ, ಶೋಕ, ಮೋಹಗಳು ಇರುವದಿಲ್ಲ. ಒಮ್ಮೊಮ್ಮೆ ಬ್ರಹ್ಮನಿಷ್ಠನು ತನ್ನ ಬ್ರಹ್ಮನಿಷ್ಠತ್ವವನ್ನು ತಿಳಿಯಗೊಡದಂತೆ ಇರುತ್ತಾನೆ. ನಿತ್ಯ ಸಂಪರ್ಕದಿಂದ ಮಾತ್ರ ತಿಳಿಯುವದು. ಮೋಹಕರೊಡನೆ ಮೋಹವುಳ್ಳವನಂತೆ, ಸಾಮಾನ್ಯರೊಡನೆ ಸಾಮಾನ್ಯರಂತೆ ಇರುವನು. ಬಾಹ್ಯದಲ್ಲಿ ಅತಿ ಸಂಕಟ ಪಟ್ಟಂತೆ ನಟನೆ ಮಾಡುವನು, ಆದರೆ ಒಳಗೆ ಅವನಿಗೆ ಏನೂ ಬಾಧೆಯಿಲ್ಲ. (ರಾಮನು ಸೀತೆಯನ್ನು ಕಳೆದುಕೊಂಡು ಹುಡುಕುತ್ತಿದ್ದನು. ವಶಿಷ್ಠನು 101 ಮಕ್ಕಳನ್ನು ಪಡೆದಿದ್ದನು, ಯಾಜ್ಞವಲ್ಕ್ಯನು ಎರಡನೆಯ ಹೆಂಡತಿಯಾದ ಮೈತ್ರೇಯಿಯೊಡನೆ ಭೋಗಿಸಿ ಮಕ್ಕಳನ್ನು ಪಡೆದನು. ರಾಮತೀರ್ಥರು ಜ್ಞಾನಾನಂತರ ಎರಡು ವರ್ಷ ತಮ್ಮ ಪತ್ನಿಯೊಡನೆ ಸಂಸಾರಿಕ ಜೀವನವನ್ನು ನಡೆಸಿದರು.)

ಜಾತ್ರೆಯನ್ನು ಆಚರಿಸುವದರಿಂದ ಏನೂ ಪ್ರಯೋಜನವಿಲ್ಲ. ಅವು ರಂಜನೆಯ ಕೇಂದ್ರಗಳಾಗುವವು. ಕಡೆಗೆ ಅನೀತಿಯನ್ನು ಪ್ರಚೋದಿಸುವ ಕೇಂದ್ರಗಳಾಗುವವು. ಆದ್ದರಿಂದ ಅನ್ನ ಮತ್ತು ಜ್ಞಾನದಾನವೇ ಅತಿ ಶ್ರೇಷ್ಠವಾದುದು.

ಯೋನಿಯಲ್ಲಿ ಶರೀರದ ಬೀಜವನ್ನು ಬಿತ್ತಲಿಕ್ಕೆ ಬರುತ್ತದೆ. ಆದರೆ ಜ್ಞಾನವನ್ನು ಬಿತ್ತಲಿಕ್ಕೆ ಬರುವದಿಲ್ಲ. ಹಿಂದಿನ ಜನ್ಮದ ಅಧ್ಯಾತ್ಮ ವಿಚಾರದ ದುಡಿಕೆ ಇದ್ದರೂ ಸತ್ಸಂಗ, ಶ್ರವಣ, ಮನನಗಳು ಮುಂದುವರಿಯಬೇಕು. ಹಿಂದಿನ ಜನ್ಮದ ಅಧ್ಯಾತ್ಮ ವಿಚಾರದ ದುಡಿಕೆಯು ಇಲ್ಲದಿದ್ದರೂ ಸತ್ಸಂಗ, ಶ್ರವಣಗಳಿಂದ ಸ್ವಲ್ಪಾದರೂ ಪ್ರಭಾವವು ಆಗಿಯೇ ತೀರುತ್ತದೆ. ತಿಳಿಯದಿದ್ದರೂ ಸತ್ಸಂಗವನ್ನು ಬಿಡಬಾರದು. ಇದರಿಂದ ಸ್ವಲ್ಪಾದರೂ ಪ್ರಭಾವವು ಉಂಟಾಗುವದು. ಪೂರ್ವಜನ್ಮದ ಆತ್ಮಚಿಂತನೆಯ ದುಡಿಕೆ ಬಹಳವಿದ್ದರೆ ಮಾತ್ರ ಶಾಸ್ತ್ರದ ಪ್ರಭಾವವು ಆಗುವದು. ಈ ದುಡಿಕೆಯು ತೀಕ್ಷ್ಣತೆ ಹೆಚ್ಚಾದಂತೆ ಅಭ್ಯಾಸವು ತೀವ್ರ ಗತಿಯಿಂದ ಮುಂದುವರಿಯುವದು. ಗ್ರಂಥವನ್ನು ಅಭ್ಯಾಸ ಮಾಡಿ, ಅರ್ಥಾನುಸಂಧಾನ ವೃತ್ತಿಯು ನಡೆಯಬೇಕು. ಕೇವಲ ಓದುವುದರಿಂದ ಪ್ರಯೋಜನವಿಲ್ಲ. ಅಧ್ಯಾತ್ಮಿಕ ಉನ್ನತಿಗೆ ಹಿಂದಿನ ಸಂಸ್ಕಾರ, ಈಗಿನ ಸತ್ಸಂಗ ಮತ್ತು ಆನಂದ ಸೂತ್ರವನ್ನು ಹಚ್ಚಿಕೊಳ್ಳುವ ಪ್ರಯತ್ನ ಅವಶ್ಯವಾಗಿ ಬೇಕು.

ವಿಷಯೇಂದ್ರಿಯ ಸಂಪರ್ಕಭೋಗವು ಬೇಸರಿಕೆಯಲ್ಲಿ ಕೊನೆಗೊಳ್ಳುವದು.

ಭೋಗ ಹೆಚ್ಚಾದಂತೆಲ್ಲ ಸುಖ ಸಿಗಲಿಲ್ಲವೆಂದು ಬುದ್ಧಿಭ್ರಮೆಯಾಗುವದು. ಆದರೆ ನಿದ್ರೆ ಮಾಡುವದರಿಂದ ಬೇಸರಿಕೆ ಉಂಟಾಗುವದಿಲ್ಲ, ಬದಲಾಗಿ ಸುಖದ ಅನುಭವವೇ ನಡೆಯುತ್ತದೆ. ನಿದ್ರೆಯಿಂದ ಬುದ್ಧಿಯು ಕೆಡುವದಿಲ್ಲ. ನಿದ್ರೆಯಲ್ಲಿ "ಆನಂದದ ಅನುಭವ ನಡೆದಿದೆ" ಎಂಬ ತಿಳುವಳಿಕೆ ಇಲ್ಲದೆಯೇ ಆನಂದದ ಅನುಭವ ನಡೆದಿದೆ. ಆದರೆ ಮಾನವನು "ಆನಂದದ ಅನುಭವ ನಡೆದಿದೆ" ಎಂಬ ತಿಲುವಳಿಕೆ ಇದ್ದಾಗಲೇ ಆನಂದವನ್ನು ಅನುಭವಿಸುವದನ್ನು ಬಯಸುತ್ತಾನೆ. ಏಕೆಂದರೆ "ಆನಂದದ ಅನುಭವ ನಡೆದಿದೆ" ಎಂಬ ತಿಳುವಳಿಕೆ ಇದ್ದು ಆನಂದವನ್ನು ಅನುಭವಿಸಿದವನಾಗಿದ್ದಾನೆ. (ಪ್ರಥಮಾನುಭೂತಿಯಲ್ಲಿ). ಹೀಗೆ ತನ್ನ ತಿಳುವಳಿಕೆಯಿಂದ ಇದ್ದ ಸುಖದ ಅನುಭವದಿಂದಲೇ (ಅದನ್ನು ಮರೆತದ್ದರಿಂದ) ಸುಖದ ಬೇಡಿಕೆಯುಳ್ಳವನಾಗಿದ್ದಾನೆ. ಇವನು ಸುಖವನ್ನು ಯಾರಿಂದಲೂ ಕಲಿತಿಲ್ಲ. ಪ್ರಥಮಾನುಭೂತಿಯಲ್ಲಿ ಆನಂದದ ಹೊರತಾಗಿ ಅನ್ಯವೇನೂ ಇರಲಿಲ್ಲ. (ಶಬ್ದ, ಶಬ್ದದ ಅರ್ಥ, ನಾದ ಯಾವವೂ ಇದ್ದಿಲ್ಲ.) ಆನಂದಾಗಿ ಉಳಿದ ಅನುಭವವದು. ಹೀಗೆ ಸುಖವು ಅನುಭವಗಮ್ಯವು, ಇಂದ್ರಿಯಗಮ್ಯವಲ್ಲ. ಹೀಗೆ ಅನುಭವದಿಂದಲೇ ಆನಂದವನ್ನು ಕಲಿತಿದ್ದಾನೆ. ಆದ್ದರಿಂದ ಅನುಭವದಿಂದಲೇ ಆನಂದವನ್ನು ಹೊಂದುವದು ಸಾಧ್ಯವು. ಇದೇ ಆನಂದ ಸೂತ್ರವು. ಉಳಿದ ಅನೇಕ ಶಾಸ್ತ್ರಗಳನ್ನು ಕಲಿಯುವದರಿಂದ ಈ ಆನಂದಸೂತ್ರವು ಸಿಗುವದಿಲ್ಲ. ಆನಂದಸೂತ್ರವನ್ನು ಪಡೆಯುವದಕ್ಕಾಗಿ ಶಿಕ್ಷಣವನ್ನು (ಭೌತಿಕ) ಪಡೆಯಬೇಕಾಗಿಲ್ಲ. (ಮಹಮ್ಮದ ಪೈಗಂಬರ, ಝುರತುಷ್ಟ್ರ, ಕನ್‌ಫ್ಯೂಶಿಯಸ್, ಕ್ರಿಸ್ತ, ಸಿದ್ಧಾರೂಢ, ಬುದ್ಧ, ರಾಮಕೃಷ್ಣ ಪರಮಹಂಸ ಮೊದಲಾದವರು ಯಾವದೇ ವಿಶ್ವವಿದ್ಯಾಲಯದ ಡಿಗ್ರಿಯನ್ನು ಪಡೆದಿರಲಿಲ್ಲ) ಅಧ್ಯಾತ್ಮಿಕ ಸಂಸ್ಕಾರವು ಪ್ರಬಲವಾಗಿದ್ದರೆ ಈ ಆನಂದ ಸೂತ್ರವನ್ನು ಒಮ್ಮೆ ನೆನಪಿಗೆ ತೆಗೆದುಕೊಂಡರೆ ಅದು ಶಾಶ್ವತವಾಗಿ ಉಳಿಯಬಹುದು. ಇಲ್ಲದಿದ್ದರೆ ದೀರ್ಘ ಪ್ರಯತ್ನವು ಅವಶ್ಯವಿದೆ.

ಸ್ವರೂಪವು ಹೇಗೋ ಮರೆಯಿತು. ನಂತರ ಮೊದಲಿಗೆ ದೇಹಭಾವವು ಬಂದಿತು. ನಂತರ ವಾಸನಾದಿಗಳ ಭಾವ ಬಂದಿತು. ಆದ್ದರಿಂದ ಹೊಸದಾಗಿ ವಾಸನೆಗಳನ್ನು ಕಲಿಯುವದನ್ನು ಬಿಡಬೇಕು. (ಭೌತಿಕ ಶಿಕ್ಷಣ ಪಡೆದಂತೆ ವಾಸನೆಗಳು ಹೆಚ್ಚಾಗುವವು) ಮತ್ತು ವಾಸನೆಗಳನ್ನು ವಿವೇಕದಿಂದ ಕತ್ತರಿಸಬೇಕು. ನಂತರ ದೇಹಭಾವವನ್ನು ನಾಶಗೊಳಿಸಬೇಕು.

* * * *



## 25-3-1978 ರ ಮುಂಜಾನೆ

ಸುಖವನ್ನು ಹೊಂದುವದಕ್ಕೆ ಸಂಸ್ಥೆಯನ್ನು ಕಟ್ಟಬೇಕಾಗಿಲ್ಲ. ನಿದ್ರೆಯನ್ನು ಮಾಡಲಿಕ್ಕೆ ಗುಂಪುಕಟ್ಟಬೇಕಾಗುವದೋ? ನಿದ್ರೆ ಬಂದಾಗ ಜಗತ್ತಿನ ಗೊಡವೆಯಿಲ್ಲದೆ ನಿದ್ರೆ ಮಾಡುವೆವು. ನಿದ್ರೆಯ ಸುಖವನ್ನು ಅನುಭವಿಸಬೇಕಾದರೆ ಗುಂಪುಗಾರಿಕೆ ಅವಶ್ಯವಿಲ್ಲವೆಂದ ಮೇಲೆ ತುರ್ಯದ ಆನಂದವನ್ನು ಹೊಂದಲು ಗುಂಪುಗಾರಿಕೆ ಬೇಕಾಗುತ್ತದೆಯೇ? ಅವಶ್ಯವಿಲ್ಲ. ನಾವು ಸುಖವನ್ನು ಬೇಡುತ್ತಿದ್ದೇವೆ. ಆದರೆ ಆ ಸುಖದ ಸ್ವರೂಪವೇ ನಾವಾಗಿದ್ದೇವೆ. ಹೊರಗೆ ಹುಡುಕುತ್ತ ಹೋದರೆ ಹೇಗೆ ಸಿಗುವದು? ಸಿಗುವದು ಸಾಧ್ಯವಿಲ್ಲ. ನಿದ್ರೆಯ ಸುಂದು ಬಂದಾಗ ಹೊದ್ದುಕೊಳ್ಳುವ ಪರಿವೆಯೂ ಇಲ್ಲ. ಅದರಂತೆ ಆನಂದ ಸೂತ್ರವನ್ನು ಪಡೆಯುವದು ಬಂದಾಗ ಇಂದ್ರಿಯಗಳ ಪ್ರಚೋದನೆಯ ಪರಿವೆಯೇ ಇಲ್ಲ. ಮನಸ್ಸು ಆನಂದದಲ್ಲಿಯೇ ತನ್ಮಯವಾಗುವದು. ಆನಂದದ ಸ್ವಾದ ಹತ್ತದ್ದರಿಂದ ಮನಸ್ಸು ಚಂಚಲವಾಗುವದು. ಆನಂದದ ಸ್ವಾದ ಹತ್ತಿದರೆ ಮನಸ್ಸು ಚಂಚಲವಾಗುವದಿಲ್ಲ. ನಿದ್ರೆಯ ಮಬ್ಬು ವಜಾ ಹಾಕಿ ಆನಂದದ ಸ್ವಾದ ಹತ್ತಬೇಕು.

ಅಭ್ಯಾಸಕ್ಕೆ ಯಾವ ಆಸನವೂ ಬೇಕಾಗಿಲ್ಲ. ಕೂತಾಗ, ನಿಂತಾಗ, ಶೌಚಕ್ಕೆ ಹೋದಾಗ ಕೂಡ ಅಭ್ಯಾಸವನ್ನು ಮಾಡಲು ಬರುತ್ತದೆ. ಸ್ವರೂಪದ ಅಭ್ಯಾಸಕ್ಕೆ ಯಾವ ಪೂಜಾ ಸಾಮಗ್ರಿಯೂ ಬೇಕಾಗಿಲ್ಲ.

ಆನಂದವು ಉಪಾಧಿರಹಿತವು. ಉಪಾಧಿರಹಿತ ಆನಂದವು, ಉಪಾಧಿಯ ಮೂಲಕ ತೋರುವದು. ವ್ಯವಹಾರ ನಡೆದಾಗ ಆದ ಆನಂದವು ಮನಸ್ಸಿನ ನಿಶ್ಚಲ ಸ್ಥಿತಿಯಲ್ಲಿ ಅನುಭವಕ್ಕೆ ಬರುವದು. (ಈ ಆನಂದವು ಸ್ವರೂಪಾನಂದದ ಪ್ರತಿಫಲನವು.) ಇದು ಸತತವೂ ನೆನಪಿಗೆ ಬರಬೇಕು.

ಸ್ತ್ರೀ-ಪುರುಷ ಭೋಗವು ಮೂತ್ರಕ್ಕೆ ಹೆಚ್ಚು ಬಂದಾಗ ಮೂತ್ರ ವಿಸರ್ಜನೆ ನಡೆದಾಗ ತೋರುವ ಆನಂದದಂತೆ ಇರುವದು.

ಹಠಯೋಗ ಸಾಧನೆಯಿಂದ ಅಜ್ಞಾನವು ನಾಶವಾಗುವದಿಲ್ಲ, ಸಂಕಟವು ಹೋಗುವದಿಲ್ಲ. ನಿದ್ರೆಯಲ್ಲಿ ಶ್ವಾಸೋಚ್ಛ್ವಾಸವು ನಡೆದಿದೆ, ಆನಂದವಿದೆ. ಆದ್ದರಿಂದ ಆನಂದವನ್ನು ಹೊಂದಲಿಕ್ಕೆ ಶ್ವಾಸೋಚ್ಛ್ವಾಸವನ್ನು ನಿಲ್ಲಿಸಬೇಕಾಗಿಲ್ಲ. ವಾಯು ಬಂದ ಮಾಡಿದಾಗ ಶರೀರ ಹೋದರೆ ಹೋಗಬಹುದು. ಆನಂದದ ಸ್ವಾದ ಹತ್ತಬೇಕಾದರೆ ಮನಸ್ಸು ನಿಲ್ಲಬೇಕು. ಆನಂದ ಹೊಂದಲು ಪ್ರಾಣ-ಅಪಾನವಾಯುಗಳ

ಗೊಡವೆ ನಿನಗೇತಕೆ? ಈ ವಿಚಾರವು ದೃಢತರವಾದಾಗ ಆನಂದದ ಸ್ವಾದ ಹತ್ತುವದು. ಜನರ ಕೂಡ ಮಾತನಾಡುವಾಗಲೂ ಕೂಡ ಅಭ್ಯಾಸವು ನಡೆಯಬೇಕು.

ಜ್ಞಾನಿಯಿಂದ ಜ್ಞಾನಿಯೇ ಹುಟ್ಟುವನೆಂಬ ನಿಯಮವಿಲ್ಲ. ಹಾಗಾದರೆ ಋಷಿಗಳಿಂದ ಋಷಿಗಳೇ ಹುಟ್ಟುವದಾದರೆ ಋಷಿವಂಶದವರೆಲ್ಲಾ ಬ್ರಹ್ಮಜ್ಞಾನಿಗಳೇ ಆಗಬೇಕಾದೀತು. ಜ್ಞಾನಿಯಿಂದ ಜ್ಞಾನಿಯು ಹುಟ್ಟುವದು ಅಪವಾದವೇ ಸರಿ. (ಉದಾಹರಣೆಗೆ:ವ್ಯಾಸನಿಂದ ಶುಕನು) ಜ್ಞಾನಿಯು ಇಂಥಲ್ಲಿಯೇ ಜನ್ಮತಾಳುವನೆಂದು ನಿಯಮವಿದ್ದಿಲ್ಲ. ಅತಿ ಕೀಳು ಜನಾಂಗದಲ್ಲಿ ಹುಟ್ಟಬಹುದು. ವ್ಯಾಸನು ಮದುವೆಯಾಗದ ಮೀನುಗಾರ ಸ್ತ್ರೀ-ಪುರುಷರ ಭೋಗದಿಂದ ಹುಟ್ಟಿದನು ಎಂಬ ವದಂತಿ ಇದೆ. ಕಬೀರ ಮತ್ತು ಮಡಿವಾಳಪ್ಪನವರ (ಗರಗ) ತಾಯಿತಂದೆಗಳಾರು ಎಂಬುದು ಗುರುತೇ ಇಲ್ಲ. ಜ್ಞಾನಿಯಿಂದ ಅತಿ ಹೀನ ಮಾನವನು ಹುಟ್ಟಬಹುದು. ಜ್ಞಾನವು ವಂಶಪರಂಪರೆಗೆ ಅನುಗುಣವಾಗಿ ಬರುವದಿಲ್ಲ. ಹಿಂದಿನ ಜನ್ಮದ ಅಧ್ಯಾತ್ಮಿಕ ಸಂಸ್ಕಾರಕ್ಕನುಗುಣವಾಗಿ ಬರುವದು.

ಸಾಧಕನಿಗೆ ಭೂತ, ವರ್ತಮಾನ, ಭಾವೀ ಸ್ಥೂಲ ಮತ್ತು ಸೂಕ್ಷ್ಮ ವಿಘ್ನಗಳು ಬರುವವು. ಆದ್ದರಿಂದಲೇ ವರವಿವೇಕಿಗೂ ಕೂಡ ಮುಕ್ತಿಯು ಸಾಧ್ಯವಾಗುವದಿಲ್ಲ. ಇಂದು ಸಮಾಧಿಯನ್ನು ಹಚ್ಚಿಯೇ ತೀರುವೆನು ಎನ್ನುವವನಿಗೆ ವಿಘ್ನಗಳು ಬರುವವು. ಕುಳಿತ ಕೋಣೆಯು ಬುಡಮೇಲಾಗುವದು. ಪಿಶಾಚಿ, ಬ್ರಹ್ಮಪಿಶಾಚಾದಿಗಳು ಬಾಗಿಲಿಗೇ ಬಂದು ನಿಲ್ಲುವವು. ಅಂತರಂಗ ವಿಘ್ನಗಳನ್ನು ಮೀರುವದು ಅತಿ ಕಠಿಣವಾಗಿದೆ. ಹಾವುಗಳು ಬಂದರೂ ಕ್ರೂರ ಪ್ರಾಣಿಗಳು ಬಂದರೂ ಹೆದರಬಾರದು. ಆಶೆಗಳು ಬಂದು ಕಾಡುವವು. ಪ್ರಾಣಾಂತಿಕ ವಿಘ್ನಗಳು ಬರುವವು. ಅನೇಕ ಜನ್ಮಗಳ ಅಧ್ಯಾತ್ಮಿಕ ಸಂಸ್ಕಾರದ ದುಡಿಕೆಯಿಂದ ವಿವೇಕವು ಉದಯವಾಗುವದು. ಯಾವ ಪ್ರಾಣಿಗಳ ನಂತರ ಮಾನವನು ಹುಟ್ಟಿರುವನೋ ಆ ಪ್ರಾಣಿಗಳ ಗುಣಧರ್ಮಗಳು ಅವನಲ್ಲಿರುವವು.

ನೀವೆಲ್ಲರೂ ಸಚ್ಚಿದಾನಂದರೂಪರೇ ಇದ್ದೀರಿ. ಇಲ್ಲದಿದ್ದರೆ ನಿಮ್ಮಲ್ಲಿ ಅರಿವು ಎಲ್ಲಿಂದ ಬಂದಿತು? ಇರುವು, ಆನಂದವು ಎಲ್ಲಿಂದ ಬಂದವು? ಆದ್ದರಿಂದ ಸಚ್ಚಿದಾನಂದ ಸ್ವರೂಪರೇ ನೀವು.

ಜ್ಞಾನಾಮೃತವನ್ನು ಕುಡಿಸುವದೇ ನಿಜವಾದ ಪೂಜೆ. ಎಲ್ಲರ ಕಲ್ಯಾಣ ಮಾಡುವದೇ ನಮ್ಮ ಕೆಲಸ. ವಿಷ ಕೊಟ್ಟವರಿಗೂ ನಾವು ಅವರಿಗೆ ಕಲ್ಯಾಣವನ್ನು



ಮಾಡುವವರೇ. ವಿಷಯಗಳನ್ನು ಪ್ರಾಣತೆಗೆದುಕೊಂಡಾದರೂ ಕಸಿದುಕೊಳ್ಳುವರು. ಆದರೆ ಜ್ಞಾನವನ್ನು ಯಾರು ಕಸಿದುಕೊಳ್ಳುವರು? ಯಾರಿಗೂ ಕಸಿದುಕೊಳ್ಳಲು ಸಾಧ್ಯವಿಲ್ಲ.

* * * *

## 26-3-1978 ರ ಸಾಯಂಕಾಲ

ನೀನು ಯಾವದರ ಬೆನ್ನು ಹತ್ತೀದಿ ಅದು ನಿನಗೆ ಸುಖವನ್ನು ಕೊಡುವದೋ ಇಲ್ಲವೋ ಎಂದು ವಿಚಾರಿಸಿ ನೋಡು. ಬೆನ್ನು ಹತ್ತಿದ ವಸ್ತುಗಳಲ್ಲಿ ಸುಖವಿಲ್ಲವೆಂಬುದು ತಿಳಿದಾಗ ಉದಾಸೀನನಾಗಬೇಕು. ಇದು ಅಸಿಧಾರಾವ್ರತದಂತಿದೆ. ಎದ್ದಕೂಡಲೆ ಅಂತರಿಕ ನಿರೀಕ್ಷಣೆ ಪ್ರಾರಂಭವಾಗಬೇಕು. ನಿದ್ರೆ ಹತ್ತುವವರೆಗೆ ಈ ಪ್ರಯತ್ನ ನಡೆಯಬೇಕು. ಗುರುತಿಲ್ಲದ ಹಾಗೆ ಮಾಯೆಯು ಬಂದು ಮುತ್ತುವದು. ಏಕಾಂತದಲ್ಲಿದ್ದರೆ ಈ ನಿರೀಕ್ಷಣೆಯು ಸತತವಾಗಿ ನಡೆಯುವದು. ಹೆಣ್ಣು, ಹೊನ್ನು ಮಣ್ಣು ಮಾಯೆಯಲ್ಲ, ಮನದ ಮುಂದಿನ ಆಸೆಯೇ ಮಾಯೆಯು. ಹೆಣ್ಣು, ಹೊನ್ನು, ಮಣ್ಣು ಇಲ್ಲದ ಸ್ಥಳವೆಲ್ಲಿದೆ? ಎಲ್ಲರೂ ಸತ್ವಪ್ರಧಾನರಿರುವದಿಲ್ಲ. ದಿಟ್ಟಿಸಿ ನೋಡಿದರೆ ಮನೆ ಹೆಂಡತಿ ಕುರುಡಿ ಎಂಬಂತಿದೆ. ವಿಷಯಗಳು ಸುಖವನ್ನು ಕೊಡುವವು ಎಂಬ ತಿಳುವಳಿಕೆಯಿಂದಲೇ ಅವುಗಳ ಮೇಲೆ ರಾಗವಿದೆ. ವಿಷಯಗಳು ದುಃಖ ಕೊಡುವವು ಎಂಬ ತಿಳುವಳಿಕೆಯಿಂದ ದ್ವೇಷ ಉಂಟಾಗುವದು. ಈ ರಾಗದ್ವೇಷಗಳೇ ವೈರಿಗಳು. ಯಾರೇನು ಮಾಡುವರು? ರಾಗ, ದ್ವೇಷಗಳು ಮನಸ್ಸಿನೊಳಗೇ ಇರುವವು. ಅವುಗಳನ್ನು ಅಲ್ಲಿಯೇ ನಾಶಗೊಳಿಸಬೇಕು. ಮಾಯೆಯನ್ನು ಗೆಲ್ಲುವದೆಂದರೆ ಆಸೆಯನ್ನು ಗೆಲ್ಲುವದು. ಆಶೆಯನ್ನು ಗೆಲ್ಲುವದು ಅಭ್ಯಾಸದಲ್ಲಿ ತೊಡಗಿದರೆ ದೃಢವಾಗುವದು. ಆದರೆ ದೃಢವಾಗಬೇಕಾದರೆ ದೀರ್ಘಕಾಲವು ಹಿಡಿಯುವದು. ಜನರೊಡನೆ ಬಾಹ್ಯ ವ್ಯವಹಾರವು ನಡೆದಿರಬೇಕು, ತನ್ನ ಮನಸ್ಸಿನೊಳಗೆ ಸತತವೂ ಸುಖದ ವಿಚಾರವು ನಡೆಯಬೇಕು. ಪ್ರಾಣ-ಅಪಾನಗಳೊಡನೆ ಗುದ್ದಾಡಿದರೆ ರಾಗ-ದ್ವೇಷಗಳು ಹೋಗುವದಿಲ್ಲ. (ತಾತ್ಪೂರ್ತಿಕವಾಗಿ ಮಾತ್ರ ಮನಸ್ಸು ಸ್ಥಗಿತವಾಗುವದು) ಮುದಕವಿಯ ಕೌಸಿದ ಮಲ್ಲಪ್ಪನವರು ಬಟ್ಟೆ ನೇಯುವಾಗ ಸ್ವರೂಪ ಸ್ಥಿತಿಯನ್ನು ಅಭ್ಯಾಸ ಮಾಡುತ್ತಿದ್ದರು.

ನಿಂದೆ, ಸ್ತುತಿಗಳ ಕಡೆಗೆ ಲಕ್ಷಕೊಡಬಾರದು. ಉದಾಸೀನವಾದರೆ ತೀರಿತು.

ಕಟೋಕ್ತಿಗಳು ಮತ್ತು ವ್ಯಂಗ್ಯೋಕ್ತಿಗಳು ಮನಸ್ಸಿನ ಮೇಲೆ ಹೆಚ್ಚು ಪರಿಣಾಮವನ್ನು ಬೀರುವವು.

* * * *

## 26-3-1978 ರ ಸಾಯಂಕಾಲ

ಗ್ರಂಥದ ಅಭ್ಯಾಸ ಬೇರೆ, ಸುಖದ ಅನುಭವ ಹೊಂದುವದು ಬೇರೆ. ಬ್ರಹ್ಮಸೂತ್ರದ ಅರ್ಥವನ್ನು ಅನೇಕ ಆಚಾರ್ಯರು ಅನೇಕ ರೀತಿಯಾಗಿ ವಿವರಿಸಿದ್ದಾರೆ. ಬಾದರಾಯಣನ ಸೂತ್ರವನ್ನು ಕಲಿಯುವದು ಬೇಸರವಾಗುವದಿಲ್ಲವೇ? ಬ್ರಹ್ಮಸೂತ್ರವನ್ನು (ಶಾಬ್ದಿಕ) ಅಭ್ಯಾಸ ಮಾಡುವದು ಬೇಸರವಾಗುವದಿಲ್ಲವೇ? ಅಂದಮೇಲೆ ನಿಜವಾದ ಬ್ರಹ್ಮಸೂತ್ರವೆಲ್ಲಿದೆ? ಅದು ನಮ್ಮೊಳಗೇ ಇದೆ. ಅದನ್ನು ನಮ್ಮೊಳಗೇ ಯುಕ್ತಿಯಿಂದ ಹಿಡಿದುಕೊಳ್ಳಬೇಕು. ಅಂಥ ಅನುಕೂಲ ಯುಕ್ತಿಗಳ ಸಹಾಯವನ್ನು ತೆಗೆದುಕೊಳ್ಳಬೇಕು. ಇದನ್ನು ಬಿಟ್ಟು ಶಬ್ದಜಾಲದೊಳಗೆ ಬಿದ್ದರೆ ಏನು ಪ್ರಯೋಜನ? ಎಲ್ಲೆಡೆಯಲ್ಲಿ ಶಬ್ದಜಾಲದ ಅಭ್ಯಾಸವೇ ನಡೆದಿದೆ. ಆದ್ದರಿಂದ ಬ್ರಹ್ಮನಿಷ್ಠರು ಸಿಗುವದು ಅತಿ ವಿರಳವಾಗಿದೆ. ಬ್ರಹ್ಮಸೂತ್ರವು ಗ್ರಂಥದಲ್ಲಿ ಇಲ್ಲ. ಶಬ್ದವು ಸಹಾಯಕವು. ಆದರೆ ಶಬ್ದವು ಅವಶ್ಯವಿದೆಯೆಂತಲ್ಲ. ಶಬ್ದವಿಲ್ಲದೆ ಅದನ್ನು ನಮ್ಮಲ್ಲಿ ಅನುಭವಿಸಲಿಕ್ಕೆ ಬರುತ್ತದೆ. ಆನಂದ ಸೂತ್ರ ಹತ್ತಿದರೆ ಪ್ರಕಾಶವು ಕಾಣಿಸುವದಿಲ್ಲ, ನಾದವು ಕೇಳುವದಿಲ್ಲ.

ಸ್ವರೂಪಾನಂದವು ಅನೇಕ ಸಲ ಬಂದು ಹಾಯ್ದು ಹೋಗುತ್ತದೆ. ಆದರೆ ಅದರ ಬಗ್ಗೆ ಪರಿಶೀಲನೆಯೇ ನಡೆದಿಲ್ಲ. ಆದ್ದರಿಂದ ಅದು ಇದ್ದೂ ಇಲ್ಲದಂತಾಗಿದೆ. ಮನಸ್ಸಿನ ನಿಶ್ಚಲತ್ವವೇ ಬ್ರಹ್ಮಸೂತ್ರವು. ಅಜ್ಞಾನವಿಲ್ಲದ, ಆನಂದದ ಅರಿವು ಇದ್ದುದು ಬ್ರಹ್ಮಸೂತ್ರವು. ಗ್ರಂಥ ನೋಡುವದಕ್ಕಿಂತ ಪೂರ್ವದಲ್ಲಿ ಆನಂದಾನುಭವವಿರಲಿಲ್ಲವೇ? ಗುರುತಿದ್ದೋ, ಇಲ್ಲದೆಯೋ ಮನಸ್ಸು ನಿಶ್ಚಲವಾದಾಗ ಆನಂದಾನುಭವವಿದೆ. ಆನಂದಾನುಭವವು ತಾಯಿ ತಂದೆಗಳ ಭಾವ ಇರುವದಕ್ಕಿಂತ ಮುಂಚೆಯೇ ಇದೆ. ಅಂದಾಗ ಆನಂದವನ್ನು ಯಾರು ಕಲಿಸಿದರು. ಆನಂದವು ದೇಶ, ಕಾಲಗಳಿಂದ ಪರಿಚ್ಛಿನ್ನವಿಲ್ಲ. ಆ ನಿಶ್ಚಲ ವೃತ್ತಿಯಲ್ಲಿ ಗ್ರಂಥಾದಿಗಳು, ತೋರಿಸುವವರು, ಕಲಿಸುವವರು, ಶಬ್ದಾದಿ ಪ್ರಮಾಣಗಳಿವೆಯೇ? ಯಾವ ಪ್ರಮಾಣವೂ ಇಲ್ಲ. ನಿರುಪಾಧಿಕವಾದ ಸ್ವ ಅನುಭವವೇ ಮುಖ್ಯವಾದುದು. ಉಪಾಧಿಯಿಂದ



ಆನಂದವೆಂಬ ತಪ್ಪು ದೃಢ ತಿಳುವಳಿಕೆ ಇದೆ. ಆದರೆ ಆನಂದವು ಮನಸ್ಸಿನ ನಿಶ್ಚಲತ್ವದಲ್ಲಿ ಇದೆ ಎಂದು ತಿಳಿದರೆ, ನಿಶ್ಚಲತ್ವವನ್ನು ಪಡೆಯಲು ಮನಸ್ಸು ತಯಾರಾಗುವದು. ಇದು ದೃಢವಾಗಬೇಕು. ಇದಕ್ಕೆ ಅವಶ್ಯವಾಗಿ ಗ್ರಂಥವು ಬೇಕೆಂಬುದಿಲ್ಲ. ಆನಂದಸೂತ್ರ ಹತ್ತಿದಾಗ ಯಾವಾಗ ಬೇಕಾದಾಗ ನಿಶ್ಚಲವೃತ್ತಿಯನ್ನು ಸಾಧಿಸಲು ಬರುವದು. ಆಗ ಆಸನ, ಶರೀರ, ಪ್ರಾಣದ ಭಾವವಿಲ್ಲ. ಪ್ರಾಣ-ಅಪಾನ ನಿರೋಧದ ಭಾವವಿಲ್ಲ. ವಿವೇಕವನ್ನು ಸಬಲಗೊಳಿಸಿ ಮನಸ್ಸಿನ ನಿಶ್ಚಲತ್ವದಲ್ಲಿ ಆನಂದವಿದೆಯೆಂಬುದು ದೃಢವಾದರೆ ಅದು ಎಂದಿಗೂ ಚ್ಯುತಿ ಹೊಂದುವದಿಲ್ಲ. ಆದ್ದರಿಂದ ಆ ಯೋಗ, ಈ ಯೋಗವೆಂದು ವ್ಯರ್ಥವಾಗಿ ಕಾಲ ಕಳೆಯಬೇಡ. ಮನಸ್ಸಿನ ನಿಶ್ಚಲವೃತ್ತಿಯಲ್ಲಿ ಯಾವ ಯೋಗವೂ ಇಲ್ಲ. ರಾಜ, ಕರ್ಮ, ಲಯ, ಭಕ್ತಿ, ಜ್ಞಾನಯೋಗಗಳೆಂಬ ಶಬ್ದಜಾಲದ ಗೊಡವೆಯಾತಕೆ? ನಿದ್ರೆ ಬಂದವನಿಗೆ ಯಾವ ಯೋಗವೂ ಇಲ್ಲ. ಅಂದಾಗ ಸ್ವರೂಪಾನಂದದಲ್ಲಿ ಯಾವ ಯೋಗವಿರಬಲ್ಲದು? ಅಂದಾಗ ತನ್ನ ಮನಸ್ಸಿನ ನಿಶ್ಚಲತ್ವದಲ್ಲಿ ಹೇಳುವವರು, ಕೇಳುವವರು ಯಾರಿರುವರು? ಮನಸ್ಸಿನ ನಿಶ್ಚಲವೃತ್ತಿಯಲ್ಲಿ ಆನಂದವಿದೆ, ಎಂಬ ದೃಢನಿರ್ಧಾರವಿದ್ದವನಿಗೆ ಬ್ರಹ್ಮಸೂತ್ರ ಕಲಿಸುತ್ತೇವೆಂದರೆ ಮೂರ್ಖತನವೇ ಸರಿ. ವೃತ್ತಿಯನ್ನು ನಿದ್ರೆಯಲ್ಲಿ ಲಯಪಡಿಸಬೇಕು, ಇಲ್ಲದಿದ್ದರೆ ತುರ್ಯದಲ್ಲಿ ಬಾಧಪಡಿಸಬೇಕು. ಆನಂದವು ಆಗಮಾಪಾಯಿ, ಪರಿಚ್ಛಿನ್ನ, ಔಪಾಧಿಕವಲ್ಲ. ಈ ನಿಶ್ಚಲವೃತ್ತಿಯನ್ನು ಅಭ್ಯಾಸ ಮಾಡಲು ಯಾರ ಕಾಟವೂ ಇಲ್ಲ. ಅನ್ಯ ವಿಚಾರ ಬಂದರೆ ಅದು ನಿಶ್ಚಲತ್ವವಲ್ಲ. ನಿದ್ರೆ ಹತ್ತಿದೆ ಮತ್ತು ಅನ್ಯ ವಿಚಾರ ಬಂದಿದೆ ಎಂದರೆ ಅದು ನಿದ್ರೆಯಲ್ಲ. ಸದ್ಗ್ರಂಥವು ಸದ್ರೂಪವನ್ನೇ ವಿವರಿಸಬೇಕು. ನಿಶ್ಚಲವೃತ್ತಿಯನ್ನು ಪರಿಶೀಲಿಸಿ ಅದರಲ್ಲಿ ದೃಢಪಟ್ಟು ನಿಲ್ಲಬೇಕು. ಆದ್ದರಿಂದ ಬಾಹ್ಯ ಜಡವೃತ್ತಿಯನ್ನು ಬಿಟ್ಟು ಅಂತರಂಗದಲ್ಲಿ ನಿಶ್ಚಲತ್ವವನ್ನು ಪಡೆದಾಗ ಶಾಶ್ವತ ಸುಖವು ಲಭಿಸುವದು. ಶರೀರವೆಲ್ಲಿಯೇ ಇದ್ದರೂ ನಿಶ್ಚಲವೃತ್ತಿಯನ್ನು ಸಾಧಿಸಿದರೆ ತೀರಿತು. ಲೀಲಾಯಮಾನವಾಗಿ ಸದ್ಗ್ರಂಥಗಳನ್ನು ನೋಡಬಹುದು. ಆದ್ದರಿಂದ ನಿಶ್ಚಲತ್ವವನ್ನು ಪರಿಶೀಲಿಸುವದು ಮತ್ತು ಸಾಧಿಸುವದೇ ನಮ್ಮ ಕೆಲಸ. ಉಳಿದುದೆಲ್ಲವೂ ಕೆಲಸಗೇಡಿ ಕೆಲಸ.

* * * *

## 27-3-1978 ರ ಮುಂಜಾನೆ

ಮನಸ್ಸಿಗೆ ಆನಂದ ಬೇಕಾಗಿದೆ. ಜಡದೇಹಕ್ಕೆ ಆನಂದ ಬೇಕಾಗಿಲ್ಲ. ಮನಸ್ಸು ಯಾವದನ್ನು ಹಿಡಿಯುವದೋ ಅದಾಗುವದು. ಏನೂ ಹಿಡಿಯದಿದ್ದರೆ ಸ್ವರೂಪವೇ ಇರುತ್ತದೆ. ಶರೀರವಿದ್ದಲ್ಲೇ ಮನಸ್ಸನ್ನು ಖಾಲಿ ಮಾಡಬೇಕಾಗಿದೆ. ಧ್ಯಾನ ಮಾಡಬೇಕೆನ್ನುವವರು ಏನನ್ನು ಧ್ಯಾನ ಮಾಡುವವರು? ಸ್ವರೂಪವನ್ನು ವಿಷಯೀಕರಿಸಲಿಕ್ಕೆ ಬರುತ್ತದೆಯೇ? ಸಾಧ್ಯವಿಲ್ಲ. ಸಾಪೇಕ್ಷವಾದದ್ದನ್ನು ಇಂದ್ರಿಯಗಳಿಂದ ವಿಷಯೀಕರಿಸಲಿಕ್ಕೆ ಬರುತ್ತದೆ. ಅರುವು, ಇರುವು, ಆನಂದಕ್ಕೆ ಅನ್ಯವಿಲ್ಲ. ಸ್ವರೂಪವನ್ನು ಕಾಣಲಿಕ್ಕೆ ಹೋದದ್ದು ಅದೇ ಆಗಿ ಉಳಿಯುವದು. ಅರುವಿನ ಎದುರಿಗೆ ಅರುವು ಬರಲಾರದು. ತನ್ನ ಹೆಗಲಮೇಲೆ ತಾನೇ ಏರಲಿಕ್ಕೆ ಬರುವದಿಲ್ಲ. ರೂಢಿಯಲ್ಲಿ ಜೀವಚೈತನ್ಯ, ಬ್ರಹ್ಮಚೈತನ್ಯವೆಂದು ಹೇಳುವರು. ಆದರೆ ಚೈತನ್ಯ ಒಂದೇ. ಉಪಾಧಿಯಿಂದ ಭಿನ್ನವೆನ್ನುತ್ತೇವೆ. ಅರುವು ಇರುವು ಏಕವೇ ಇದೆ. ಉಪಾಧಿಯನ್ನು ಖಾಲಿ ಮಾಡುವದೇ ಕೆಲಸ. ಖಾಲಿ ಮಾಡತೀವಿ ಎಂದು ಮನಸ್ಸನ್ನು ಹೆಚ್ಚು ಹೆಚ್ಚು ತುಂಬುತ್ತಲೇ ನಡೆದಿದ್ದೇವೆ. ಮನಸ್ಸನ್ನು ತುಂಬಲು ಸಾಕಷ್ಟು ಸಾಮಗ್ರಿ ಇದೆ. ದರ್ಶನ, ಇತಿಹಾಸ ತುಂಬಿ ತುಳುಕುತ್ತಿದೆ. ಒಂದು ಅನುಮಾನ ಪ್ರಮಾಣವನ್ನು ಅಭ್ಯಾಸ ಮಾಡಲು ನಾಲ್ಕು ವರ್ಷ ಹಿಡಿಯುತ್ತದೆ. ಅನುಮಾನಶಾಸ್ತ್ರ ನ್ಯಾಯಶಾಸ್ತ್ರಗಳು ಅತಿ ಕ್ಲಿಷ್ಟ. ಅದೆಲ್ಲವೂ ಯಾತಕ್ಕೆ ಬೇಕು. ಮುಂದೆ ಕಲಿತದ್ದನ್ನು ಖಾಲಿ ಮಾಡುವದು ಕಠಿಣವಾಗುವದು.

ತತ್ತ್ವ ಬೇರೆ ಜ್ಞಾನ ಬೇರೆ ಎಂಬುದಿಲ್ಲ. ಆದ್ದರಿಂದ ತತ್ತ್ವಜ್ಞಾನ ಶಬ್ದವು ಸಮರ್ಥನೀಯವಲ್ಲ. ಸ್ವರೂಪಕ್ಕೆ ವಿಲಕ್ಷಣವಾಗಿ ನಿಲ್ಲಲಿಕ್ಕೆ ಬರುವದಿಲ್ಲ. ಪಂಚ (ತತ್ತ್ವ)ಭೂತಗಳಿಗೆ ವಿಲಕ್ಷಣವಾಗಿ ನಿಂತು ನೋಡಲು ಬರುವದು "ಅರುವು ಅರುಹಿಸಿಕೊಳ್ಳದು ಎಂದು ತಿಳಿದವನೇ ಜಾಣರ ದೇವ.

ಮನಸ್ಸಿನ ಚಟ ಕಲಿತರೆ ಸಂಕಟ. ಮನಸ್ಸಿನ ಚಟ ಬಿಟ್ಟರೆ ಸುಖ. ಏನಾದರೂ ಮಾಡುವ ಚಟವನ್ನು ಬಿಡಬೇಕು. ಯೋಗ ಮಾಡುವದು (ಜೋಡಿಸುವದೂ) ಒಂದು ಕೆಲಸವೇ. ಜೋಡಿಸಿ ಸುಮ್ಮನಾಗಬೇಕಲ್ಲವೇ? ವಿಭಜನೆ ಮತ್ತು ಸಂಯೋಜನೆ ಮಾಡುವದು ಮುಗಿಯಬೇಕು. ಆರಾಮವಿರುವದು ಕ್ರಿಯೆಯಲ್ಲ. ಅದು ಇರುವಿಕೆ ಮಾತ್ರ. ಆನಂದವನ್ನು ಪಡೆಯಬೇಕೆಂದರೆ, ಆನಂದವನ್ನು ಪಡೆಯಲಿಕ್ಕೆ ಬರುತ್ತದೆಯೇ? ಆನಂದ ಪಡೆಯಬೇಕಾದರೆ ಆನಂದವಾಗಿರುವದೇ ಕೆಲಸ. ಆದ್ದರಿಂದ



ಏನಾದರನ್ನು ಮಾಡಿದರೆ ಏನಾದರೂ ಆಗುತ್ತದೆ. ಏನೂ ಮಾಡದಿದ್ದರೆ ಆನಂದವು ಇದ್ದೇ ಇರುತ್ತದೆ. ಆನಂದಮಯವಾದಾಗ ಅರಿಯುವದು, ಮರೆಯುವದು ಇಲ್ಲ.

ಇದ್ದದ್ದು ಇದ್ದಕ್ಕಿದ್ದಂಗ ಶುದ್ಧವಿದೆ. ಅದನ್ನು ಅಶುದ್ಧ ಮಾಡಿ ಮತ್ತೆ ಶುದ್ಧ ಮಾಡುವದು ಅತಿ ಕಠಿಣವಿದೆ. ಪ್ರಥಮ ಆನಂದದ ಅನುಭೂತಿ ಇತ್ತು. ಅದನ್ನು ಮರೆತು ಅನ್ಯಥಾ ಜ್ಞಾನವನ್ನು ತುಂಬಿಕೊಂಡು ಖಾಲಿ ಮಾಡುವದು ಅತಿ ಕಠಿಣವಿದೆ.

ಸಂಸ್ಥೆ ಕಟ್ಟುವದರಿಂದ ಸುಖ ಸಿಗುತ್ತದೆಯೇ? ಯಾವ ಸಂಸ್ಥೆಯಲ್ಲಿ ಜಗಳವಿಲ್ಲ. ಅಧ್ಯಾತ್ಮ ಸಂಸ್ಥೆ ಕಟ್ಟಿ ರಾಗ-ದ್ವೇಷಾದಿಗಳನ್ನು ಬೆಳೆಸಿಕೊಂಡರೆ ಅಧ್ಯಾತ್ಮವನ್ನು ಸಾಧಿಸಿದಂತಾಯಿತೇ?

ಸಂಗ್ರಹವಿದ್ದಲ್ಲಿ ಗದ್ದಲವೇ ಗದ್ದಲ. ಎಲ್ಲ ಮಠಗಳಲ್ಲಿಯೂ ವಿಷಯಗಳಿಗಾಗಿ ಗದ್ದಲವೇ ಗದ್ದಲ. ಆದರೆ ಮಠವೆಂದರೆ ಶಾಶ್ವತ ಸುಖವು. ಮಠವು ಕಟ್ಟಡವಲ್ಲ. ನಿನ್ನ ಸ್ವರೂಪವೇ ಮಠ. ನಿನ್ನ ಸ್ವರೂಪವನ್ನು ಕಟ್ಟುವವರಾರು? ನಾವೇ ಮಠವೆಂದಾಗ ನಮ್ಮನ್ನು ನಾವು ಕಟ್ಟುತ್ತೇವೆಯೋ? ಸಾಧ್ಯವಿಲ್ಲ. ಕಟ್ಟಡ ಕಟ್ಟಲಿಕ್ಕೆ ಗದ್ದಲವೇ ಗದ್ದಲ.

* * * *

## 27-3-1978 ರ ಸಾಯಂಕಾಲ

ಮಾನಮರ್ಯಾದೆಯನ್ನು ಗಳಿಸಬೇಕಾದರೆ ಶಾರೀರಿಕ ಮತ್ತು ಮಾನಸಿಕ ತ್ರಾಸು (ದುಃಖ) ಆಗುವದು. ಮಾನ ಮರ್ಯಾದೆಯನ್ನು ಉಳಿಸಿಕೊಳ್ಳುವದು ಅತಿ ಕಠಿಣವಿದೆ. ಉಳಿಸಿಕೊಳ್ಳುವದಕ್ಕೆ ವಿರೋಧಗಳೇ ಬಹಳ. ಆದ್ದರಿಂದ ಮಾನ-ಮರ್ಯಾದೆಯನ್ನು ಉಳಿಸಿಕೊಳ್ಳುವದಕ್ಕೆ ವಿರೋಧಿಗಳ ಗುಲಾಮರಾಗಬೇಕಾಗುತ್ತದೆ.

ವಿಷಯೇಂದ್ರಿಯ ಭೋಗದಿಂದ ಅತೃಪ್ತಿ ಹೆಚ್ಚಾಗುವದು. ದುಃಖವು ಹೆಚ್ಚಾಗುವದು. ಮೊದಲಿಗೆ ಸ್ವರೂಪದ ಅಜ್ಞಾನ. ಅಜ್ಞಾನದಿಂದ ಅಹಂಕಾರವು. ಅಹಂಕಾರದಿಂದ ಅನ್ಯಥಾ ಜ್ಞಾನ. ಅನ್ಯಥಾ ಜ್ಞಾನದಿಂದ ರಾಗ-ದ್ವೇಷಗಳು, ರಾಗಕ್ಕೆ ರಾಗ, ದ್ವೇಷಕ್ಕೆ ದ್ವೇಷ ಹೀಗೆ ಬೆಳೆಯುತ್ತಲೇ ಹೋಗುತ್ತದೆ.

ವಿಷಯೇಂದ್ರಿಯ ಭೋಗದಿಂದ ಸುಖವಿಲ್ಲವೆನ್ನುವದು ನಿಶ್ಚಿತವಾದ ಮೇಲೆ ಸ್ವರೂಪದ ಅಭ್ಯಾಸವು ನಡೆಯುವದು.

ಏನು ಬಂದರೂ ಜಿಗಿದು ಹಾರಿದರೆ ತಿಳಿಯುತ್ತದೆ. ಇರುವಿನ ಅಭ್ಯಾಸದ ಬೆನ್ನು ಹತ್ತಿ ಶಾಸ್ತ್ರ ಬರುವವು. ಶಾಸ್ತ್ರಗಳ ಬೆನ್ನು ಹತ್ತಿ ಬ್ರಹ್ಮ ನಿಷ್ಠನು ಹೋಗುವದಿಲ್ಲ. ಚಿಂತೆಯನ್ನು ಕಳೆದುಕೊಳ್ಳಬೇಕಾದರೆ ಎಲ್ಲವನ್ನು ಮೀರಿ ನಿಲ್ಲಬೇಕಾಗುತ್ತದೆ.

* * * *

## 28-3-1978 ರ ಮುಂಜಾನೆ

ಸತ್ಯ ತತ್ತ್ವವು ನಿಷ್ಕ್ರಿಯವು. ನಿರವದ್ಯಂ ನಿಗಮಾತೀತವು. ಆಧೇಯವೆಂಬುದು ಇಲ್ಲವೇ ಇಲ್ಲ. ಆದ್ದರಿಂದ ಸ್ವರೂಪವು ಯಾವದಕ್ಕೂ ಆಧಾರವಲ್ಲ, ಕಾರಣವಲ್ಲ.

ಜಾತ್ರೆಯಿಂದ ಹಣ ಹಾಳಾಗುವದು. ಹಾಳು ಸಂಸ್ಕಾರಗಳು ಬೆಳೆಯುವವು. ಬ್ರಹ್ಮಜಿಜ್ಞಾಸೆಯು ನಡೆಯುವದು ಅತಿ ವಿರಳ. ಅಂಟುರೋಗಗಳು ಹತ್ತುವವು. ರಂಜನೆಯೇ ಬೆಳೆಯುವದು. ಆದ್ದರಿಂದ ಜಾತ್ರೆಯಿಂದ ಏನೂ ಪ್ರಯೋಜನವಿಲ್ಲ.

ಬಡವರೆಂದು ನೀತಿ-ಹೀನರಿಗೆ ಹಣವನ್ನು ಕೊಟ್ಟರೆ ಅವರು ಆ ಹಣವನ್ನು ಬೀಡಿ, ಸಿಗರೇಟುಗಳನ್ನು ಸೇದುವದಕ್ಕಾಗಿ, ಶೆರೆ ಕುಡಿಯುವದಕ್ಕಾಗಿ, ವ್ಯಭಿಚಾರಕ್ಕಾಗಿ ಹೆಚ್ಚಾಗಿ ಉಪಯೋಗಿಸಬಹುದು. ಆದ್ದರಿಂದ ಈ ಎಲ್ಲ ಕೃತಿಗಳಿಗೆಲ್ಲ ನಾವೇ ಹೊಣೆಗಾರರಾಗಬೇಕಾಗುತ್ತದೆ. ಆದ್ದರಿಂದ ಹಣವನ್ನು ಕೊಡುವದಾದರೂ ನೀತಿವಂತರಾದ ಬಡವರಿಗೆ ಕೊಡುವದು ಒಳ್ಳೆಯದು. ನೀರಿನಿಂದ ಕಾಲು ತೊಳೆದು ನೀರು ಕುಡಿದರೆ ಕರಣಪ್ರಸಾದವಲ್ಲ. ರಾಗ-ದ್ವೇಷಗಳಿಂದ ಬಿಡುಗಡೆಯನ್ನು ಹೊಂದುವದೇ ಕರಣ ಪ್ರಸಾದವು. ವಿಷಯಗಳಿಂದ, ಮಾನ-ಮರ್ಯಾದೆಯಿಂದ, ಸುಖವು ಸಿಗುತ್ತದೆಂಬ ತಪ್ಪು ತಿಳುವಳಿಕೆಯು ಜೀವನಿಗೆ ಇದೆ. ಆದ್ದರಿಂದಲೇ ವಿಷಯಗಳು, ಮಾನ-ಮರ್ಯಾದೆ, ಇವುಗಳು ಸಿಗದಿದ್ದರೆ ದ್ವೇಷವು ಉದಯಿಸುವದು. ಆದ್ದರಿಂದ ವಿಷಯ, ಮಾನ ಮರ್ಯಾದೆ, ಶರೀರದ ಮೋಹದಿಂದಲೇ ದುಃಖವು ಎಂಬುದು ತಿಳಿಯಬೇಕು. ವಿಷಯಗಳ, ಮಾನ ಮರ್ಯಾದೆ, ಶರೀರದ ಮೇಲೆ ಇರುವ ಮೋಹವನ್ನು ಕಳೆದುಕೊಂಡಾಗಲೇ ಅಂತಃ ಕರಣ ಶುದ್ಧಿಯಾಗುವದು. ಇದೇ ನಿಜವಾದ ಕರಣ ಪ್ರಸಾದವು.

ವಿಷಯಗಳನ್ನು ಭೋಗಿಸಿದಂತೆ ವಿಷಯಗಳನ್ನು ಭೋಗಿಸುವ ಆಸಕ್ತಿಯು ಹೆಚ್ಚಾಗುತ್ತದೆ. ಬಹಿರಂಗ ವೃತ್ತಿಯಿಂದ ವಾಸನೆಗಳು ಹೆಚ್ಚಾಗುತ್ತವೆ. ಆದ್ದರಿಂದ



ಏಕಾಂತ ಸ್ಥಾನದಲ್ಲಿದ್ದು ಮನಸ್ಸು ನಿಂತಾಗಲೆಲ್ಲಾ ( ಉಣ್ಣುವಾಗ, ಕುಡಿಯುವಾಗ, ಕೈಕಾಲಿಗೆ ಕೂತಾಗ, ಮಲಮೂತ್ರವಿಸರ್ಜನೆ ಮಾಡುವಾಗ) ಆದ ಆನಂದವು ಮಾತ್ರ ತನ್ನ ಸ್ವರೂಪದ್ದು, ಎಂಬುದನ್ನು ನಿರೀಕ್ಷಿಸಿ ತಿಳಿದುಕೊಳ್ಳಬೇಕು. ಈ ತಿಳುವಳಿಕೆ ನೆಲೆಗೊಂಡರೆ ಅನ್ಯ ಆಸಕ್ತಿ ಇರುವದಿಲ್ಲ. ವಿಷಯಗಳ ಕಲ್ಪನೆಯೂ ಕೂಡ ಇರುವದಿಲ್ಲ. ಆಗ ಆನಂದವು ಪ್ರಾಪ್ತವಾಗುವದು. ಆಗ ಶೃತಿ ನಿಮ್ಮ ಅನುಭವದ ನೆರಳಿದ್ದಂತೆ. ಶೃತಿ ಬೇಕಾದರೆ ಬೆನ್ನು ಹತ್ತಿ ಬರಲಿ, ಇಲ್ಲದಿದ್ದರೆ ಬಿಡಲಿ, ನೀನು ಶೃತಿ ಬೆನ್ನು ಹತ್ತಬೇಕಾಗಿಲ್ಲ, ನಿನ್ನ ಅನುಭವದ ಬೆನ್ನು ಹತ್ತು.

* * * *

## 28-3-1978 ರ ಸಾಯಂಕಾಲ

ಅರುವು, ಇರುವು, ಆನಂದವನ್ನು ಯಾರೂ ಕೊಡಲಾರರು ಮತ್ತು ಅದನ್ನು ಯಾರೂ ಕಸಿದುಕೊಳ್ಳಲಾರರು, ಅರಿವು ಇರುವು ಆನಂದವು ಇದ್ದೇ ಇದೆ. ಅರಿವಿಗೆ ಅನ್ಯವಾಗಿ ಅರಿವಿದೆಯೇ? ಇಲ್ಲ. ಅಂದಮೇಲೆ ಯಾರಿಗೆ ಬೇಡಿಕೊಳ್ಳುವಿ? ಆನಂದಕ್ಕೆ ಅನ್ಯವಾಗಿ ಆನಂದವಿದೆಯೇ? ಇಲ್ಲ. ಅಂದಾಗ ಯಾರಿಗೆ ಆನಂದವನ್ನು ಬೇಡುವಿ. ಇರುವು ಬಿಟ್ಟು ಇನ್ನೊಂದಿದೆಯೇ? ಇಲ್ಲ. ಹಾಗಾದರೆ ಯಾರಿಗೆ ಬೇಡಿಕೊಳ್ಳುವದು? ದೇವರೆಂದರೆ ಅರಿವು. ನಿನ್ನ ಬಿಟ್ಟು ಅರಿವಿಲ್ಲ, ಹಾಗಾದರೆ ದೇವರಿಗೆ ಎಲ್ಲಿ ಹೋಗುವಿ? ಅರಿವಿಗೆ ಅರಿವು, ಅರಿವು ಕೊಡೆಂದು ಬೇಡಿಕೊಳ್ಳುವದಿಲ್ಲ. ಅರಿವು ತಾನಲ್ಲ, ಈ ಜಡ ಶರೀರವೇ ತಾನು ಎಂದು ತಿಳಿದು ಅರಿವು ಕೊಡು ಎಂದು ಬೇಡಿಕೊಳ್ಳುತ್ತಿದ್ದಾನೆ. ಬೇಡಿಕೊಳ್ಳುವಾಗಲೂ ಅರಿವಿನಿಂದಲೇ ಬೇಡಿಕೊಳ್ಳುತ್ತಿದ್ದಾನೆ. ಅದು ತಿಳಿಯಲೊಲ್ಲದು ಬೇಡಿಕೊಳ್ಳುವವನಿಗೆ. ಅರಿವು ಪರಿಪೂರ್ಣವಿದೆ. ಅದನ್ನು ಕೂಡಿಸಲಿಕ್ಕೆ, ಕಳೆಯಲಿಕ್ಕೆ, ಗುಣಿಸಲಿಕ್ಕೆ, ಭಾಗಿಸಲಿಕ್ಕೆ, ಎಣಿಸಲಿಕ್ಕೆ ಬರುವದಿಲ್ಲ. ಓಂ ಪೂರ್ಣಮಿದಂ ಪೂರ್ಣಮದಂ- ನಿದ್ರೆ, ಎಚ್ಚರಿಕೆ, ಕನಸು ಮೂರೂ ಮನಸ್ಸಿನ ಅವಸ್ಥೆಗಳು. ಜಡಭಾವ ಅಡಗಿದಾಗ ಸುಖ, ಉದಯವಾದಾಗ ದುಃಖ. ಶರೀರ ತಾನೆಂಬ ಭಾವದ ಉದಯವಾದಾಗಲೇ ದುಃಖದ ಪ್ರಾರಂಭ. ಆದ್ದರಿಂದ ದೇವರು ತಾನಲ್ಲ ಎನ್ನುವದೇ ಮಹಾಪಾಪ. ಜಡ ಶರೀರ ತಾನೆಂದು ತಿಳಿದುದೇ ಮಹಾಪಾಪ. ಎಲ್ಲ ಪಾಪಗಳು ಮೂಲ ಪಾಪದ ಮರಿಗಳು. ಮೂಲ ಪಾಪ ತಾನು ಜಡವೆಂದು

ತಿಳಿದುಕೊಂಡದ್ದೇ. ಯಾರಾದರೂ ಒಪ್ಪಲಿ ಅಥವಾ ಒಪ್ಪದೇ ಇರಲಿ ಇರುವು ಅರಿವು ಆನಂದವು ಇದ್ದೇ ಇದೆ. ಒಪ್ಪುವದು ಒಪ್ಪದೇ ಇರುವದು ಮನಸ್ಸಿನ ಕೆಲಸ. ದೇಹವು ತಾನೆಂಬ ತಿಳುವಳಿಕೆಯು ಮಹಾಪಾಪ ಎಂಬುದು ಸ್ವತಃ ಅನುಭವಕ್ಕೆ ಬರಬೇಕು. ಆಮೇಲೆ ಆ ಪಾಪವನ್ನು ದೂರಮಾಡಿಕೊಳ್ಳಲು ಬ್ರಹ್ಮನಿಷ್ಠರಿಗೆ ಕೇಳಿದಾಗ ಅವರು ಹೇಳುವರು,

ನಿದ್ರೆಯು ಹತ್ತದಿದ್ದರೆ ಬುದ್ಧಿಗೆ ಹುಚ್ಚು ಹಿಡಿಯುತ್ತದೆ. ಔಷಧ ಕೊಡಿಸಿದರೆ ಹುಚ್ಚು ಕಡಿಮೆಯಾಗಬಹುದು, ಇಲ್ಲದಿದ್ದರೆ ದೇಹವೇ ಹೋಗಬಹುದು,

* * * *

## 29-3-1978 ರ ಮುಂಜಾನೆ

ಮರವೆಯ ಮೂಲಕ ಹೊಂದಿದ ಸುಖವು ಕ್ಷಣಿಕವು (ನಿದ್ರೆಯದು) ಅರಿವಿನ ಮೂಲಕ ಹೊಂದಿದ ಸುಖವು ಶಾಶ್ವತವು (ತುರ್ಯದ್ದು)

ಒಂದು ಕೋಟಿ ಬ್ರಹ್ಮನಿಷ್ಠರು ಬಂದರೂ ಜಗತ್ತು ಹೀಗೆಯೇ ಇರುತ್ತದೆ. (ದುಃಖಮಯವೇ) ಜಗತ್ತಿನವರಿಗೆಲ್ಲ ನಿದ್ರೆ ಮಾಡಲಿಕ್ಕೆ ಹಚ್ಚಿ ತಾನು ನಿದ್ರೆ ಮಾಡುವದು ಸಾಧ್ಯವಿದೆಯೇ? ಸಾಧ್ಯವಿಲ್ಲ. ಆದ್ದರಿಂದ ಮತ್ತೊಬ್ಬರ ಗೊಡವೆಗೆ ಹೋಗದೆ ತಮ್ಮಷ್ಟಕ್ಕೇ ತಾವು ತಮ್ಮ ಸ್ವರೂಪವನ್ನು ಹೊಂದಬೇಕು. ಇದೇ ಸುಖವನ್ನು ಹೊಂದುವ ದಾರಿ.

ಹಿಂದಿನ ಜನ್ಮದ ಅಧ್ಯಾತ್ಮ ವಿಚಾರದ ದುಡಿಕೆ, ಈಗಿನ ಸಂಗ ಮತ್ತು ಪ್ರಯತ್ನದಿಂದ (ಇವು ಮೂರೂ ಇದ್ದರೆ) ಅಧ್ಯಾತ್ಮವು ಸಾಧಿಸುವದು. ಇಲ್ಲದಿದ್ದರೆ ಬಹು ಕಠಿಣ. ಈಗಿನ ದುಡಿಕೆ, ಸಂಗ ಬೇಕು.

ಎಲ್ಲ ದುಃಖ ದುಮ್ಮಾನಗಳು ಕನಸಿನೊಳಗಿನವುಗಳು. ನೆನಸು ಕನಸಾದಾಗ ಮಾತ್ರ ದುಃಖವು ನಾಶವಾಗುವದು. ಒಮ್ಮೆಲೇ ಇದು ಸಾಧ್ಯವಾಗುವದಿಲ್ಲ. ಕ್ರಮೇಣ ಅಧ್ಯಾತ್ಮಿಕ ಉನ್ನತಿಯನ್ನು ಪಡೆಯುತ್ತ ಹೋಗಬೇಕು. ತನ್ನ ಸ್ವರೂಪ ಪ್ರವೇಶ ಮಾಡುವದೇ ಗುಹಾಪ್ರವೇಶವು. "ಧರ್ಮಸ್ಯ ತತ್ತ್ವಮ್ ನಿಹಿತಂ ಗುಹಾಯಾಂ" ಎಂದು ಶಂಕರಾಚಾರ್ಯರು ಹೇಳಿದ್ದಾರೆ.

ಎಲ್ಲ ವಿದ್ಯೆಗಳಲ್ಲಿ ಅಧ್ಯಾತ್ಮ ವಿದ್ಯೆಯು ಶ್ರೇಷ್ಠವು. ಆದ್ದರಿಂದ ಅಧ್ಯಾತ್ಮ ವಿದ್ಯೆಯ ದಾನವೇ ಶ್ರೇಷ್ಠ ದಾನವು. ಜ್ಞಾನಿಗೆ ಕರ್ತವ್ಯವೆಂಬುದು ಇಲ್ಲ.



"ಜ್ಞಾನಾಮೃತೇನ ತೃಪ್ತಸ್ಯ..... ಯೋಗಿನಃ ಕರ್ತವ್ಯಂ ನ ವಿದ್ಯತೆ"

* * * *

## 29-3-1978 ರ ಸಂಜೆ

ಎಲ್ಲವೂ ಸ್ವರೂಪದ ಆಧಾರದ ಮೇಲೆ ಅಜ್ಞಾನಪೂರ್ವಕವಾಗಿ ತೋರಿದ ತೋರಿಕೆಯು. ನಿದ್ರೆಯ ಸುಂದಿನಲ್ಲಿ ಕಾರ್ಯಕಾರಣ, ದೇಶ, ಕಾಲ, ವ್ಯಕ್ತಿ ಭಾವವಿಲ್ಲ. ಬ್ರಹ್ಮಸೂತ್ರ ಹತ್ತುವ ಕಾಲಕ್ಕೆ ಕಾರ್ಯ-ಕಾರಣ, ದೇಶ, ಕಾಲ, ವ್ಯಕ್ತಿ ಭಾವವಿರುವದಿಲ್ಲ. ಆದರೆ ಸ್ವರೂಪಭಾವವಿರುವದು. ಮಾತಾಡಿದ್ದೆಲ್ಲವನ್ನೂ, ಓದಿದ್ದೆಲ್ಲವನ್ನೂ ಅನುಭವಕ್ಕೆ ತೆಗೆದುಕೊಳ್ಳಬೇಕು. ಯಾವಾಗಲೂ ಸುಖದ ವಿಚಾರವೇ ನಡೆಯಬೇಕು. ಅದನ್ನು ಅನುಭವಿಸಬೇಕು.

ಕಡಿದು, ಬಡಿದು, ವಿಷ ಹಾಕಿ ಇನ್ನೊಬ್ಬರ ವಿಷಯಗಳನ್ನು ಭೋಗಿಸುವದೇ ರಾಕ್ಷಸಿ ವೃತ್ತಿಯು, ವಿಷಯೇಂದ್ರಿಯ ಭೋಗ ವೃತ್ತಿಯೇ ಪಶುವೃತ್ತಿಯು, ತಾನೂ ಬಾಳಬೇಕು (ಭೋಗಿಸಬೇಕು) ಉಳಿದ ಜೀವಿಗಳೂ ಬಾಳಬೇಕು (ಭೋಗಿಸಬೇಕು) ಎಂಬ ವೃತ್ತಿಯೇ ಮಾನವ ವೃತ್ತಿಯು. ಮಲಿನ ಸಾತ್ವಿಕ ಸ್ವರ್ಗ ಭೋಗವೇ ದೇವವೃತ್ತಿಯು. ಇಹಲೋಕ-ಪರಲೋಕ ಭೋಗದ ವೈರಾಗ್ಯವೇ ದೇವಾತೀತ ವೃತ್ತಿಯು, (ಶುದ್ಧ ಸತ್ವಪ್ರಧಾನ ವೃತ್ತಿಯು) ಇದೇ ಮುಮುಕ್ಷುತ್ವವು. ಇದು ಈಶ್ವರ ಸಮಾನ ಸ್ಥಿತಿಯು. ಇಂಥವರ ಕಾಲಕೆಳಗೆ ಎಲ್ಲ ಸಿದ್ಧಿಗಳು ಬಿದ್ದು ಉರುಳಾಡುತ್ತಿರುವವು. ಇವುಗಳಿಗೆ ಅವರು ಕಣ್ಣು ತೆರೆದು ನೋಡುವದಿಲ್ಲ. ಇಂಥವರಿಗೆ ತುರ್ಯ ಪದವು ಸಾಧಿಸುವದು. ಸಿದ್ಧಿಗಳೆಲ್ಲ ದಾರಿಯ ಮೇಲಿನ ಕೆಲಸಗಳು. ಅವರ ಕರ್ಮಧರ್ಮದ ಪ್ರಕಾರ ಜೀವಿಗಳ ಪೀಡೆಗಳು ಪರಿಹಾರವಾಗುತ್ತವೆ. ಸಿದ್ಧಿಗಳು ಕ್ಷಣಿಕವಾದವು ಮತ್ತು ಕರ್ಮಜನ್ಯವು. ಆತ್ಮಜ್ಞಾನದ ಮೂಲಕ ಇರುವವುಗಳು, ಶಾಶ್ವತ ಅವ್ಯಯವಾದವುಗಳು. ಪಾರಮಾರ್ಥಿಕ ಸತ್ತೆಯಿಂದ ವಿಘ್ನಗಳು ಪರಿಹಾರವಾಗುವವು ಎಂಬುದನ್ನು ತಿಳಿದುಕೊಂಡು ಪಾರಮಾರ್ಥಕ್ಕೆ ಹೊಂದಿಕೊಳ್ಳಬೇಕು.

* * * *

## 31-3-1978 ರ ಮುಂಜಾನೆ

ಜೀವಿಗಳು ಸುಖದ ದಾರಿಯನ್ನು ಹಿಡಿಯಲಿ ಎಂದು (ಅದೂ ಜೀವಿಗಳ ಪುಣ್ಯವಿದ್ದರೆ) ಕೆಲವೊಂದು ಸಲ ಸಿಟ್ಟು ಮಾಡುವರು. ಪುಣ್ಯದ ಜೋರು ಇಲ್ಲದಿದ್ದರೆ ಬ್ರಹ್ಮನಿಷ್ಠರಿಂದ ಬುದ್ಧಿಹೇಳಿಸಿಕೊಳ್ಳುವದು ತಪ್ಪಿ ಹೋಗುತ್ತದೆ.

ಸ್ವರೂಪ ಸಾಧಿಸುವ ಕಾಲಕ್ಕೆ ಏನೇ ವಿಘ್ನ ಬರಲಿ ಅವುಗಳನ್ನು ಕಿತ್ತೆಸೆಯಬೇಕು. ವಿಷಯಗಳ ಕಡೆಗೆ ಲಕ್ಷ್ಯಕೊಟ್ಟರೆ ಸಮಾಧಿ ಹತ್ತುವದೇ? ಸಾಧ್ಯವೇ ಇಲ್ಲ. ಭಯ, ಕ್ರೋಧ, ರಾಗ, ದ್ವೇಷ ಎಳ್ಳಷ್ಟೂ ಇಲ್ಲ. ಯಾವಾಗಲೂ ಸ್ವರೂಪ ತತ್ಪರವಾಗುವ ಸ್ಥಿತಿ ಬಂದರೆ ಭಿಕ್ಷಾನ್ನವನ್ನು ಸೇವಿಸಲು ಅಡ್ಡಿಯಲ್ಲ. ದುಡಿಯುತ್ತ (ಶರೀರ ಚರಿತಾರ್ಥವಾಗಿ) ಅಧ್ಯಾತ್ಮ ಚಿಂತನೆ ಮಾಡುತ್ತ ಸಾಧನೆ ಮಾಡಬೇಕು. ಪ್ರಾಣ ಹೋದರೂ ಸಮಾಧಿಯನ್ನು ಸಾಧಿಸಿಯೇ ತೀರುತ್ತೇನೆ ಎಂಬ ಉತ್ಕಟ ಇಚ್ಛೆಯಿದ್ದರೆ ಸಮಾಧಿಯು ಸಾಧಿಸುವದು. ಏನೇ ಆದರೂ ನಮ್ಮ ಆನಂದಸೂತ್ರವನ್ನು ಬಿಡಬಾರದು.

* * * *

## 31-3-1978 ರ ಸಂಜೆ

ಸಚ್ಚಿದಾನಂದ ಸ್ವರೂಪವೇ ಸ್ವಧರ್ಮ. ಇದೇ ಸುಖವು. ಇಂದ್ರಿಯಗಳ ಧರ್ಮವೇ ಪರಧರ್ಮವು, ಇದೇ ದುಃಖವು. ಸ್ವಧರ್ಮವೇ ಶ್ರೇಯಸ್ಸಿನ ಮಾರ್ಗವು. (ಸಚ್ಚಿದಾನಂದ ಸ್ವರೂಪಧರ್ಮವು). ಪರಧರ್ಮವೇ (ಇಂದ್ರಿಯಗಳ ಧರ್ಮವೇ) ಪ್ರೇಯಸ್ಸಿನ ಮಾರ್ಗವು.

ಒಮ್ಮೆ ಜ್ಞಾನವಾದರೆ ತೀರಿತು. ಪುನಃ ಪುನಃ ಸಂಸಾರವಿಲ್ಲ ಎಂದು ಗಟ್ಟಿಗೊಳಿಸಬೇಕಾಗಿಲ್ಲ. ಒಮ್ಮೆ ಸಂಸಾರವಿಲ್ಲವೆಂದರೆ ತಿಳಿಯಿತು. ಇದು ತುರ್ಯದಲ್ಲಿ ತಿಳಿಯುವದು. ತುರ್ಯದಲ್ಲಿ ಸಾಕ್ಷಿ ಸ್ಥಿತಿ ಥಕ್ಕನೆ ಹೊಳೆದರೆ ತೀರಿತು. ಈ ಅನುಭವವು ಎಂದಿಗೂ ಮಾಜುವದಿಲ್ಲ.

ಶರೀರ, ಮನಸ್ಸು, ಅಹಂಕಾರದ ವಿಕಾರಗಳು ನಿನ್ನನ್ನು ಬಾಧಿಸವು, ನಿನ್ನ ನಿಜದಲ್ಲಿ ಸರಿಬೆರಕಿ ಆಗಲಾರವು.

ವೇದಾಂತವು ಸಿದ್ಧಾಂತ ಪ್ರಕ್ರಿಯೆಯಲ್ಲ. ವೇದಾಂತವು ಅನುಭವದ ಶಾಸ್ತ್ರ. ಎಲ್ಲ ಶಾಸ್ತ್ರಗಳು ನಿಜಾನುಭವಿಯ ಬೆನ್ನು ಹತ್ತುತ್ತವೆ. ಅವನು ತನ್ನ ಅನುಭವವನ್ನು ಹೊಂದುವನು. ಪ್ರಕ್ರಿಯೆ ಗ್ರಂಥಗಳು ಅವನ ಬೆನ್ನಟ್ಟಿ ಬರಬಹುದು ಅಥವಾ



ಬಿಡಬಹುದು. ಮೋಕ್ಷವನ್ನು ಹೊಂದುವದಕ್ಕೆ ಯಾವ ಶಾಸ್ತ್ರವೂ ಬೇಕಾಗಿಲ್ಲ. ಅನೇಕ ಆಚಾರ್ಯರು ಅನೇಕ ರೀತಿಯಾಗಿ ಶಾಸ್ತ್ರದ ಅರ್ಥವನ್ನು ಮಾಡುವರು. ಸಂಶಯ ವಿದ್ದವರು ನಾಶ ಹೊಂದುವರು.

ಜನರು ತನಗೆ ಭಲೆ ಅನ್ನಬೇಕೆಂದು ಜೀವಿಸಲು ಪ್ರಯತ್ನಿಸಿದರೆ, ವಿಷಯಗಳನ್ನು ಕೊಟ್ಟರೆ ಜನರು ಹೊಗಳುವರು. ವಿಷಯಗಳನ್ನು ಕೊಡದಿದ್ದರೆ ಅವರು ತೆಗಳುವರು. ಜನರೇನು ಒಮ್ಮೆ ಭಲೆ ಎನ್ನಬಹುದು, ಮತ್ತೊಮ್ಮೆ ಹಲೆ ಎನ್ನಬಹುದು. ಜನರು ಭಲೆ ಎನ್ನುವದರಿಂದ ತನ್ನ ಮನಸ್ಸಿನ ಸಂಕಟವು ಕಳೆಯುವದೇ? ಸಾಧ್ಯವಿಲ್ಲ. ಆದ್ದರಿಂದ ಜನಕಂಜಿ ನಡೆಯದೆ ಮನಕಂಜಿ ನಡೆ, ಜನರೇನು ಬಲ್ಲರು ಮನ ಮಾಡುವ ಕಳ್ಳತನ? ನಮಗೆ ಸುಖ ಬೇಕಾಗಿದೆ. ಸುಖವನ್ನು ಹೊಂದಿದರೆ ತೀರಿತು. ಜನರು ಅಪವಾದ ಕೊಡಬಹುದು ಅಥವಾ ಹೆದರಿಸಬಹುದು, ಅದಕ್ಕೆ ಹೆದರಬಾರದು. ವಿಷಯ ವಾಸನಾ ರೂಪಿ ತೆರೆಗಳೇ ಸಂಕಟ ಕೊಡುವವು. ಅರುವಿನ ಆನಂದದಲ್ಲಿ ನಿಂತು ನೋಡಿದಾಗ (ತುರ್ಯವನ್ನು ಹೊಂದಿದಾಗ) ತನಗೆ ಸಂಕಟವಿಲ್ಲ ಎಂಬುದು ತಿಳಿಯುವದು.

ಮಕ್ಕಳಿಗೆ ವಿಷಯ ಭೋಗವನ್ನು ಕಲಿಸಬಾರದು. ಶಾಶ್ವತ ಸುಖವನ್ನು ಕೊಡುವ ಆತ್ಮವಿದ್ಯೆಯನ್ನು ಕಲಿಸಬೇಕು. ಲಕ್ಷ್ಯವು ಯಾವಾಗಲೂ ಆತ್ಮಚಿಂತನೆಯಲ್ಲಿಯೇ ಇರಬೇಕು, ವಿಷಯಗಳ ಕಡೆಗೆ ಮನಸ್ಸು ಎಳ್ಳಷ್ಟೂ ಹರಿಯಬಾರದು. ಏಕಾಂತಸ್ಥಳದಲ್ಲಿ ಸ್ವರೂಪಚಿಂತನೆಯನ್ನು ಮಾಡುವದು ಒಳ್ಳೆಯದು.

ಅನಾಥರಿಗೆ, ಬಡವರಿಗೆ (ಸಂಪನ್ನರಾದವರಿಗೆ) ಹೆಚ್ಚಿಗಿದ್ದ ದ್ರವ್ಯವನ್ನು ಉಪಯೋಗಿಸಿರಿ. ಮನಸ್ಸಿನ ಸಂಕಟವನ್ನು ಕಳೆಯುವಂಥ ಕೆಲವು ವಿವೇಕದ ಮಾತುಗಳನ್ನು ಜನರಿಗೆ ಬೋಧಿಸಿ. ಇದೇ ಈಶ್ವರ ಪೂಜೆ.

ಶಾಸ್ತ್ರ ಶ್ರವಣಕ್ಕೆ ಬರುವವರು ಅತಿ ಕಡಿಮೆ. ಶ್ರವಣಕ್ಕೆ ಬಂದವರಲ್ಲಿ ಅಭ್ಯಾಸದಲ್ಲಿ ತೊಡಗುವವರು ಇನ್ನೂ ಕಡಿಮೆ. ಅಭ್ಯಾಸದಲ್ಲಿ ತೊಡಗಿದವರಲ್ಲಿ ಸ್ವರೂಪ ಸ್ಥಿತಿಯನ್ನು ಹೊಂದಿದವರು ಎಲ್ಲಿಯೋ ಒಬ್ಬರು.

ಬೇಕಾದಷ್ಟು ಕಾಮಾದಿಗಳು ಇದ್ದರೂ ವಿಚಾರದಿಂದ ಸಂಯಮವು ಸಾಧ್ಯ. ಪಾರಮಾರ್ಥಿಕ ವಿಚಾರದಿಂದ ಸುಖವು ತನ್ನ ಹೊರಗೆ ಇಲ್ಲ, ತನ್ನೊಳಗೇ ಇದೆ ಎಂಬ ತಿಳುವಳಿಕೆಯು ನೆಲೆಗೊಂಡಾಗ ಸಂಪೂರ್ಣ ಸಂಯಮವು ಸಾಧ್ಯ.

ಕ್ರಿಯೆ ಘಟ್ಟಿ ಎಂದರೆ ನಡತೆ ಘಟ್ಟಿ. ಬೂದಿ ನೀರು ಕಲಿಸಿ ಮಾಡಿದ್ದು ಕ್ರಿಯೆ ಘಟ್ಟಿಯಲ್ಲ.

ಜಂಘಾ ಎಂದರೆ ತೊಡೆ, ಜಂಘಾ ಬಂಧನವೆಂದರೆ ತೊಡೆ ಬಂಧುರ ವಾಗಿರುವದು (ಬ್ರಹ್ಮಚರ್ಯವನ್ನು ಪಾಲಿಸುವದು) ಬ್ರಹ್ಮನ ಕಡೆಗೆ ಮನಸ್ಸು ಹರಿಯುವದೇ ಬ್ರಹ್ಮಚರ್ಯ. ಆದ್ದರಿಂದಲೇ ನುಡಿ, ನಡೆ, ತೊಡೆ, ಬಂಧುರವಾಗಿದ್ದರೆ ಇದೇ ಜನ್ಮವೇ ಕಡೆ ಎಂದು ಹೇಳಿದ್ದಾಗಿದೆ. ಮದುವೆಯಾಗದಿದ್ದರೆ ಮಾತ್ರ ಬ್ರಹ್ಮಚರ್ಯವಲ್ಲ. ಮದುವೆಯಾದರೂ ಹೆಂಡತಿಯೊಡನೆ ಮಿತಿಯಾಗಿ ಭೋಗಿಸಬೇಕು. (ನುತಬ್ರಹ್ಮಚರ್ಯ) ಪುರುಷನು ಸಾವಿರ ಸ್ತ್ರೀಯರ ಮಧ್ಯದಲ್ಲಿದ್ದರೂ, ಸ್ತ್ರೀಯು ಸಾವಿರ ಪುರುಷರ ಮಧ್ಯದಲ್ಲಿದ್ದರೂ ಮನಸ್ಸು ಎಳ್ಳಷ್ಟೂ ವಿಕಾರಹೊಂದಬಾರದು.

ಜ್ಞಾನ ಕಿಡಿಯು ಅಜ್ಞಾನವನ್ನು ನಾಶಮಾಡುವದು. ವಿವೇಕೋದಯವಾಗುತ್ತಲೇ ಸರ್ವ ದುಃಖಗಳು ನಾಶವಾಗುವವು.

ಯಾರಾದರೂ ಪೀಡೆ ಕೊಟ್ಟರೆ ಮನಸ್ಸಿನ ಸಮತೆಯನ್ನು ಕಳೆದುಕೊಳ್ಳಬಾರದು. ಕಾಲ ಗತಿಸಿದ ಮೇಲೆ ಎಲ್ಲವೂ ಒಂದು ಸೀಮಿತಕ್ಕೆ ಬರುವದು. ಕ್ರೋಧವನ್ನು ಹೊಂದುವದೇ ಬೇಕಾಗಿಲ್ಲ. ತಾಳ್ಮೆಯನ್ನು ಹೊಂದಿ ಧೀರನಾಗು. "ಮಾತೃವತ್ ಪರದಾರೇಶು............ಪಂಡಿತಃ"

ವಿಚಾರವಿಲ್ಲದಿದ್ದರೆ ಬಾಯಿಗೆ ಬಂದಂತೆ ಮಾತನಾಡುವ ಸ್ಥಿತಿಯು ಒದಗುತ್ತದೆ. ಕೈಗೆ ಬಂದಂತೆ ಮಾಡುವದಾಗುತ್ತದೆ. ಇದರಿಂದ ನಂತರ ಪ್ರಾಯಶ್ಚಿತ್ತವಾಗುತ್ತದೆ. ಆದರೆ ಇದರಿಂದ ಪ್ರಯೋಜನವೇನು?

ವಿಹಿತವಲ್ಲದ್ದನ್ನು ಸೇರದಿರುವದು ವೈರಾಗ್ಯದ ಒಂದು ಮೆಟ್ಟಲು. ಪರಮವೈರಾಗ್ಯವಿರುವಲ್ಲಿ ಪರಮಶಾಂತಿ ಇರುವದು.

ಎಷ್ಟೇ ಪ್ರಾಣಸಂಕಟ ಬಂದರೂ ಇನ್ನೊಬ್ಬರ ಧನದ ಮೇಲೆ ಆಶೆ ಮಾಡದಿರುವದೇ ಆಸ್ತೇಯವು. ಸಿದ್ಧಾರೂಢರು ಜಠರಾಗ್ನಿಯನ್ನು ಶಾಂತ ಮಾಡುವದರ ಸಲುವಾಗಿ ಮಣ್ಣು ನೀರು ಕಲಿಸಿ ಕುಡಿದರು.

ವಿಹಿತ ರೀತಿಯಿಂದ ಹಣವನ್ನು ಗಳಿಸುವದು ಕಷ್ಟ. ಗಳಿಸಿದ ಹಣವನ್ನು ಸಂರಕ್ಷಿಸುವದು ಕೂಡ ಅತಿ ಕಠಿಣ. ಹಣವಿದ್ದವನನ್ನು ಮೊದಲು ಕೊಂದು (ಅವನು ಉಳಿದರೆ ಫಿರ್ಯಾದಿ ಕೊಡುವನೆಂದು) ನಂತರ ಹಣವನ್ನು ತೆಗೆದುಕೊಂಡು



ಹೋಗುವರು. ಅಂದಮೇಲೆ ನಿಷಿದ್ಧ ವ್ಯವಹಾರದಿಂದ ಹಣವನ್ನು ಗಳಿಸಿದರೆ ಕೊಲ್ಲದೆ ಬಿಡುವರೇ? ಈ ರೀತಿಯಿಂದ ಹಣ ಗಳಿಸುವದಕ್ಕಾಗಿ ಪರರಿಗೆ ಪೀಡೆ ಕೊಟ್ಟು ಹೀನ ಜನ್ಮಕ್ಕೆ ಹೋಗಬೇಕಾಗುತ್ತದೆ. ಆದ್ದರಿಂದಲೇ "ಕಡುಲೋಭದಿಂ ದುರ್ಗುಣಮನ್ನ ಮುಂಟೆ" ಎಂದು ಮಹಾತ್ಮರು ಹೇಳಿದ್ದಾಗಿದೆ.

ಆಸೆಗೆ ಸೋಲದವನೇ ನಿಜವಾದ ಧೀರನು. ಆದರೆ ಎಲ್ಲರೂ ಆಶೆಗಳ ಗುಲಾಮರೇ ಆಗಿದ್ದಾರೆ. ತನ್ನ ಅರಿವಿನ ಗುಲಾಮನಾದಾಗ ಆಸೆಯನ್ನು ಜಯಿಸಲು ಬರುತ್ತದೆ.

ಪ್ರತಿಯೊಬ್ಬರೂ ತಮ್ಮ ತಮ್ಮ ಮನಸ್ಸನ್ನು ಆನಂದಮಯ ಮಾಡುವದೇ ಜಗತ್ತನ್ನು ಸುಧಾರಿಸುವ ದಾರಿ. ಜಗತ್ತು ಮನಸ್ಸಿನಲ್ಲಿದೆ. ಮನಸ್ಸು ಸ್ವರೂಪದೊಡನೆ ಒಂದಾದಾಗ, ಜಗತ್ತು ಸ್ವರೂಪವಾದಂತೆಯೇ, ಅಂದರೆ ಜಗತ್ತು ಸುಧಾರಿಸಿದಂತಾಯಿತು. ಇದನ್ನು ಬಿಟ್ಟು ಬಾಹ್ಯ ಜಗತ್ತನ್ನು ಸುಧಾರಿಸಲಿಕ್ಕೆ ಹೋದರೆ ಭಾರಿ ವಿಘ್ನಗಳು ಬರುವವು. ಜಗತ್ತನ್ನು ಸುಧಾರಿಸಲು ಪ್ರಯತ್ನಿಸಿದರೂ ಅದನ್ನು ಸುಧಾರಿಸುವದು ಸಾಧ್ಯವಿಲ್ಲ. ತಮ್ಮ ಸಂಕಟವನ್ನಂತೂ ಕಳೆದುಕೊಳ್ಳಲು ಸಾಧ್ಯವಾಗುವದಿಲ್ಲ.

ಸೂರ್ಯನ ಪ್ರಕಾಶದಿಂದ ಮಾನವನ ಚರ್ಮವು ಹೊಳೆದು ಸುಂದರ ಕಾಣುವದು. ಸೂರ್ಯಪ್ರಕಾಶವಿಲ್ಲದಿದ್ದರೆ ಸುಂದರತೆ ಎಲ್ಲಿಯದು?

ಶ್ರದ್ಧೆಯಿಂದ ಪರೋಕ್ಷ ಜ್ಞಾನವಾಗುವದು. ಮುಂದೆ ಸಾಧನೆಯಿಂದ ಅಪರೋಕ್ಷಜ್ಞಾನವಾಗುವದು. ಹತ್ತನೆಯವನು ಸತ್ತಿಲ್ಲ ಇದ್ದಾನೆ ಎಂದು ಹೇಳಿದಾಗ, ಇದರ ನಂಬಿಕೆಯಿಂದ ಸಂತೋಷವಾಗುವದು. (ಪರೋಕ್ಷ ಜ್ಞಾನ) ನಂತರ ತಾನೇ ಹತ್ತನೆಯವನು ಎಂಬುದನ್ನು ಕಂಡುಕೊಳ್ಳುವದೇ ಅಪರೋಕ್ಷಜ್ಞಾನವೆನಿಸುವದು. "ಸಚ್ಚಿದಾನಂದ ಸ್ವರೂಪನೇ ನೀನು" ಎಂಬ ಆಪ್ತವಾಕ್ಯದಲ್ಲಿ ನಂಬಿಗೆ ಇರುವದೇ ಪರೋಕ್ಷ ಜ್ಞಾನವು. ಮುಂದೆ ತಾನೇ ಬ್ರಹ್ಮನು ಎಂಬುದನ್ನು ಸಾಧನೆಯಿಂದ ಸಾಕ್ಷಾತ್ಕರಿಸಿಕೊಳ್ಳುವದೇ ಅಪರೋಕ್ಷ ಜ್ಞಾನವೆನಿಸುವದು. ಪುಣ್ಯದ ಜೋರು ಇದ್ದರೆ ಆಪ್ತ ವಾಕ್ಯದಲ್ಲಿ ನಂಬಿಗೆ ಮೂಡುವದು.

ನಿದ್ರೆಯ ಸುದ್ದಿ ಹೇಳುವದರಿಂದ, ಕೇಳುವದರಿಂದ ಬರೆಯುವದರಿಂದ ಏನೂ ಪ್ರಯೋಜನವಿಲ್ಲ. ನಿದ್ರೆ ಮಾಡಿದಾಗಲೇ ಆನಂದ. ಅದರಂತೆ ಸ್ವರೂಪಾವ ಸ್ಥಿತಿಯ ಬಗ್ಗೆ ಹೇಳುವದರಿಂದಾಗಲೀ, ಕೇಳುವದರಿಂದಾಗಲೀ, ಬರೆಯುವದರಿಂದಾಗಲೀ ಏನೂ

ಪ್ರಯೋಜನವಿಲ್ಲ. ಸ್ವರೂಪಾವಸ್ಥಿತಿಯನ್ನು ಹೊಂದಿದಾಗಲೇ ಸ್ವರೂಪದ ಆನಂದವು ಅನುಭವಕ್ಕೆ ಬರುವದು.

ಸ್ವರೂಪವೆಂದರೂ ಅದಕ್ಕೆ ರೂಪವಿಲ್ಲ. ಬ್ರಹ್ಮಾಕಾರವೃತ್ತಿಯೆಂದರೆ ಅಲ್ಲಿ ವೃತ್ತಿಯಿಲ್ಲ. ಬ್ರಹ್ಮವು ಅವಿಕಾರವು. ಶರೀರ, ಮನಗಳ ವಿಕಾರವು ಆನಂದಕ್ಕೆ ಹತ್ತುವದಿಲ್ಲ. ಆರು ಪ್ರಕಾರದ ವಿಕಾರಗಳು ಆನಂದಕ್ಕೆ ಹತ್ತುವದಿಲ್ಲ. ಆನಂದವು ಇದ್ದಕ್ಕಿದ್ದಂಗ ಇದೆ. ಮನಸ್ಸು ಚಂಚಲತೆಯಿಂದ ಆನಂದವನ್ನು ಕಂಡುಕೊಳ್ಳುವದಿಲ್ಲ. ಮನಸ್ಸಿನ ವಿಕಾರ ಶರೀರಕ್ಕೆ, ಶರೀರದ ವಿಕಾರ ಮನಸ್ಸಿಗೆ ಹೀಗೆ ನಡೆದೇ ಇದೆ. ಮನಸ್ಸಿನ ಚಂಚಲತೆಗೆ ಮನಸ್ಸಿನ ವಾಸನೆಗಳೇ ಕಾರಣ. ಪಂಚಜ್ಞಾನೇಂದ್ರಿಯಗಳ ಚಟಗಳು ನಾಶವಾಗಬೇಕು. ನಡುವೆ ಕಲಿತ ಚಟಗಳನ್ನು ಬಿಡುವದು ಕಠಿಣವಿದೆ. ಅಂದಾಗ ಜನ್ಮ-ಜನ್ಮಾಂತರದ ವಾಸನೆಗಳನ್ನು ಬಿಡುವದು ಅತಿ ಕಠಿಣವಾಗಿದೆ. ಮನಸ್ಸಿನ ವಾಸನೆಗಳು ನಾಶವಾದಾಗ ಆನಂದವು ಅನುಭವಕ್ಕೆ ಬರುವದು. ಹೀಗೆ ಮನಸ್ಸು ತನ್ನ ವಿಕಾರಗಳನ್ನು ಕಳದುಕೊಂಡು ಆನಂದವನ್ನು ಅನುಭವಿಸುವದು. ಆದರೆ ಆ ಮನಸ್ಸು ಆನಂದವನ್ನು ವಿಕರಿಸಲಾರದು. ಆನಂದವು ಸ್ವತಃ ಸಿದ್ಧವು. ಯಾವದೇ ಪ್ರಯೋಗಶಾಲೆಯಲ್ಲಿ ಅದನ್ನು ತಯಾರಿಸಿಲ್ಲ.

ಅಂತಃಕರಣ ಪರಿಪಕ್ವವಾದವರು ದೇವತರಿಗಿಂತಲೂ ಶ್ರೇಷ್ಠರು. ಏಕೆಂದರೆ ದೇವತರು ಆಶೆಬುರಕರು. (ಪರಲೋಕದ ಭೋಗದ ಆಸೆಯುಳ್ಳವರು) ಅವರಿಗೆ ತಮ್ಮ ಅಧಿಕಾರ ಹೋದೀತೆಂಬ ಚಿಂತೆ. ದೇವತಾದಿ ಭೋಗಗಳು ಕರ್ಮಜನ್ಯವಾದವುಗಳು. ಆದ್ದರಿಂದ ಅವು ನಾಶವಂತವುಗಳು. ಅಂತಃಕರಣ ಪರಿಪಕ್ವವಾದವರಿಗೆ ಯಾವ ಆಶೆಯೂ ಭಯವೂ ಇರುವದಿಲ್ಲ.

ಆನಂದವು ಕರ್ಮಜನ್ಯವಲ್ಲವು. ಆದ್ದರಿಂದ ಅದು ವಿಕಾರಹೊಂದುವದಿಲ್ಲ. ಅನೇಕ ಪ್ರಾಣಿಗಳು, ಮಾನವರು ಆನಂದವನ್ನು ಅನುಭವಿಸಿದರೂ ಆನಂದವು ಎಳ್ಳಷ್ಟೂ ಸವೆದಿಲ್ಲ.

ವೃದ್ಧರು ಆತ್ಮಾನುಚಿಂತನೆಯಲ್ಲಿಯೇ ಕಾಲಕಳೆಯುತ್ತ ಕುಳಿತರೆ ಅವರಿಗೆ ಆನಂದದ ಸ್ವಾದ ಹತ್ತುವದು. ಅಲ್ಲದೆ ಹಿಂದಿನ ಪೀಳಿಗೆಯವರಿಗೂ ಅಧ್ಯಾತ್ಮದಲ್ಲಿಯೇ ಸುಖವಿದೆ ಎಂಬುದು ತಿಳಿಯುವದು.

ಅನೇಕ ಮತಮತಾಂತರಗಳು ಬೆಳೆದಿವೆ. ಆದರೆ ಎಲ್ಲರ ಮತವು ಸುಖವಲ್ಲವೇ? ಸುಖಕ್ಕೆ ಯಾವ ಜಾತಿ ಇದೆ. ಸತ್ತವರ ಸುದ್ದಿ ಕಲಿತರೆ (ಇತಿಹಾಸ)



ಏನು ಫಲವಿದೆ? ಜಾತಿಯನ್ನು ಬದಲಾಯಿಸುವದರಿಂದ ಸುಖ ಸಿಗುತ್ತದೆಯೇ? ಸಾಧ್ಯವಿಲ್ಲ. ವೇದಾಂತದಲ್ಲಿಯೂ ಅನೇಕ ಗುಂಪುಗಳಿವೆ. ಇವುಗಳಿಂದ ಸುಖ ಸಿಗುತ್ತದೆಯೇ? ಸಾಧ್ಯವಿಲ್ಲ.

ಶರೀರ ಭಾವವಿದ್ದಾಗ ದುಃಖವು, ಶರೀರ ಭಾವವಿಲ್ಲದಾಗ ಸುಖವು. ಆದ್ದರಿಂದ ಈ ಶರೀರವು ಇದ್ದರೆ ಇರಲಿ, ಇಲ್ಲದಿದ್ದರೆ ಸಾಯಲಿ, ದುಃಖ ಕೊಡುವ ಶರೀರದ ಸಲುವಾಗಿ ಚಿಂತೆಯಾತಕೆ?

ಸುಖಕ್ಕಾಗಿ ಯಾವದೇ ವ್ಯಕ್ತಿಯನ್ನು (ಗಂಡ, ಹೆಂಡತಿ) ಅವಲಂಬಿಸಿದರೆ ಆ ವ್ಯಕ್ತಿಯ ಪೂರ್ಣ ಹೊಣೆಗಾರಿಕೆಯನ್ನು ನಾವೇ ಹೊತ್ತುಕೊಂಡು ಗುಲಾಮಗಿರಿಗೆ ಇಳಿಯಬೇಕಾಗುತ್ತದೆ.

ಇನ್ನೊಬ್ಬರ ಅಜ್ಞಾನವನ್ನು ನಿವಾರಣೆಗೊಳಿಸುವದು ಸಾಧ್ಯವಿಲ್ಲ. ತನ್ನ ಅಜ್ಞಾನವನ್ನು ತಾನೇ ಕಳೆದುಕೊಳ್ಳಬೇಕಾಗುತ್ತದೆ.

ಆನಂದದಿಂದ ಹೊರಗೆ ಬಂದೀವಿ. ನಾವು ಎಲ್ಲಿಗೆ ಹೊರಟಿರುವೆವು ಎಂಬುದನ್ನು ಮಾಯೆಯು ನಮಗೆ ತಿಳಿಯಗೊಡುವದೇ ಇಲ್ಲ.

ಏನನ್ನಾದರೂ ಮಾಡದೇ ಇರುವದರಿಂದ ಅಥವಾ ಮಾಡುವದಿಂದ ದುಃಖವು ಬಂದಿಲ್ಲ. (ಹೀಗೆ ಮಾಡುವದರಿಂದ, ಹಾಗೆ ಮಾಡದಿರುವದರಿಂದ ದುಃಖವು ಬಂದಿದೆ ಎಂದು ಸಾಮಾನ್ಯರು ತಿಳಿಯುವರು) ಅಜ್ಞಾನ ಆವರಣದ ಮುಖಾಂತರ ದುಃಖ ದುಮ್ಮಾನಗಳು ಬಂದಿವೆ. ಯಜ್ಞ, ಯಾಗ, ಪೂಜೆ, ಪುನಸ್ಕಾರ ಮಾಡಿದರೂ ದುಃಖವು ಹೋಗಿಲ್ಲ. ಏಕೆಂದರೆ ಅವುಗಳನ್ನು ಮಾಡದೆ ಇರುವದು ದುಃಖಕ್ಕೆ ಕಾರಣವಲ್ಲ. ಅಜ್ಞಾನಾವರಣವನ್ನು ಕಳೆದುಕೊಂಡು ಸುಖಿಯಾದವರು ಎಲ್ಲಿಯೋ ಒಬ್ಬರು. ಅವರನ್ನು ಹಿಂಬಾಲಿಸುವವರು ಕೂಡ ಎಲ್ಲಿಯೋ ಒಬ್ಬರು. ದುಃಖವನ್ನು ಕಳೆದುಕೊಳ್ಳಲು ಕರ್ಮಕ್ಕೆಳಸುವವರು ಅನೇಕರು. ಇದರಿಂದ ಅವರೆಲ್ಲರೂ ಕಷ್ಟಪಡುವರು, ಕಷ್ಟಪಡುತ್ತಾರೆ ಎನ್ನುವದು ಕೂಡ ಅವರಿಗೆ ತಿಳಿಯುವದಿಲ್ಲ.

ದೇವರಿಗೆ (ಗೊಂಬೆಗೆ) ನಡೆದುಕೊಳ್ಳುವದರಿಂದ ದುಃಖ ಹೋಗುವದೇ? ಸಾಧ್ಯವಿಲ್ಲ. ಗೊಂಬೆಗೆ ಅಭಿಷೇಕ ಮಾಡುವದು ಅಜ್ಞಾನವೇ. ಭಿನ್ನ ಭಿನ್ನ ಕರ್ಮಗಳಿಗೆ ಭಿನ್ನ ಭಿನ್ನ ಫಲಗಳಿವೆ. ಕರ್ಮದ ಫಲಗಳು ಕೆಲವೊಂದು ಕರ್ಮಮಾಡಿದ ಕೂಡಲೇ ಬರುವವು. ಕೆಲವು ಕಾಲಾಂತರದ ಮೇಲೆ ಬರುವವು. ಏನೇ ಆಗಲಿ ಕರ್ಮಫಲವನ್ನು ಈಗಾಗಲೀ, ಇನ್ನು ಮುಂದೆಯಾಗಲೀ ಅನುಭವಿಸಲೇಬೇಕಾಗುತ್ತದೆ.

ರುಚಿಕರವಾದ ಆಹಾರವನ್ನು ಸೇವಿಸುವದರಿಂದಾಗಲಿ, ತೇರು ಪಲ್ಲಕ್ಕಿಗಳಲ್ಲಿ ಮೆರೆಯುವದರಿಂದಾಗಲಿ, ಆರತಿ (ಸುಮಂಗಲೆಯರಿಂದ) ಯನ್ನು ಬೆಳಗಿಸಿಕೊಳ್ಳುವದರಿಂದಾಗಲೀ ಸುಖ ಸಿಗುವದೇ? ಸಾಧ್ಯವಿಲ್ಲ.

ಕನಸನ್ನು ನಾವೇ ಕಲ್ಪಿಸುತ್ತೇವೆ ಮತ್ತು ಅಲ್ಲಿ ಜೀವಿಸುತ್ತೇವೆ. ಅದರಂತೆ ಜಾಗ್ರವನ್ನು ನಾವೇ ಕಲ್ಪಿಸುತ್ತೇವೆ. ಜಾಗ್ರವನ್ನು ಇನ್ನೊಬ್ಬರು ಉತ್ಪತ್ತಿ ಮಾಡಿದ್ದರೆ ನಮ್ಮ ಮನಸ್ಸು ಅಡಗಿದಾಗ ಜಾಗ್ರವು ಅಡಗಬಾರದಾಗಿತ್ತು. ನಾವೇ ಕಲ್ಪಿಸಿ ನಾವೇ ದುಃಖವನ್ನು ಹೊಂದುತ್ತೇವೆ. ಸ್ವತಃ ಹೆಚ್ಚು ಕಾಲದವರೆಗೆ ವಿಚಾರ ಮಾಡಿದಾಗ ಅಧ್ಯಾತ್ಮವು ತಿಳಿಯುತ್ತದೆ.

ಇರುವು, ಅರುವು, ಆನಂದವು ಪ್ರಕಟವಾಗುವದು ಉಪಾಧಿಯನ್ನವಲಂಬಿಸಿದೆ. ಇರುವು ಎಲ್ಲರಲ್ಲಿಯೂ ಪ್ರಕಟವಾಗುವದು. ಅರುವು ಅಂತಃಕರಣದಲ್ಲಿ ಮಾತ್ರ ಪ್ರಕಟವಾಗುವದು. ಅಂತಃಕರಣದ ನಿಶ್ಚಲತೆಯಲ್ಲಿ ಆನಂದವು ವ್ಯಕ್ತವಾಗುವದು. (ಅಂತಃಕರಣದ ಚಂಚಲತೆಯಲ್ಲಿ ಆನಂದವು ಪ್ರಕಟವಾಗುವದಿಲ್ಲ.)

ಜಡಶರೀರದ ಪ್ರಭಾವ ಸೂಕ್ಷ್ಮ ಶರೀರದ ಮೇಲೆ ಆಗುವದು. ಆದ್ದರಿಂದ ಸೂಕ್ಷ್ಮ ಶರೀರಕ್ಕೆ ದಣಿವಾಗುವದು. ಆದ್ದರಿಂದ ಅದಕ್ಕೇ ವಿಶ್ರಾಂತಿಯು. ಆತ್ಮನಿಗೆ ವಿಶ್ರಾಂತಿ ಬೇಕಿಲ್ಲ.

ತುರ್ಯದಲ್ಲಿ ಸುಜ್ಞಾನದಿಂದ ಮೂರೂ ಅವಸ್ಥೆಗಳೂ ಸುಳ್ಳಾಗುತ್ತವೆ. ಸಹಜಾವಸ್ಥೆಯಲ್ಲಿ ಜಾಗ್ರ, ಸ್ವಪ್ನ, ಸುಪ್ತಿ ಬಂದು ಹೋದರೂ ಅವು ಸುಳ್ಳಿರುವವು. ಎಂದಿನಂತೆ ವ್ಯವಹಾರ ನಡೆದರೂ ಕನಸಿನಂತೆ ಮಿಥ್ಯೆಯೇ ಸರಿ.

ನಾನೇ ದೇವರೆಂದು ಭಾವಿಸುವದು ಅನುಭಾವವು, ನಂತರ ತಾನೇ ದೇವರಾಗಿರುವದು ಅನುಭವವು, ಯಾವಾಗಲೂ ಸಚ್ಚಿದಾನಂದ ಸ್ವರೂಪನೇ ತಾನು ಎಂಬ ಭಾವವು ಇರಬೇಕು. ಶರೀರದ ಪ್ರಾರಬ್ಧವಿದ್ದಂತೆ ಸ್ವರ್ಗದ ಅಮೃತವಿರಬಹುದು ಅಥವಾ ಭೂಲೋಕದ ಅಂಬಲಿ ಇರಬಹುದು.

ದೈವೀ ಪ್ರೇರಣೆಯಿಂದ ಪ್ರಾಣಿಗಳು ಮಹಾಪುರುಷರಿಗೆ ಆದರವನ್ನು ತೋರಿಸುವವು.

ಬ್ರಹ್ಮನಿಷ್ಠರಾಗುವವರೇ ಬ್ರಹ್ಮನಿಷ್ಠರ ಮನೆಯವರು. ಉಳಿದವರೆಲ್ಲರೂ



ಕೂಳು-ಕುಂಬಳಿ ಮನೆಯವರು. ಯಾವಾಗಲೂ ಸ್ವರೂಪ ಚಿಂತನೆಯಲ್ಲಿ ಇರುವವರೇ ಯೋಗಿಯ ಕುಲದವರು, ಇತರರಲ್ಲ.

ಹೇಗಾದರೂ ಮಾಡಿ ಶರೀರವು ಮನಸ್ಸಿಗೆ ತನ್ನ ನೆನಪನ್ನೇ ಮಾಡಲಿಕ್ಕೆ ಹಚ್ಚುವದು. ಶರೀರ ಮರೆತು ಅರಿವನ್ನು ಅರಿತು ಅರಿವಾಗಿ ಉಳಿಯಬೇಕು. ದುಡಿಯುವದು ಉಣ್ಣುವದು, ಮಲಗುವದು ಜನ್ಮ-ಜನ್ಮಾಂತರ ನಡೆಯುವದೇ, ಇದು ಎಂದಿಗೂ ಬಿಡುವದಿಲ್ಲ. ಆದ್ದರಿಂದ ಸ್ವರೂಪವನ್ನು ಹೊಂದುವದೇ ಕೆಲಸ.

ಜಗತ್ತನ್ನು ಗೆಲ್ಲುವದು ಜಯವಲ್ಲ, ಆದರೆ ಕಾಮ, ಕ್ರೋಧ ಭಯಗಳನ್ನು ಗೆಲ್ಲುವದೇ ಜಯವು. ಈ ಜಯದಿಂದಲೇ ಸ್ವಾನಂದ ಸಾಮ್ರಾಜ್ಯದ ಆನಂದವನ್ನು ಪಡೆಯುವದು ಸಾಧ್ಯ.

ರೋಗ, ಬೆಂಕಿ, ಅಜ್ಞಾನ ಅಲ್ಪವೆಂದು ಬಿಡಬಾರದು. ಏಕೆಂದರೆ ಅವು ಮಹಾನ್ ದುಃಖವನ್ನು ಕೊಡುವವು. ಶರೀರ ಪಾಲನೆ-ಪೋಷಣೆ, ಶೃಂಗಾರಾದಿಗಳಲ್ಲಿಯೇ ಕಾಲವನ್ನು ವ್ಯರ್ಥವಾಗಿ ಕಳೆಯುತ್ತಿದ್ದೇವೆ. ಆದ್ದರಿಂದ ಅಜ್ಞಾನವನ್ನು ಕಳೆದುಕೊಳ್ಳುವದಕ್ಕಾಗಿ ಬಿಡುವೇ ಸಿಗುವದಿಲ್ಲ.

ಜಾಗ್ರವೆಲ್ಲ ದುಃಖ, ನಂತರ ಸುಪ್ತಿಯ ವಿಶ್ರಾಂತಿ, ಮತ್ತೆ ಜಾಗ್ರದ ದುಃಖ, ಮತ್ತೆ ಸುಪ್ತಿ ಹೀಗೆಯೇ ನಡೆದಿದೆ. ಆದರೆ ಇವನಿಗೆ ಜಾಗ್ರದಲ್ಲಿ ಸುಖವು ಬೇಕಾಗಿದೆ. ಜಾಗ್ರದಲ್ಲಿ ಬುದ್ಧಿಯು ದಣಿದಿದೆ ಎಂದು ನಿದ್ರೆಯ ಅವಶ್ಯಕತೆ ಇದೆ. ಜಾಗ್ರದಲ್ಲಿ ಬುದ್ಧಿಯು ದಣಿಯದಿದ್ದರೆ ನಿದ್ರೆಯ ಅವಶ್ಯಕತೆ ಇಲ್ಲ. ಆದ್ದರಿಂದ ಜಾಗ್ರದ ವ್ಯವಹಾರವೆಲ್ಲವೂ ನಿರರ್ಥಕ. ಸುಖವನ್ನು ಪಡೆಯುವದಕ್ಕಾಗಿ ಸಾಕಷ್ಟು ಸೌಕರ್ಯಗಳನ್ನು ಪಡೆದರೂ ಸುಖವು ಸಿಕ್ಕಿಲ್ಲ. ಚಂದ್ರಲೋಕವನ್ನು ತಲುಪಿ ಮರಳಿ ಬಂದರೂ ಸುಖವು ಸಿಕ್ಕಿಲ್ಲ.

ಶರೀರದ ಚಿಂತೆಯನ್ನು ಬಿಟ್ಟು ಸ್ವರೂಪ ಚಿಂತನೆಯನ್ನು ನಡೆಸಿದ್ದಾದರೆ ಸಮಾಧಿಯು ಸಾಧ್ಯವಾಗುವದು. ಸಮಾಧಿಯನ್ನು ಸಾಧಿಸಿದಾಗಲೇ ಸುಖಪ್ರಾಪ್ತಿ. ಸಮಾಧಿಯನ್ನು ಸಾಧಿಸುವವರು ಅತಿ ವಿರಳ. ಜನ್ಮ-ಜನ್ಮಾಂತರ ಶ್ರವಣ ಮಾಡಿದರೂ ಧ್ಯಾನಕ್ಕೆ ಕೂಡ್ರದಿದ್ದರೆ ಏನೂ ಪ್ರಯೋಜನವಿಲ್ಲ.

ಅನೇಕ ಜನರ ಮನಸ್ಸನ್ನು ಮೇಳ ಮಾಡಲು ಸಾಧ್ಯವಿಲ್ಲ. ಏಕೆಂದರೆ ಅವರ ಸಂಸ್ಕಾರಗಳೆಲ್ಲ ಭಿನ್ನವಾಗಿವೆ. ಎಲ್ಲರ ಮನಸ್ಸು ಒಂದೇ ಆಗಿದ್ದರೆ ಭಿನ್ನ ಭಿನ್ನ ಶರೀರಗಳು ಇರಬಾರದಾಗಿತ್ತು. ಸಂಸಾರವು ಸೋಪಾಧಿಕವು. ಸ್ವರೂಪವು

ನಿರುಪಾಧಿಕವು. ಸುಷ್ಪ್ತಿಯಲ್ಲಿ ಎಲ್ಲರೂ ಮೇಳವಾಗಿದ್ದಾರೆ. (ಒಂದೇ ಆಗಿದ್ದಾರೆ) ಕನಸಿನಲ್ಲಿಯೂ ಅನೇಕರು ಮೇಳವಾಗಲಾರರು. ಬಹಿರಂಗದಲ್ಲಿ ಮೇಳವಾಗುವದು ಸಾಧ್ಯವಿಲ್ಲ. ಏಕೆಂದರೆ ಒಂದು ಉಪಾಧಿಯಂತೆ ಮತ್ತೊಂದು ಉಪಾಧಿಯು ಇರಲಾರದು. ಆದ್ದರಿಂದ ಹೊರಗೆ ಏನೆಲ್ಲವನ್ನು ಮಾಡಿದರೂ ವ್ಯರ್ಥವೇ ಸರಿ. ಒಬ್ಬರ ಮನಸ್ಸನ್ನು ಇನ್ನೊಬ್ಬರ ಮನಸ್ಸಿನೊಡನೆ ಮೇಳ ಮಾಡಲು ಯಾರಿಗೂ ಸಾಧ್ಯವಿಲ್ಲ. ಸಂಸಾರವು ಸರ್ವವಿಧದಿಂದಲೂ ವಿಷಮವಿದೆ. ಹರಿಹರ ಬ್ರಹ್ಮಾದಿಗಳು, ಬ್ರಹ್ಮನಿಷ್ಠರೂ ಈ ವಿಷಮ ಸಂಸಾರವನ್ನು ಸಮ ಮಾಡುವದು ಸಾಧ್ಯವಿಲ್ಲ. ಒಂದು ಕೋಟಿ ಬುದ್ಧ, ಶಂಕರ, ಕ್ರಿಸ್ತ ಯಾರೂ ಈ ವಿಷಮ ಸಂಸಾರವನ್ನು ಸಮ ಮಾಡಲಾರರು. ನಿದ್ರೆಯಲ್ಲಿ ಮತ್ತು ಸಮಾಧಿಯಲ್ಲಿ ಎಲ್ಲರ ಮನಸ್ಸು ಒಂದಾಗುವದು. ಆದ್ದರಿಂದ ಪ್ರತಿಯೊಬ್ಬರೂ ವಿಶ್ವವನ್ನು ಸುಧಾರಿಸುತ್ತೇವೆ ಎಂಬ ಹಂಬಲವನ್ನು ಅಲ್ಲಗಳೆದು ಸ್ವರೂಪಾವಸ್ಥಿತಿಯನ್ನು ಹೊಂದುವ ಪ್ರಯತ್ನ ಮಾಡಬೇಕು. ಮಂಗಳಸೂತ್ರವನ್ನು (ಬ್ರಹ್ಮಸೂತ್ರ, ಆನಂದಸೂತ್ರ) ಕಟ್ಟಲಿಕ್ಕೆ ಬರುವದಿಲ್ಲ. ಆದರೆ ಕಂಡುಕೊಳ್ಳಲಿಕ್ಕೆ ಬರುತ್ತದೆ.

ಕೆಲವರಲ್ಲಿ ಹಿಂದಿನ ಅಧ್ಯಾತ್ಮ ದುಡಿಕೆಯ ಸಂಸ್ಕಾರಗಳು ಸುಪ್ತವಾಗಿರುವವು. ಇಂಥವರು ಅಧ್ಯಾತ್ಮ ಚಿಂತನೆಯ ವಾತಾವರಣದಲ್ಲಿ ಇದ್ದರೆ ಅವರ ಸಂಸ್ಕಾರಗಳು ಪ್ರಚೋದನೆ ಹೊಂದಿ ಅವರು ಅಧ್ಯಾತ್ಮದ ಅಭ್ಯಾಸದಲ್ಲಿ ತೊಡಗುವರು. ಇಂಥವರು ಇರುವದರಿಂದಲೇ ವೈಯಾಕರಣಿ ಬೋಧವು ನಡೆದಿದೆ. ಯಾವಾಗ ಅಧ್ಯಾತ್ಮ ಪ್ರವಚನಗಳು ಪ್ರಭಾವವನ್ನು ಬೀರುವವೋ ತಿಳಿಯದು. ಆದ್ದರಿಂದ ಶ್ರವಣವನ್ನು ಮುಂದುವರಿಸುತ್ತ ಹೋಗಬೇಕು. ಅದು ಯಾವಾಗ ಫಲಿಸುವದೋ ಫಲಿಸುವದು. ಆದ್ದರಿಂದ ನಿರಂತರವೂ ಶಾಸ್ತ್ರಾದಿಗಳನ್ನು ಮುಂದುವರಿಸುತ್ತ ಹೋಗಬೇಕು. ನಿತ್ಯಸಂಸ್ಕಾರದಿಂದ ಪರಿಣಾಮವಾಗುವದು ನಿಶ್ಚಿತ. ಈಗ ಶಾಸ್ತ್ರವು ತಿಳಿಯದಿದ್ದರೂ, ಮುಂದೆ ಅದು ತಿಳಿಯುವದು ನಿಶ್ಚಿತ. ಯಾರಿಗೆ ಶಾಸ್ತ್ರವು ಯಾವಾಗ ಪರಿಣಾಮವಾಗುವದೋ ಹೇಳಲಿಕ್ಕೆ ಬರುವದಿಲ್ಲ (ಮಗುವಿದ್ದಾಗ, ಬಾಲಕನಿದ್ದಾಗ) ಪ್ರಾಯದಲ್ಲಿ ಅಥವಾ ಮುಪ್ಪಿನ ವಯಸ್ಸಿನಲ್ಲಿಯಾದರೂ ಆಗಬಹುದು.)

ಬ್ರಹ್ಮನಿಷ್ಠರ ಮೂರ್ತಿ ಇಟ್ಟರೆ ಅದೂ ಮೂರ್ತಿಪೂಜೆಯೇ. ತಾನು ದೇಹವೆನ್ನುವದು ಎಲ್ಲ ಮೂರ್ತಿಪೂಜೆಗಳಿಗೂ ಮೂಲ ಮೂರ್ತಿಪೂಜೆಯು.

ಮನೋರಥನಿಗೆ ಕಾರ್ಯಗಳು ಸಿದ್ಧಿಸುವದಿಲ್ಲ. ಪ್ರಯತ್ನದಿಂದ ಕಾರ್ಯಗಳು



ಸಿದ್ಧಿಸುತ್ತವೆ. "ಉದ್ಯಮೇನ ಸಿದ್ಧಂಸಿ ಕಾರ್ಯಾಣಿ ನ ಮನೋರಥಾನಿ" ಎಂಬಂತಿದೆ.

ತತ್ತ್ವವು ಒಂದೇ, ಅದು ಪರಿಶುದ್ಧ ಹೃದಯದಲ್ಲಿಯೇ ಅನುಭವಕ್ಕೆ ಬರುವದು. ದೇಹವು ಎಲ್ಲಿದ್ದರೇನು, ಯಾವದೇ ಉದ್ಯೋಗದಲ್ಲಿ ತೊಡಗಿದರೇನು, ಮನಸ್ಸು ಮಾತ್ರ ಸ್ವರೂಪದಲ್ಲಿರಬೇಕು (ತನ್ನ ನಿಜ ಸ್ಥಿತಿ) ಶಿವಾನಂದರು ಪೋಲಿಸಪಾಟೀಲರಾಗಿ, ಶಿಕ್ಷಕರಾಗಿ ಕೆಲಸ ಮಾಡಿದರು. ಕೃಷ್ಣನು ಆಕಳುಗಳನ್ನು ಕಾಯ್ದನು. ಭರ್ತೃಹರಿಯು ರಾಜನಾಗಿದ್ದನು. ವಶಿಷ್ಠರು ಗುಡಿಸಲಿನಲ್ಲಿ ಇದ್ದರು. ಗುರುಲಿಂಗ ಜಂಗಮರು ಕುರಿಗಳನ್ನು ಕಾಯುತ್ತಿದ್ದರು. ಆದರೆ ಇವರೆಲ್ಲರ ಮನಸ್ಸು ಸ್ವರೂಪದಲ್ಲಿಯೇ ಇತ್ತು.

ಮೋಹವನ್ನು ತಾಳದವನೇ ಧೀರನು. ಕರ್ಮೇಂದ್ರಿಯ ಮತ್ತು ಜ್ಞಾನೇಂದ್ರಿಯಗಳು ಜಡವಸ್ತುಗಳ ಕಡೆಗೆ ಸಾಗುವವು. ಆದರೆ ಸ್ವರೂಪದ ಕಡೆಗೆ ಸಾಗಲಾರವು. ಆದರೆ ಶುದ್ಧ ಸತ್ವಪ್ರಧಾನವಾದಂತಹ ಬುದ್ಧಿಯು ಮಾತ್ರ ಸ್ವರೂಪದ ಕಡೆಗೆ ಸಾಗಬಲ್ಲದು. ಬುದ್ಧಿಯು ಶುದ್ಧ ಸತ್ವ ಪ್ರಧಾನವಾದಾಗ ಅಂತಃಕರಣವು ಆನಂದಮಯವೇ ಇರುತ್ತದೆ. ಅಜ್ಞಾನಾವರಣ ಭಂಗವಾಗಲು ರಾಗ-ದ್ವೇಷಗಳು ನಾಶವಾಗಿ ಆನಂದವೇ ಉಳಿಯುವದು (ಮನೆಯೊಳಗಿನ ಸಾಮಾನುಗಳನ್ನು ತೆಗೆದರೆ ಬರೇ ಬಯಲೇ ಉಳಿಯುವದು.) ಆನಂದವು ಪರಿಚ್ಛಿನ್ನವಿಲ್ಲ. ಆನಂದದಲ್ಲಿ ಗಮನಾಗಮನ ಕ್ರಿಯೆಗಳಿಲ್ಲ. ಆನಂದವು ವ್ಯಾಪಕವಿದೆ. ಚಿತ್ತದ ವೃತ್ತಿಯು ನಿಶ್ಚಲವಾದಾಗ ಆನಂದವು ಇರುವದು. ಈ ಸಮಯದಲ್ಲಿ ಶರೀರವು ಕೂಡ್ರಬಹುದು, ಮಲಗಬಹುದು, ಅಡ್ಡಾಡಬಹುದು, ಆದರೆ ಅಂತಃಕರಣವು ಆನಂದಮಯವೇ ಇರುವದು.

ತುರ್ಯಪದದಲ್ಲಿ ಅಂತಃಕರಣವು ಕರ್ಮೇಂದ್ರಿಯಗಳಿಗೆ ಮತ್ತು ಜ್ಞಾನೇಂದ್ರಿಯಗಳಿಗೆ ಪ್ರೇರಣೆಯನ್ನುಂಟು ಮಾಡುವದಿಲ್ಲ. ಶರೀರವು ರೂಢಿಗತವಾಗಿ ಚಲನವಲನವನ್ನು ಹೊಂದುತ್ತಿರುತ್ತದೆ. ಕೆಲವರು ನಿದ್ರೆಗಣ್ಣಿನಲ್ಲಿ ಅಡ್ಡಾಡಲಿಕ್ಕೆ ಹೋಗುವರು. (ಹೂಲಿ ಎಂಬ ಗ್ರಾಮದಲ್ಲಿಯ ಒಬ್ಬನು ನಿದ್ರೆಯಲ್ಲಿ ಕೊಡ ತೆಗೆದುಕೊಂಡು ಹೊಕ್ಕು ತುಂಬುವ ಬಾವಿಗೆ ಹೋದನು. ಕಾಲಿಗೆ ತಂಪಾದ ನೀರು ಹತ್ತಲು ಎಚ್ಚರವಾದನು.) ನಿದ್ರೆಯಿಂದ ಎಚ್ಚರವಾಗಬಹುದು. ಆದರೆ ತುರ್ಯದಲ್ಲಿದ್ದರೆ ಎಚ್ಚರವಾಗುವದಿಲ್ಲ. ತನ್ನಿಂದ ತಾನೇ ಉತ್ಥಾನವಾದಾಗ ವ್ಯವಹಾರಿಕ ಎಚ್ಚರಿಕೆಗೆ ಬರಬಹುದು ಅಥವಾ ಸಹಜಾವಸ್ಥೆಗೆ ಬರದೆ ತನ್ನ

ನಿಜಸ್ಥಿತಿಯಲ್ಲಿಯೇ ಉಳಿಯಬಹುದು. (ತುರ್ಯಾತೀತವು) ಆಗ ಯಾವಾಗಾದರೊಮ್ಮೆ ದೇಹವು ಬಿದ್ದು ಹೋಗಬಹುದು. ತುರ್ಯದಲ್ಲಿ ಅಂತಃ ಕರಣಕ್ಕೂ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳಿಗೂ ಸಂಪರ್ಕವು ತಪ್ಪಿರುವದು. ತುರ್ಯಹೊಂದಿದಾಗ ಕಣ್ಣು ತೆರೆದಿರಬಹುದು. ಆಗ ಏನೂ ಕಾಣಿಸುವದಿಲ್ಲ. (ಅರೆಗಣ್ಣಿನಿಂದ ಮಲಗಿಕೊಂಡವನಿಗೆ ಏನೂ ಕಾಣಿಸುವದಿಲ್ಲ. ಆಗ ಮನಸ್ಸು ಲಯವಾಗಿರುವದು, ಅದು ಆನಂದಮಯವಾಗಿರುವದು. ಕಣ್ಣಿನ ಮತ್ತು ಅಂತಃ ಕರಣದ ಸಂಬಂಧವು ತಪ್ಪಿರುವದು) ಆದರೆ ವ್ಯವಹಾರಿಕ ಎಚ್ಚರಿಕೆಯಲ್ಲಿ ಅರೆಗಣ್ಣಿನಿಂದ ಕುಳಿತಾಗ ಅವನಿಗೆ ಎಲ್ಲವೂ ಕಾಣಿಸುವದು. ತುರ್ಯದಿಂದ ಉತ್ಥಾನವಾದರಿಗೆ ಆನಂದವಿದ್ದೇ ಇರುತ್ತದೆ. ಅವರಿಗೆ ರಾಗ, ದ್ವೇಷ, ಭಯ, ಯಾವದೂ ಇರುವದಿಲ್ಲ. ಅವನ ಬುದ್ಧಿ ಸ್ಥಿತವಿರುತ್ತದೆ. ಎಲ್ಲಿ ಕುಳಿತರೂ ಸಮಾಧಿ ಹತ್ತಬೇಕು. ಮಹಾತ್ಮರು ಇದ್ದ ಸ್ಥಳದಲ್ಲಿದ್ದು ತುರ್ಯ ಹೊಂದದಿದ್ದರೆ ಏನೂ ಪ್ರಯೋಜನವಿಲ್ಲ. ಮಹಾತ್ಮರು ಇದ್ದ ಸ್ಥಳದಲ್ಲಿ ಹಲ್ಲಿಗಳೂ ಇರುವವು. ತುರ್ಯವನ್ನು ಹೊಂದಲು ಬಾಹ್ಯದ್ದೇನೂ ಸಂಬಂಧವಿಲ್ಲ. ತುರ್ಯವನ್ನು ಹೊಂದಲು ಬುದ್ಧಿಯು ಶುದ್ಧ ಸತ್ವಪ್ರಧಾನವಾಗಬೇಕು. ಇದಕ್ಕೆ ವಿವೇಕವೇ ಸಾಧನವು.

ಅನುಭವವೆಂದರೆ ಆ ಪ್ರಕಾರವಾಗಿ ಇರುವದು. ಅನುಭಾವವೆಂದರೆ ಆ ಪ್ರಕಾರವಾಗಿ ಭಾವಿಸುವದು. ಶಿಕ್ಷಣ ಕಲಿತ ಮೇಲೆ ಚಿಂತೆ ದುಃಖವಿರಬಾರದು. ಚಿಂತೆ ದುಃಖ ಇಲ್ಲದಂತೆ ಮಾಡಿಕೊಳ್ಳುವದೇ ನಿಜವಾಗಿ ಶಿಕ್ಷಣವನ್ನು ಪಡೆದಂತೆ. ಸ್ವರೂಪವೇ ತಾನು ಎಂದವನಿಗೆ ಚಿಂತೆಯಿಲ್ಲ. ದೇಹವೇ ತಾನೆಂದವನಿಗೆ ಚಿಂತೆಯಿದೆ. ಆದ್ದರಿಂದ ತುರ್ಯವನ್ನು ಹೊಂದಿದಾಗಲೇ ಚಿಂತೆಯು ಹೋಗುವದು.

ಒಂದು ಶಬ್ದದ ಅರ್ಥವನ್ನು ಬೇರೆ ಬೇರೆಯವರು ಬೇರೆ ಬೇರೆ ರೀತಿ ಅರ್ಥಮಾಡಿದ್ದರಿಂದ ಭಿನ್ನ ಭಿನ್ನ ಮತಗಳಾಗಿವೆ. ಆನಂದ ಹೊಂದಲಿಕ್ಕೆ ಪುಸ್ತಕ ಬೇಕಾಗಿಲ್ಲ. ಪುಸ್ತಕ ಓದುವದರಿಂದ ಆರಾಮ ಸಿಗುತ್ತದೆ ಎನ್ನುವದೂ ಒಂದು ಭ್ರಾಂತಿಯೇ. ನಿಜವಾಗಿ ಆರಾಮ ಬೇಕಾದವನಿಗೆ ಯಾವ ಪುಸ್ತಕದ ಅವಶ್ಯಕತೆಯೂ ಬೇಕಾಗಿಲ್ಲ.

ಬ್ರಹ್ಮನಿಷ್ಠರ ದೇಹವು ಶ್ರೇಷ್ಠವು. ಉಳಿದವರ ದೇಹಗಳು ಕೀಳಾದವು ಎಂಬುದೇನಿಲ್ಲ. ವೇದಾಂತಿಗೆ ಮೇಲು-ಕೀಳು ಎಂಬ ಭಾವನೆಯೇ ಇರುವದಿಲ್ಲ. ಸೋಪಾಧಿಯಿಂದ ಭೇದವು, ಇದೇ ದುಃಖಕ್ಕೆ ಕಾರಣವಾಗಿದೆ. ನಿರುಪಾಧಿಕವು



ಬೇಕಾಗಿದೆ. ಇಲ್ಲದ್ದನ್ನು ಕೈ ಬಿಟ್ಟು ಇದ್ದದ್ದನ್ನು ಹಿಡಿಯಬೇಕಾಗಿದೆ. ನಂತರ ಇದೂ ಹೋಗಿ ಬಿಡುವದು.

ಮೇಲು-ಕೀಳು, ದೇಶ-ಕಾಲ, ಕಾರ್ಯ ಕಾರಣ, ಸ್ತ್ರೀ-ಪುರುಷ ಭೇದಭಾವ ಬೇಡ. ವ್ಯವಹಾರದಲ್ಲಿ ವ್ಯವಹಾರ ನಡೆಯಬೇಕು. ಆದರೆ ಪಾರಮಾರ್ಥಿಕ ವಿಚಾರ ನಿರಂತರ ನಡೆಯಬೇಕು. ಸ್ತ್ರೀ, ಪುರುಷರ ಕೂಡ ಹೇಗೆ ಇರಬೇಕು ಹಾಗೆ ಇರುವದೇ, ಅಧಿಕಾರಿಗಳೊಡನೆ ಹೇಗೆ ಇರಬೇಕು ಅದರಂತೆ ಇರುವದೇ, ಸೇವಕರೊಡನೆ ಹೇಗೆ ಇರಬೇಕು ಹಾಗೆ ಇರುವದೇ. ಮುಕ್ತರು ಅಂತರಾತ್ಮ ಸ್ಥಿತಿಯಲ್ಲಿ (ತುರ್ಯದ ಅನುಭವವನ್ನು ಲಕ್ಷಿಸಿ) ನಿಂತು ಜೀವಿಗಳಿಗೆ ಬೋಧ ಮಾಡುವರು. ವ್ಯವಹಾರಿಕ ಮತ್ತು ಪಾರಮಾರ್ಥಿಕ ನಯಗಳು ಇರಬೇಕು. ನೀತಿಯು ಎಳ್ಳಷ್ಟೂ ತಪ್ಪುವಂತಿಲ್ಲ.

ಪ್ರಾರಂಭದಲ್ಲಿ ವಿವೇಕದಿಂದ ಸಚ್ಚಿದಾನಂದನೇ ನಾನು ಎಂಬ ಭಾವದಲ್ಲಿರಬೇಕು. ಮುಂದೆ ತನ್ನಿಂದ ತಾನೇ ಆ ಸಚ್ಚಿದಾನಂದನೇ ತಾನು ಎಂಬ ಅನುಭವವು ಬರುವದು. ಶಿವಾನಂದರಿಗೆ ಒಮ್ಮೊಮ್ಮೆ ಊಟ ಮಾಡುವಾಗ ಸಹ ತುರ್ಯದ ಸ್ಥಿತಿಯು ಬರುತ್ತಿತ್ತು. ಉತ್ಥಾನವಾದ ನಂತರವೇ ಆಹಾರವನ್ನು ತೆಗೆದುಕೊಳ್ಳುವದು ನಡೆಯುತ್ತಿತ್ತು. ಯಾವದೇ ಒಂದು ವಿಚಾರದಲ್ಲಿದ್ದಾಗ ನಮ್ಮ ಮುಂದೆ ಯಾರು ಹಾಯ್ದು ಹೋದರು ಎಂಬುದು ಗುರುತಾಗುವದಿಲ್ಲ. ಅದರಂತೆ ಸ್ವರೂಪದ ಕಡೆಗೆ ಲಕ್ಷವಿದ್ದರೆ ಉಳಿದ ಯಾವದರ ಕಡೆಗೂ ನಮ್ಮ ಚಿತ್ತವು ಇರುವದಿಲ್ಲ. ಆದ್ದರಿಂದ ಯಾವಾಗಲೂ ತಾನೇ ಸಚ್ಚಿದಾನಂದನು ಎಂಬ ಭಾವವಿರಬೇಕು. ಬಾಹ್ಯ ವ್ಯವಹಾರ ನಡೆದರೂ ತಾನು ಸಚ್ಚಿದಾನಂದನು ಎಂಬ ಭಾವ ಮಾಜಬಾರದು.(ಸಾಮಾನ್ಯವಾಗಿ ಬಾಹ್ಯವ್ಯವಹಾರ ನಡೆದರೂ ಈ ಶರೀರ ತಾನೆಂಬ ಭಾವ ಮಾಜುವದಿಲ್ಲ ಅದರಂತೆ)

ನಾವು ಏನನ್ನು ಭಾವಿಸುವೆವೋ ಅದು ಆಗುವೆವು. ಆದ್ದರಿಂದ ನಮ್ಮ ನಿಜವಾದ ಇರವನ್ನೇ ಭಾವಿಸಬೇಕು. ತನ್ನ ನಿಜಸ್ವರೂಪವು ಸಚ್ಚಿದಾನಂದವು ಎಂದು ಒಮ್ಮೆ ಹೇಳಿದ ಕೂಡಲೇ ಆ ಅನುಭವ ಹೊಂದುವ ಜೀವಿಗಳು ಇದ್ದಾರೆ. ಕೆಲವರು ಹೇಳಿದ ಕೂಡಲೇ ಅಭ್ಯಾಸದಲ್ಲಿ ತೊಡಗುವವರೂ ಇದ್ದಾರೆ. ಹೀಗೆ ಇರುವವರು ಎಲ್ಲಿಯೋ ಒಬ್ಬರು. ಹೀಗೆ ಇರುವದಕ್ಕೆ ಅವರ ಹಿಂದಿನ ಜನ್ಮಗಳ ಸ್ವರೂಪ ವಿಚಾರರೂಪ ದುಡಿಕೆಯೇ ಕಾರಣವಾಗಿದೆ.

ಪುಸ್ತಕಗಳನ್ನು ತಿರುವಿ ಹಾಕಿದರೆ ಏನು ಪ್ರಯೋಜನ? ಆ ಯೋಗ, ಈ

ಯೋಗ, ಈ ಅರ್ಥ ಆ ಅರ್ಥ ತೆಗೆದುಕೊಂಡು ಏನು ಮಾಡುವಿ? ಎಷ್ಟು ದಿನಗಳವರೆಗೆ ಕೇಳುತ್ತ ಹೋಗುವದು? ಬೇಗನೆ ಅಭ್ಯಾಸದಲ್ಲಿ ನಿರತರಾಗಬೇಕು. ಹೊರಗೇನೂ ಸುಖವಿಲ್ಲವೆಂಬುದು ತಿಳಿದರೆ ಸಾಕು. ಮಹಾತ್ಮರ ವೇಶಭೂಷಣಗಳನ್ನು ಅನುಕರಿಸದೆ ಅವರ ಅನುಭವ ಸ್ಥಿತಿಯನ್ನು ಅನುಕರಿಸಬೇಕು. ನಾವು ಅವರ ತುರ್ಯಸ್ಥಿತಿಯನ್ನುಅನುಕರಿಸಬೇಕು. ಯಾವಾಗ ತುರ್ಯ ಸಾಧಿಸೀತು ಎಂಬ ಚಿಂತೆ ಇರಬೇಕು.

ಬಾಲ್ಯಾವಸ್ಥೆಯಲ್ಲಿ ಅಧ್ಯಾತ್ಮದ ಅಭ್ಯಾಸ ನಡೆಯಬೇಕು. ನಂತರ ಗೃಹಸ್ಥಾಶ್ರಮದಲ್ಲಿ ತ್ಯಾಗಪೂರ್ವಕವಾದ ಭೋಗವು ನಡೆಯಬೇಕು ಮತ್ತು ಅದೇ ಅಧ್ಯಾತ್ಮ ಚಿಂತನೆಯು ನಡೆಯಬೇಕು. ತಮ್ಮ 50 ವರ್ಷದ ವಯಸ್ಸಿಗೆ ವಾನಪ್ರಸ್ಥಾಶ್ರಮಕ್ಕೆ ಬರಬೇಕು. ನಂತರ ಮುನಿವೃತ್ತಿಯು ಮುಂದುವರಿಯಬೇಕು.

ಶಾಲೆ ಕಲಿಯಲಿಕ್ಕೆ ಹಾಕಿದರೆ ನಾಟಕ, ಸಿನೇಮಾ ನೋಡಲು ಪ್ರಾರಂಭಿಸಿದರೆ, ಜಾತ್ರೆ ಮಾಡಲು ಪ್ರಾರಂಭಿಸಿದರೆ ಜೀವನವು ಕೆಟ್ಟಿತು ಎಂದು ತಿಳಿದುಕೊಳ್ಳಬೇಕು. ಕಾದಂಬರಿಗಳನ್ನು ಓದಿ ಆ ಕಾದಂಬರಿಗಳಲ್ಲಿಯಂತೆಯೇ ತಮ್ಮ ಜೀವನವು ನಡೆಯಬೇಕೆಂದು ಬಯಸಿ ಕಾಮುಕ ವಿಚಾರದಿಂದ ತಲೆಕೆಟ್ಟು ಹುಚ್ಚು ಹಿಡಿಯುವದು. ಈ ರೀತಿಯಾಗಿ ಕಥೆ, ಕಾದಂಬರಿ ಓದಿ ತಲೆಕೆಡಿಸಿಕೊಳ್ಳುವೆವು. ಬರೇ ಷಡ್ದರ್ಶನ ಓದಿದರೆ ಏನೂ ಪ್ರಯೋಜನವಿಲ್ಲ. ಬ್ರಹ್ಮನಿಷ್ಠರನ್ನು ಬಿಟ್ಟು ಕಲಿಯುವದೆಂದರೆ ಪಾಪದ ಕೆಲಸವೇ ಸರಿ. ಹೊಟ್ಟೆ ಬಟ್ಟೆಯ ಚಿಂತೆಯೇಕೆ? ಸ್ವಲ್ಪ ದುಡಿದರೆ ಹೊಟ್ಟೆ ಬಟ್ಟೆಗೆ ಸಾಕಾಗುತ್ತದೆ. ವಿವೇಕ, ವೈರಾಗ್ಯ, ಅಭ್ಯಾಸಗಳನ್ನು ಅನುಕರಿಸಬೇಕು.

ಮಾತು ಬಂದಾಗ ಸೋತು ಹೋದವ ಜಾಣ. ಕೆಲವರು ಬರೇ ತರ್ಕ ಮಾಡುವರು. ಅವರಿಗೆ ಜಯಪತ್ರವನ್ನು ಬರೆದುಕೊಡುತ್ತೇವೆ ಎಂದು ಹೇಳಿದರೆ ತೀರಿತು. ಎಷ್ಟು ಕೇಳುವರೋ ಅಷ್ಟು ಹೇಳುವದೇ, ಮತ್ತೆ ಹಸಿದು ಕೇಳಿದರೆ ಹೇಳುವದೇ, ಕೇಳದೇ ಹೋದರೆ ಮುಗಿದೇ ಹೋಯಿತು.

ಶರೀರವು ಜಡದಿಂದ ತಯಾರಾಗಿದೆ. ಆದ್ದರಿಂದ ಶರೀರಕ್ಕೆ ಜಡದ ಅವಶ್ಯಕತೆ ಇದೆ. ಇರುವು ಅರುವು ಜಡವಲ್ಲ. ಆದ್ದರಿಂದ ಅರುವು ಇರುವಿಗೆ ಜಡದ ಅವಶ್ಯಕತೆ ಇಲ್ಲ.

ಬ್ರಹ್ಮನಿಷ್ಠರು ತಲೆಯ ಮೇಲೆ ಕಲ್ಲು ಹಾಕಿದರೂ ಅವರನ್ನು ಬಿಟ್ಟು ತೊಲಗಬಾರದು. ಜಗತ್ತು ಬೈಯಲಿ, ತಿರಸ್ಕಾರ ಮಾಡಲಿ, ಹೊಡೆಯಲಿ, ನಿಂದೆ



ಮಾಡಲಿ, ಅಪವಾದ ಕೊಡಲಿ, ನೀವು ಮಾತ್ರ ನಿಮ್ಮ ಸ್ವರೂಪ ಅಭ್ಯಾಸದಲ್ಲಿರಿ. ಶರೀರವು ರೋಗದಿಂದ ಬಳಲುತ್ತಿದ್ದರೂ ಸ್ವರೂಪದ ಅಭ್ಯಾಸವು ಮುಂದುವರಿಯಬೇಕು: ಬುದ್ಧಿಯು ತೋರಿಕೆಯ ಅವಸ್ಥೆಗಳನ್ನು ಬಿಟ್ಟು ಸ್ವರೂಪದಲ್ಲಿ ನೆಲೆ ನಿಲ್ಲಬೇಕು. ಇದೇ ಎಲ್ಲ ಯೋಗವು.

* * * *

## 11-4-1978 ರ ಸಂಜೆ

ಅನೇಕ ಯೋಗಗಳೂ, ಪುಸ್ತಕಗಳು, ಅನೇಕ ಅರ್ಥಗಳು ಎಲ್ಲವೂ ನಿಷ್ಪ್ರಯೋಜಕ. ಸುಮ್ಮನೆ ನಿನ್ನ ಅನುಭವವನ್ನು ನೋಡಿಕೊ. ಕೆಲವರು ಪುಸ್ತಕವನ್ನೇ ಪೂಜಿಸುವರು. ಇದರಿಂದ ಏನೂ ಪ್ರಯೋಜನವಿಲ್ಲ. ತನ್ನ ಆನಂದವೇ ತನ್ನ ಸಾಮ್ರಾಜ್ಯ. ಅದನ್ನು ಅನುಭವದಿಂದಲೇ ನೋಡಿಕೊಂಡಾನ, ಮರೆತಾನ. ಅದನ್ನು ಪುನಃ ನೆನಪಿಗೆ ತೆಗೆದುಕೊಳ್ಳಬೇಕಾಗಿದೆ. ಆ ಶಬ್ದ, ಈ ನಾದ, ಆ ಭಾಷೆ, ಈ ಭಾಷೆ ಎಲ್ಲವೂ ನಿಷ್ಪ್ರಯೋಜಕ. ಅನೇಕ ಭಾಷೆಗಳನ್ನು ಕಲಿಯುವದರಿಂದ ಕಲಿತೆನೆಂಬ ಅಭಿಮಾನವು ಬರಬಹುದು. ಕಾವಿ ಬಟ್ಟೆ ಧರಿಸಿ ತಿರುಗಾಡಿದರೆ ಹೊಟ್ಟೆಯ ಕೂಳು ಹೊರಗೆ ಹೋಗುತ್ತದೆ. ಶಾಸ್ತ್ರವನ್ನು ಹೇಳಲು ಬಂದರೆ ಚೈನಿ ನಡೆಯುವದು. ಆದರೆ ಆನಂದವಾಗಿ ಇರುವದನ್ನು ಕಲಿಯಬೇಕಾಗಿದೆ. ಹುಡುಕಾಡಿದರೆ ಆನಂದವು ಸಿಗುವದಿಲ್ಲ. ಹುಡುಕಾಡದೆ ಸುಮ್ಮನೆ ಇದ್ದರೆ ಆನಂದವೇ ಇರುತ್ತದೆ. ಯಾತ್ರೆ ಮಾಡುವದು ವ್ಯರ್ಥ. ಹಣವನ್ನು ಯಾತ್ರೆಗೆ ಖರ್ಚು ಮಾಡದೆ ನೀತಿವಂತ ಬಡವರಿಗೆ ಕೊಡುವದು ಒಳ್ಳೆಯದು. ಅತಿ ಶ್ರದ್ಧಾವಂತ ಜನರು ಇರುವರು. ಅಂಥವರಿಗೆ ದಾನವನ್ನು ಮಾಡುವದು. ಅವರು ಮರಳಿ ಉಪಕಾರ ಮಾಡಬೇಕೆಂಬ ಬುದ್ಧಿಯಿಂದ ದಾನ ಮಾಡಬೇಕಾಗಿಲ್ಲ. ಅವರು ತಾವೇ ತಿಳಿದುಕೊಂಡು ಸಹಾಯಕವಾಗುವರು. ಹೀಗೆ ಮಾಡಿದರೆ ದುಷ್ಟರಿಗೆ ತಾವೂ ಸಂಪನ್ನರಾದರೆ ತಮಗೂ ದಾನವು ಸಿಗುವದು ಎಂಬ ತಿಳುವಳಿಕೆಯುಂಟಾಗುವದು. ವಿವೇಕದಿಂದ ಸ್ವರೂಪದ ತಿಳುವಳಿಕೆಯಾದಾಗ ಎಲ್ಲ ಮಹಾತ್ಮರೂ, ಪ್ರವಾದಿಗಳೂ ಆಚಾರ್ಯರೂ ಮುಳುಗಿ ಹೋಗುವರು. ಈ ಜನ್ಮದಲ್ಲಿ ಸ್ವರೂಪ ಸಾಧಿಸುವದು ಆಗದಿದ್ದರೂ ಬ್ರಹ್ಮನಿಷ್ಠರ ಸೇವೆಗಾದರೂ ಶರೀರವು ಉಪಯೋಗವಾಗಬೇಕು.

ಮನಸ್ಸು ಸುಧಾರಿಸಿದಾಗ ಜಗವೆಲ್ಲವೂ ಸುಧಾರಿಸುವದು. ಏಕೆಂದರೆ ಜಗತ್ತು

ಮನಸ್ಸಿನ ಕಲ್ಪನೆಯು. ಆದ್ದರಿಂದ ಮನಸ್ಸು ನಾಶವಾದರೆ ಜಗತ್ತು ಸುಧಾರಿಸಿದಂತೆಯೇ ಸರಿ.

ನಮ್ಮ ಕಣ್ಣುಗಳು ಅನೇಕ ವಸ್ತುಗಳನ್ನು ನೋಡುವವು. ಆದರೆ ಆ ನೋಡಿದ ವಸ್ತುಗಳಿಂದ ಕಣ್ಣುಗಳಿಗೇನೂ ವ್ಯಸನವಾಗುವದಿಲ್ಲ. ಆದರೆ ಮನಸ್ಸಿಗೆ ವ್ಯಸನವಾಗುತ್ತದೆ. ಮನಸ್ಸಿಗೆ ವ್ಯಸನವಾಗದಂತೆ ಅಭ್ಯಾಸವನ್ನು ಮುಂದುವರಿಸಬೇಕು.

ವೇದಾಧಿ ವಿಧಿಗಳಿಗೆ ವರಯೋಗಿ ಇನಿಸು ಕಿಂಕರನಲ್ಲ. ನಿದ್ರೆ ಹತ್ತಿದವನಿಗೆ ಯಾವ ನಿಯಮವೂ ಇಲ್ಲ.

* * * *

## 12-4-1978 ರ ಮುಂಜಾನೆ

ಬಾಯಿ ಬ್ರಹ್ಮದಿಂದ ಏನೂ ಪ್ರಯೋಜನವಿಲ್ಲ. ನನ್ನ ಹಾಗೆ ಶಾಸ್ತ್ರವನ್ನು ಹೇಳಲಿಕ್ಕೆ ಯಾರಿಗೂ ಬರುವದಿಲ್ಲವೆಂಬ ಅಹಂಕಾರವು ಬರುವದು. ನನಗೂ ಸ್ವಲ್ಪ ಶಾಸ್ತ್ರ ಹೇಳಲಿಕ್ಕೆ ಹಚ್ಚಲಿಲ್ಲ ಎಂಬ ಅಹಂಭಾವವಿರುವದು. ನಾನು ಜ್ಞಾನಿ ಆಗೀನಿ, ತರಹರಿ ಆಗೀನಿ ಎಂಬ ಅಹಂಕಾರವೇ ಹೆಚ್ಚಾಗುವದು.

ತ್ಯಾಗವೆಂದರೆ ಅಹಂಕಾರದ ತ್ಯಾಗ, ಅಹಂಕಾರ ಎಂದರೆ ಎಲ್ಲ ವಾಸನೆಗಳ ಗಂಟು (ದೇಹವಾಸನೆ, ಲೋಕವಾಸನೆ, ಶಾಸ್ತ್ರವಾಸನೆ ಮೊದಲಾದವು) ಬರೇ ಬಾಯಿಂದ ಹೇಳಿದರೆ ಏನು ಪ್ರಯೋಜನ? ಆತ್ಮನಾಗಿ ಉಳಿಯಬೇಕಲ್ಲ. ವೇದಾಂತ ಹೇಳಿದರೂ ವಿಷಯಗಳ ಅತಿ ಆಸೆ ಇದ್ದರೆ ಪಿಶಾಚಿ ಜನ್ಮ ಬರುವದು ನಿಶ್ಚಿತ.

ನಮ್ಮ ಮನಸ್ಸು ಮಾಡುವ ಕಳ್ಳತನವನ್ನು ಜನರೇನು ಬಲ್ಲರು! ಆದ್ದರಿಂದ ಜನಕಂಜಿ ನಡೆಯದೆ ಮನಕಂಜಿ ನಡೆಯಬೇಕು.

ಸ್ವರೂಪ ಪಡೆಯಬೇಕೆಂಬ ಇಚ್ಛೆಯುಳ್ಳವರು ನಮ್ಮವರು. ಆಹಾರ, ಮೈಥುನ, ಆಸ್ತಿ ಪಾಸ್ತಿಗಾಗಿ ಬಂದವರು ನಮ್ಮವರಲ್ಲ. ಪ್ರಾಣಹೋದರೂ ಚಿಂತೆಯಿಲ್ಲದೆ ನಮಗೆ ಯಾರು ಸಹಕಾರಿ ಆಗುವರೋ ಅವರೇ ನಮ್ಮವರು. ಹೆಂಡತಿ, ಮಕ್ಕಳು, ಬಂಧುಗಳ ಕಾಮಾದಿಗಳನ್ನು ತೃಪ್ತಿಪಡಿಸಲಿಕ್ಕೆ ಗುತ್ತಿಗೆ ಹಿಡಿದಿದ್ದೇವೆ. ನಮ್ಮ ಕಾಮಾದಿಗಳನ್ನೇ ತೃಪ್ತಿಪಡಿಸಿಕೊಳ್ಳುವದು ಸಾಧ್ಯವಾಗಿಲ್ಲ. ನಮ್ಮ ಕಾಮವನ್ನು ನಾವು ಗೆದೆಯಬೇಕು. ಇದು ಅತಿ ಕಠಿಣವು.



ಸಜ್ಜನರ ಸಂಗದಲ್ಲಿರಬೇಕು. ಬಡವರಿದ್ದರೂ ಕೂಲಿ ಮಾಡಿಕೊಂಡು ಹೊಟ್ಟೆ ತುಂಬಿಕೊಳ್ಳುವವರಿದ್ದರೂ ಅವರೊಡನೆ ಸಂಗವನ್ನು ಅಥವಾ ಸಂಬಂಧ (ವ್ಯವಹಾರಿಕ) ವನ್ನು ಬೆಳೆಸಬೇಕು. ಶ್ರೀಮಂತರಿದ್ದರೂ ವಿಷಯೀ ಜನರೊಡನೆ ಸಂಗ ಮತ್ತು ಸಂಬಂಧವನ್ನು ಬೆಳೆಸಬಾರದು.

* * * *

## 13-4-1978 ರ ಸಂಜೆ

ದೇವರೆಂದರೆ ಅರಿವು, ಇರುವು, ಆನಂದವು. ಅದು ಉಪಾಧಿರಹಿತವು. ಸಚ್ಚಿದಾನಂದ ಸ್ವರೂಪಕ್ಕೆ ಇಚ್ಛೆಯೆಲ್ಲಿ! ಈಗಿನ ಮದುವೆಯ ಸಂಬಂಧವು ಇಂದ್ರಿಯಭೋಗಕ್ಕಾಗಿ ಮತ್ತು ಶರೀರ ಪಾಲನೆ ಪೋಷಣೆಗಾಗಿಯೇ ನಡೆದಿದೆ. ಇದು ಏನೂ ಪ್ರಯೋಜನವಿಲ್ಲ. ಬೆಂಕಿಯ ಧರ್ಮ ಸುಡುವಿಕೆಯು. ಅದರಂತೆ ತನ್ನ ಧರ್ಮವು ಸಚ್ಚಿದಾನಂದವು. ಸಚ್ಚಿದಾನಂದವನ್ನು ಹೊಂದಲಿಕ್ಕೆ ಪರಸ್ಪರ ಸಹಾಯವಾಗತಕ್ಕಂಥವರು ಧರ್ಮಪತ್ನಿ ಅಥವಾ ಧರ್ಮಪತಿ, ಸಹಧರ್ಮಿಣಿ ಅಥವಾ ಸಹಧರ್ಮಿ ಎಂದು ವೈವಾಹಿಕ ಸಂಬಂಧವನ್ನು ಇಟ್ಟುಕೊಳ್ಳಲಾಗಿದೆ. ಪತಿ-ಪತ್ನಿಯರು ಒಬ್ಬರಿಗೊಬ್ಬರು ಸ್ವರೂಪವನ್ನು ಹೊಂದುವದಕ್ಕಾಗಿ ಸಹಾಯಕರಾಗಬೇಕು.

ಅವರವರ ಕರ್ಮಕ್ಕನುಗುಣವಾಗಿ ಕೆಲವರಿಗೆ ಮಾತ್ರ ಪಿಶಾಚಿಗಳು ಪೀಡೆಯನ್ನು ಕೊಡುವವು.

ನಾವು ಉಳಿದವರು ನಮ್ಮ ಕೂಡ ಹೇಗೆ ನಡೆದುಕೊಳ್ಳಬೇಕೆಂದು ಬಯುಸುವೆವೋ ಆ ರೀತಿಯಾಗಿ ನಾವೂ ಉಳಿದವರ ಕೂಡ ವರ್ತಿಸಬೇಕು. ವಿಚಾರವಿಲ್ಲದವರು ಏನಾದರೂ ತಪ್ಪು ಮಾಡಿದರೆ ತಾಳಿಕೊಳ್ಳಬೇಕು. ಇದರಿಂದ ತಪ್ಪು ಮಾಡಿದವರಿಗೆ ತಿಳುವಳಿಕೆಯುಂಟಾಗುವದು. ವಿಷಯಗಳನ್ನು ಪಡೆಯುವ ಸಾಮರ್ಥ್ಯವಿದ್ದರೂ ಆಸಕ್ತಿ ಇರಬಾರದು. ಹೆಂಡತಿಯು ವಿಹಿತವಾದ ವ್ಯವಹಾರದಿಂದ ನಡೆದುಕೊಂಡರೆ ಅವಳನ್ನು ಬಿಡಬೇಕಾಗಿಲ್ಲ. ಹೆಂಡತಿಯು ನಿಷಿದ್ಧವಾದ ವ್ಯವಹಾರವನ್ನು ನಡೆಸಿದರೆ ಮತ್ತು ಸ್ವರೂಪ ಸಾಧನೆಗೆ ಪ್ರತಿಕೂಲವಾದರೆ ಅವಳನ್ನು ಬಿಡಬಹುದು. ಅದರಂತೆ ಗಂಡಸು ನಿಷಿದ್ಧ ವ್ಯವಹಾರ ನಡೆಸಿದರೆ ಮತ್ತು ಸ್ವರೂಪ ಸಾಧನೆಗೆ ಪ್ರತಿಕೂಲವಾದರೆ ಹೆಂಡತಿಯು ಗಂಡನನ್ನು ಬಿಡಬಹುದು. ಹೊರಗಿನ

ವ್ಯವಹಾರ ಪ್ರಾರಬ್ಧ ಪ್ರಕಾರ ನಡೆಯಲಿ. ಒಳಗೆ ಮನಸ್ಸಿನಲ್ಲಿರುವ ವಿಷಯಾಸಕ್ತಿಯನ್ನು ಬಿಟ್ಟು ತುರ್ಯವನ್ನು ಹೊಂದಬೇಕಾಗಿದೆ. ಹೊರಗೆ ವಿಷಯಗಳನ್ನು ಬಿಟ್ಟರೂ ಅಷ್ಟೇ, ಬಿಡದಿದ್ದರೂ ಅಷ್ಟೇ.

* * * *

## 14-4-1978 ರ ಮುಂಜಾನೆ

ವ್ಯವಹಾರವು ಹೆಚ್ಚಾದಷ್ಟು ದುಃಖಕರವು. ಪಾರಮಾರ್ಥವು ಅತಿ ಹೆಚ್ಚಾದಷ್ಟು ಸುಖಕರವು. ಆದ್ದರಿಂದ ಸಾಧ್ಯವಾದಷ್ಟು ವ್ಯವಹಾರವನ್ನು ಕಡಿಮೆಮಾಡಿ ಪಾರಮಾರ್ಥವನ್ನು ಹೆಚ್ಚಾಗಿ ರೂಢಿಸಿಕೊಳ್ಳಬೇಕು.

ಕಚ್ಚಾ ಆಹಾರವು ಆರೋಗ್ಯಕ್ಕೆ ಅತಿ ಒಳ್ಳೆಯದು. ಹಣ್ಣು, ಕಾಯಿಗಳನ್ನು ಸೇವಿಸುವದರಿಂದ ಶರೀರವು ಅತಿ ಸದೃಢವಾಗಿರುವದು. ಶರೀರಕ್ಕೆ ಬೇಕಾಗುವಷ್ಟು ಖಾರ, ಉಪ್ಪು ಮಸಾಲೆ ಇವು ಕಚ್ಚಾ ಪದಾರ್ಥಗಳಲ್ಲಿ ಇದ್ದೇ ಇರುತ್ತವೆ. ಗಾಳಿ ಬಿಸಿಲಿಗೆ ಪಕ್ವವಾದಂಥ ಹಣ್ಣುಗಳನ್ನು ಸೇವಿಸಬೇಕು. ಕಾಳು-ಬೇಳೆ ತಿನ್ನುವದಕ್ಕಿಂತಲೂ ಕಾಯಿಪಲ್ಲೆ ಸೇವಿಸುವದು ಒಳ್ಳೆಯದು. ಆಹಾರ ಪದಾರ್ಥಗಳನ್ನು ಕುದಿಸುವದರಿಂದ ಆಹಾರದಲ್ಲಿರುವ ಕೆಲವಂಶವು ನಾಶವಾಗುವದು. ಆದರೆ ಹುರಿಯುವದರಿಂದ ಮತ್ತು ಕರಿಯುವದರಿಂದ ಆಹಾರದಲ್ಲಿರುವ ಎಲ್ಲ ಸತ್ವಗಳು ನಾಶವಾಗುವವು. ಕೇವಲ ನಾಲಿಗೆ ರುಚಿ ಮಾತ್ರ ಉಳಿಯುವದು. ಶೆರೆಯ ಸೇವನೆಯಿಂದ ಶರೀರ ಹಾಳು, ರೊಕ್ಕ ಹಾಳು, ಹೀನಸಂಸ್ಕಾರ ಹೆಚ್ಚಾಗುವದು, ವ್ಯವಹಾರ ಕೆಡುವದು. ಹೋಟೆಲ್ಲುಗಳಿಂದ ಅಂಟುರೋಗಗಳು ಬರುವವು. ಹೋಟೆಲ್ಲುಗಳು ರೋಗದ ಕಾರ್ಖಾನೆಗಳಾಗಿವೆ. ಗಿರಣಿಯಲ್ಲಿ ಬೀಸುವದರಿಂದ ಕಾಳಿನಲ್ಲಿಯ ಸತ್ವವೆಲ್ಲವು ಮಾಯವಾಗುವದು. ವ್ಯಭಿಚಾರದಿಂದ ಅಥವಾ ವ್ಯಭಿಚಾರಿ ಗಂಡ ಅಥವಾ ಹೆಂಡತಿಯ ಭೋಗದಿಂದ ಅನೇಕ ಚರ್ಮರೋಗಗಳು ಬರುವವು.

ವಿಷಯಮದಿರೆಯು ನಮ್ಮ ಬುದ್ಧಿಯನ್ನು ಕೆಡಿಸುವದು. ಈಗ ನಮ್ಮ ಬುದ್ಧಿಯು ವಿಷಯ, ಮದ, ಕಾಮಗಳಿಂದ ಅಂಧವಾಗಿದೆ. ಆದ್ದರಿಂದ ನಮ್ಮ ಸ್ವರೂಪವು .ಆನಂದಮಯವು ಎಂಬುದು ತಿಳಿಯದಾಗಿದೆ. ಒಂದು ಕಡೆಗೆ ಕುಳಿತುಕೊಂಡು ಸುಖದ ಸೂತ್ರಗಳನ್ನು ಮನನ ಮಾಡಬೇಕು. ವಿಷಯವಿರಲಿ, ಇಲ್ಲದೇ ಇರಲಿ, ಮನಸ್ಸು ಚಂಚಲವಾದಾಗ ದುಃಖವುಂಟಾಗುವದು. ಮನಸ್ಸು



ಚಂಚಲವಾದಾಗ ಸ್ವರೂಪಾನಂದವು ಪ್ರತಿಬಿಂಬಿಸುವದಿಲ್ಲವಾದ್ದರಿಂದ ಆನಂದವು ಅನುಭವಕ್ಕೆ ಬರುವದಿಲ್ಲ. ವಿಷಯವಿರಲಿ, ಇಲ್ಲದೆ ಇರಲಿ ಮನಸ್ಸು ನಿಶ್ಚಲವಾದಾಗ ಸ್ವರೂಪಾನಂದವು ಪ್ರತಿಬಿಂಬಿಸಿ ಆನಂದದ ಅನುಭವವಾಗುವದು. ರಾಗದ ವಿಷಯವು ಸಿಕ್ಕರೆ ಮನಸ್ಸು ನಿಶ್ಚಲವಾಗಿ ಆನಂದವು ಅನುಭವಕ್ಕೆ ಬರುವದು. ನಿದ್ರೆಯಲ್ಲಿ ಮನಸ್ಸು ಅಡಗಿದಾಗ ಸ್ವರೂಪಾನಂದವೇ ಅನುಭವಕ್ಕೆ ಬರುವದು. ಯಾವುದೇ ಉಪಾಧಿಯ ಮೂಲಕ ಆನಂದವು ಅನುಭವಕ್ಕೆ ಬಂದರೂ ಅದು ತನ್ನ ಸ್ವರೂಪದ್ದೇ. ಈ ತಿಳುವಳಿಕೆ ಇದ್ದವನಿಗೆ ನಿದ್ರೆಯ ಅವಶ್ಯಕತೆ ಇಲ್ಲ. ಧ್ಯಾನವೆಂದರೆ ಆನಂದವೇ ತಾನು ಎಂಬ ತಿಳುವಳಿಕೆಯು. ಸ್ತ್ರೀ-ಪುರುಷರ ಭೋಗ ನಡೆದಾಗ ಕೂಡ ಧ್ಯಾನ ಮಾಡಲು ಬರುವದು.

ನಾವು ಅಳಲಿಕ್ಕೆ ಪ್ರಾರಂಭಿಸಿದರೆ ಜಗತ್ತು ನಮ್ಮನ್ನು ಮತ್ತಷ್ಟು ಅಳಲಿಕ್ಕೆ ಹಚ್ಚುವದು. ತಿರುಗಿ ನಿಂತರೆ ಜಗತ್ತು ಓಡಿ ಹೋಗುವದು. ಜಗತ್ತು ನಿನ್ನ ಪಾದದ ಮೇಲೆ ಬಿದ್ದು ಉರುಳಾಡುವದು. ನಿದ್ರೆಯು ಹೊರತು ವೇಳೆಯನ್ನು ಆತ್ಮಾನುಸಂಧಾನದಲ್ಲಿಯೇ ಕಳೆಯಬೇಕು.

ಅತಿ ಕಾಮುಕ ವ್ಯವಹಾರ ನಡೆದಾಗ ಉಸಿರಾಟವು ಅತಿ ತೀವ್ರವಾಗುವದು. ಇದರಿಂದ ಆಯುಷ್ಯವು ಕಡಿಮೆಯಾಗುವದು. ದೀರ್ಘ ಶ್ವಾಸೋಚ್ಛ್ವಾಸದಿಂದ ಆಯುಷ್ಯವು ಹೆಚ್ಚಾಗುವದು. ಸತತ ಪ್ರಾಣಾಯಾಮದಿಂದ ದೀರ್ಘಾಯುಷಿಯಾಗಲು ಬರುವದು. ಆದರೆ ಸ್ವರೂಪಜ್ಞಾನ ಪಡೆಯದೆ ಎಷ್ಟು ವರ್ಷ ಜೀವಿಸಿದರೇನು ಪ್ರಯೋಜನ?

* * * *

## 14-4-1978 ರ ಸಂಜೆ

ಸುಖ ವಜಾ ಹಾಕಿ ಯಾವದಾದರೂ ವಸ್ತುವಿನ ಮೇಲೆ ಪ್ರೀತಿಯನ್ನು ಯಾರಾದರೂ ಇಡುವರೇ? ಎಲ್ಲವನ್ನು ವಜಾ ಹಾಕಿ ಸುಖದ ಮೇಲೆ ಪ್ರೀತಿಯನ್ನಿಡುವೆವು. ಆದ್ದರಿಂದ ಎಲ್ಲಕ್ಕಿಂತ ಹೆಚ್ಚಿನ ಪ್ರೇಮ ಸುಖದ ಮೇಲೆಯೇ ಇರುವದು. ಶಾಂತವಾಗಿ ವಿಚಾರ ಮಾಡಿರಿ. ತೋರಿ ಅಡಗುವ ವಸ್ತುವಿನ ಸಲುವಾಗಿ ಇಡೀ ಜನ್ಮವನ್ನೇ ಕಳೆಯುತ್ತೇವೆ. ಸುಖದ ಸಲುವಾಗಿ ಜಗತ್ತಿನಲ್ಲಿ ಯಾವ ಯುದ್ಧವೂ ನಡೆದಿಲ್ಲ. ಒಬ್ಬರ ಸುಖವನ್ನು ಮತ್ತೊಬ್ಬರು ಕಸಿದುಕೊಳ್ಳುವದಕ್ಕಾಗಿ ಯುದ್ಧಗಳು ನಡೆದಿಲ್ಲ. ಆದರೆ ಒಬ್ಬರು ಮತ್ತೊಬ್ಬರ ವಸ್ತುಗಳನ್ನು ಕಸಿದುಕೊಳ್ಳುವದಕ್ಕಾಗಿಯೇ

ಯುದ್ಧಗಳು ನಡೆದಿವೆ. ಯುದ್ಧದಲ್ಲಿ ಶರೀರಗಳು ಹೋಗಿ ವಸ್ತುಗಳು ಹಿಂದೆ ಉಳಿಯುವವು.

ದಿನಾಲು ಜಾಗ್ರದ ದಣಿಯುವಿಕೆ, ನಿದ್ರೆಯ ವಿಶ್ರಾಂತಿ, ಮತ್ತೆ ಜಾಗ್ರದ ದಣಿಯುವಿಕೆ, ಹೀಗೆಯೇ ನಡೆದಿದೆ. ಜಾಗ್ರದಿಂದ ದಿನಾಲು ದಣಿದರೂ ಜಾಗ್ರದ ವ್ಯವಹಾರವು ಸಾಕಾಗಿಲ್ಲ. ಜಾಗ್ರದ ವ್ಯವಹಾರವೆಲ್ಲವೂ ನಿಜವಾಗಿ ಸಾಕಾದಾಗ ಸುಖವನ್ನು ಹುಡುಕುವದು ಪ್ರಾರಂಭವಾಗುವದು. ದೃಶ್ಯವು ಜಡ, ಪರಿಣಾಮಿ ಮತ್ತು ದುಃಖದಾಯಕವು. ವಿಷಯಾಲಂಬ ಬುದ್ಧಿಯವರಿಗೆ ವೇದಾಂತವು ತಿಳಿಯುವದಿಲ್ಲ. ಅದು ಸಾಕು, ಇದು ಬೇಕು ಎಂಬುದು ಎಲ್ಲಿಯವರೆಗೆ ಇರುವದೋ ಅಲ್ಲಿಯವರೆಗೆ, ವೇದಾಂತವು ತಿಳಿಯುವದಿಲ್ಲ.

ಮಾನವನಿಗೆ ತನ್ನ ಸ್ವರೂಪದ ಪೂರ್ಣ ಮರವೆ ಆಗಿಲ್ಲ. ಪೂರ್ಣ ಮರವೆಯಾಗಿದ್ದರೆ ಮತ್ತೆ ನೆನಪಿಗೆ ತಂದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ತನ್ನ ಸ್ವರೂಪವು ಮರೆತಂತೆ ಆಗಿದೆ (ಸ್ವರೂಪದ ನೆನಪು ಮಾಜಿ ಹೋಗಿದೆ) ಆದ್ದರಿಂದ ಅದನ್ನು ತಿರುಗಿ ನೆನಪಿಗೆ ತೆಗೆದುಕೊಳ್ಳಲು ಬರುತ್ತದೆ. ಮನೆಯಲ್ಲಿ ಬಹಳ ಸಾಮಾನುಗಳಿರುವದರಿಂದ ಬಯಲು ಇಲ್ಲದಂತೆ ಅನಿಸಿದೆ. ಆದರೆ ಬಯಲು ಇದ್ದೇ ಇದೆ.

ಸುಖವು ತೋರುತ್ತದೆ, ಉಳಿದಿಲ್ಲ. ಸುಖದ ಬೇಡಿಕೆ ಇದೆ ಎಂದರೆ ಸುಖವು ಸಿಕ್ಕಿಲ್ಲವೆಂದರ್ಥ. ಸುಖ ಹೊಂದಿದ ಮೇಲೆ ಸುಖ ಪಡೆಯುವ ಆಶೆಯು ಉಳಿಯುವದಿಲ್ಲ. ನಿದ್ರೆ ಹತ್ತಿದಾಗ ನಿದ್ರೆಯನ್ನು ಹೊಂದಬೇಕೆಂಬ ಆಶೆ ಇರುವದೇ? ಇಲ್ಲ.

ಕರುಣಾದೃಷ್ಟಿಯಿಂದ ಮಹಾತ್ಮರು ಸುಖದ ದಾರಿಯನ್ನು ತಿಳಿಸಿದ್ದಾರೆ. ಯಾರಿಗೆ ಆ ದಾರಿಯು ಬೇಕಾಗಿರುವದೋ ಅವರು ಅದನ್ನು ಪಡೆಯುವರು. ಎಲ್ಲ ರೀತಿಯಿಂದ ಮಹಾತ್ಮರು ಸುಖದ ದಾರಿಯನ್ನು ತಿಳಿಸಿ ಹೇಳುವರು. (ಮೆದು ನುಡಿಯಿಂದ, ವಿಷಯಗಳನ್ನು ಪೂರೈಸಿ, ಬೈದು, ಹೊಡೆದು, ಬೇಡಿ ಹಾಕಿ) ಆದರೂ ಕೇಳದಿದ್ದರೆ ಕಡೆಗೆ ಕೈ ಬಿಡುವರು. ಮಹಾತ್ಮರು ಸುಖಹೊಂದುವ ಕ್ರಮವನ್ನು ತಿಳಿಸುವರು. ಆದರೆ ಸುಖವನ್ನು ಹೊಂದುವವರು ನಾವೇ. ಎಷ್ಟು ದುಃಖವಾದರೂ ಇದು ದುಃಖಮಯವೆಂಬುದು ತಿಳಿದಿಲ್ಲ. ದುಃಖಮಯವೆಂಬುದು ಹೊಳೆದಾಗ ಸ್ವರೂಪವನ್ನು ತಿಳಿದುಕೊಳ್ಳಲು ಸಾಧ್ಯವಾಗುವದು.



ಶಾಶ್ವತ ಸುಖವನ್ನು ಪಡೆಯುವದಕ್ಕಾಗಿ ಬ್ರಹ್ಮನಿಷ್ಠರನ್ನು ಹುಡುಕಿರಿ. ನಿಮ್ಮ ಪುಣ್ಯದ ಜೋರಿದ್ದರೆ ಅವರು ಸಿಗಬಹುದು. ಅವರು ದೊರೆತರೂ ಏನನ್ನೂ ಹೇಳಲಿಕ್ಕಿಲ್ಲ. ಬ್ರಹ್ಮನಿಷ್ಠರು ತಾವು ಬ್ರಹ್ಮನಿಷ್ಠರೆಂದು ಹೇಳುವರೇ? ಸುಖಿಯಾದವನು ಸುಖದ ಬೋರ್ಡು ಹಚ್ಚಿರುವನೇ? ಪುಣ್ಯದ ಜೋರು ಇದ್ದರೆ ನೀವು ಇದ್ದಲ್ಲಿಯೇ ಬಂದು ಬ್ರಹ್ಮನಿಷ್ಠರು ಬೋಧ ಮಾಡುವರು. ಬೋಧ ಮಾಡಿದರೂ ಅದನ್ನು ಉಪಯೋಗಿಸಿಕೊಳ್ಳುವದು ನಿಮಗೆ ಸಾಧ್ಯವಾಗಲಿಕ್ಕಿಲ್ಲ.

ವಿಷಯಗಳನ್ನು ದೊರಕಿಸುವದು, ಅವುಗಳ ರಕ್ಷಣೆಯನ್ನು ಮಾಡುವದು ಎಲ್ಲವೂ ದುಃಖವೇ. ವಿಷಯಗಳು ಸವೆಯುವವು. ಭೋಗಿಸುವಾಗ ಅಣುಮಾತ್ರ ಸುಖ ತೋರುವದು.

* * * *

### 15-4-1978 ರ ಮುಂಜಾನೆ

ಗದ್ದುಗೆ ಕಟ್ಟುವದರಿಂದ ಏನೂ ಪ್ರಯೋಜನವಿಲ್ಲ. ನಾಸೀಕರ ಬುವಾನ ಗದ್ದುಗೆ ಹೊಳೆಯಲ್ಲಿ ಹರಿದು ಹೋಯಿತು. ಎಲುಬುಗಳ ಮೇಲೆ ಗದ್ದುಗೆ ಕಟ್ಟಿದರೆ ಏನು ಪ್ರಯೋಜನ? ಗದ್ದುಗೆ ಕಟ್ಟುವದು ಹೊಟ್ಟೆಯನ್ನು ಹೊರೆದುಕೊಳ್ಳುವ ದಾರಿಯಷ್ಟೇ.

ಹಿಂದಿನ ಸ್ವರೂಪ ವಿಚಾರದ ದುಡಿಕೆ ಇಲ್ಲದ್ದರಿಂದಲೇ ವಾಸನೆಗಳು ಶಿಥಿಲವಾಗಿಲ್ಲ. ಈಗಾದರೂ ಜಡಬುದ್ಧಿ, ಜಡಜನರ ಸಂಗ ಬಿಟ್ಟಿಲ್ಲ ಎಂದ ಮೇಲೆ ತತ್ತ್ವವು ಹೇಗೆ ತಿಳಿಯುವದು?

ನಾವು ಮಾಡಿದ ಕರ್ಮದ ಫಲವನ್ನು ಉಣ್ಣಲೇಬೇಕು. ಸೇಡು ತೀರಿಸಿಕೊಳ್ಳುವವರೆಗೆ ಹರಿ-ಹರ ಬ್ರಹ್ಮಾದಿಗಳು ನಮ್ಮನ್ನು ಕರ್ಮಫಲದಿಂದ ಬಿಡಿಸಲಾರರು. ಕಡು ಲೋಭವುಳ್ಳವರು ಪಿಶಾಚಿಗಳಾಗುವರು.

ಬ್ರಹ್ಮನಿಷ್ಠರ ಸಂಗದಲ್ಲಿದ್ದರೂ ದೀರ್ಘಕಾಲದ ಪ್ರಯತ್ನದಿಂದ ಸ್ವರೂಪಾನುಭವವನ್ನು ಹೊಂದಲು ಸಾಧ್ಯವಾಗುವದು. ಅಂದಮೇಲೆ ಜಡಬುದ್ಧಿ, ಜಡಜನರ ಸಂಗವಿರಲು ಸ್ವರೂಪಾನುಭವವನ್ನು ಹೊಂದುವದು ಸಾಧ್ಯವಿದೆಯೇ?

ಅಜ್ಞಾನವನ್ನು ಕಳೆದುಕೊಳ್ಳುವದು ಅತಿ ದುಸ್ತರವಿದೆ. ಅಜ್ಞಾನವು ತಿಳಿಯದಂತೆ ನಮ್ಮ ಹೃದಯಾಂತರಾಳದಲ್ಲಿ ಕೂತಿದೆ. ಸತ್ವಪ್ರಧಾನ ಮನಸ್ಸಿನಿಂದ ಆನಂದವು ಅನುಭವಕ್ಕೆ ಬರುವದು.

* * * *

## 16-4-1978 ರ ಸಂಜೆ

ಮನಸ್ಸು ತಾನೇ ರಾಗ-ದ್ವೇಷಗಳನ್ನು ಕಲ್ಪಿಸಿಕೊಂಡಿದೆ. ಮನಸ್ಸು ತಾನೇ ಪರಿಶೀಲನೆ ಮಾಡಬೇಕಾಗಿದೆ. ತಾನೇ ರಾಗ-ದ್ವೇಷಗಳನ್ನು ಕೈ ಬಿಡಬೇಕಾಗಿದೆ. ಬರೇ ದಿನಾಲು ಶಾಸ್ತ್ರವನ್ನು ಕೇಳುತ್ತಿದ್ದರೆ ಶಾಸ್ತ್ರದ ಪ್ರಯೋಜನವಾಗುವದಿಲ್ಲ. ದಿನಾಲು ಶಾಸ್ತ್ರ ಕೇಳಿ ಸ್ವತಃ ವಿಚಾರ ಮಾಡಿದರೆ ಶಾಸ್ತ್ರವು ತಿಳಿಯುವದು. ಎಲ್ಲಿಯೋ ಒಬ್ಬರು ಶಾಸ್ತ್ರದ ಬಗ್ಗೆ ವಿಚಾರವನ್ನು ಮಾಡುವವರು. ಇವರಲ್ಲಿ ಎಲ್ಲಿಯೋ ಒಬ್ಬರು ಸ್ವರೂಪವನ್ನು ತಿಳಿಯುವರು.

ಸುಖದ ಬೇಡಿಕೆ ಇರಬೇಕಾದರೆ ಸುಖದ ಗುರುತು ಇರಲಿಕ್ಕೇ ಬೇಕು. ಸುಖದ ಗುರುತು ಯಾವಾಗ ಮಾಡಿಕೊಂಡಿ? ಪ್ರಥಮಾನುಭೂತಿಯಲ್ಲಿ ನಿದ್ರೆಯು ನಿಮ್ಮೊಳಗೋ ಹೊರಗೋ? ನಿಮ್ಮೊಳಗೇ. ನೀವು ಎಂದರೆ ಯಾರು? ಹೀಗೆ ಸರಳವಾಗಿ ವಿಚಾರ ಮಾಡುತ್ತ ಹೋದರೆ ತಮಗೆ ಬೇಕಾದ ಸುಖವು ಸಿಗುವದು. (Direct method is Upanishadic method)ಸುಖದ ಗುರುತು ಏಕೆ ಬೇಕಾಗಿದೆ? ಏಕೆಂದರೆ ಸುಖದ ಮರೆವು ಆಗಿದೆ. ಸುಖದ ಬಗ್ಗೆ ಇರುವ ಮರವೆಯನ್ನು ಕಳೆದುಕೊಳ್ಳಬೇಕು. ಸ್ವತಃ ವಿಚಾರ ಮಾಡಿದರೆ ಋಷಿಗಳು ಹೇಳಿದ ವಿಚಾರಕ್ಕೇ ನಾವೂ ಬರುತ್ತೇವೆ. ಆನಂದದ ಸ್ಥಿತಿಗತಿಯನ್ನು ಮರೆತು, ಆನಂದವು ಸಿಗದಿದ್ದಲ್ಲಿ ಆನಂದವನ್ನು ಹುಡುಕುತ್ತಿದ್ದೇವೆ. ತಾನೇ ಆನಂದವು, ಅದು ಅನುಭವಗಮ್ಯವು.

* * * *

## 17-4-1978 ರ ಮುಂಜಾನೆ

ಸಂಕಲ್ಪ-ವಿಕಲ್ಪಾತ್ಮಕವಾದ ಮನಸ್ಸಿನ ದುಡಿಕೆ ದಣಿವನ್ನೇ (ದುಃಖವನ್ನೇ) ಹೊಂದುವದು. ಮನಸ್ಸನ್ನು ಸಂಕಲ್ಪ-ವಿಕಲ್ಪಗಳಿಂದ ಖಾಲಿ ಮಾಡಿಕೊಳ್ಳಬೇಕೆನ್ನುವದರೊಳಗೆ ಮನಸ್ಸು ಸಂಕಲ್ಪ-ವಿಕಲ್ಪಗಳಿಂದ ತುಂಬಿಕೊಂಡು ಹರಿದು ಹುಚ್ಚು



ಹಿಡಿಯುವದು. ಶರೀರವನ್ನು ಬಿಡುವವರೆಗೆ ಮನಸ್ಸು ಸಂಕಲ್ಪ-ವಿಕಲ್ಪಗಳಿಂದ ತುಂಬುತ್ತಲೇ ಹೋಗುವದು. ದೇಹಬಿಡುವಾಗ ಮನಸ್ಸು ಸಂಕಲ್ಪ-ವಿಕಲ್ಪಗಳನ್ನು ತುಂಬಿಕೊಂಡೇ ಅಡಗುವದು. ಮನಸ್ಸು ವಿಷಯಗಳಿಂದ ಸುಖವು ಸಿಗುತ್ತದೆ ಎಂಬ ಭ್ರಾಂತಿಯಿಂದ ಸಂಕಲ್ಪ-ವಿಕಲ್ಪಗಳನ್ನು ತುಂಬಿಕೊಳ್ಳುತ್ತಲೇ ಇರುವದು. ಸಣ್ಣ ಕೂಸು ಮೊದಲು ಸಪ್ಪನ್ನ ಹಾಲು ಕುಡಿಯುತ್ತಿತ್ತು, ಸುಖವಾಗಿತ್ತು. ನಂತರ ನಾಲಿಗೆಯ ರುಚಿಯನ್ನು ಕಲಿಯಿತು. ಆ ಕಲಿತ ನಾಲಿಗೆಯ ರುಚಿಯನ್ನು ಬಿಡುವದು ಅತಿ ಕಠಿಣವಾಗಿದೆ. ನಾಲಿಗೆಯ ಚಟವೊಂದನ್ನೇ ಬಿಡುವದು ಅತಿ ಕಠಿಣವಿದ್ದಾಗ, ಎಲ್ಲ ಇಂದ್ರಿಯಗಳ ಚಟಗಳನ್ನು ಬಿಡುವದೂ ಅತಿ ಕಠಿಣವಾಗಿದೆ. ಅದರಂತೆ ಜನ್ಮ-ಜನ್ಮಾಂತರದ ಚಟಗಳನ್ನು ಬಿಡುವದೂ ಕಠಿಣವಾಗಿದೆ. ಯಾವಾಗಲೂ ವಾಸನೆಗಳನ್ನು ವಿಚಾರದಿಂದ ಖಾಲಿ ಮಾಡುತ್ತ ಹೋದರೆ ಮಾತ್ರ ಮನಸ್ಸನ್ನು ಖಾಲಿ ಮಾಡಲು ಬರುವದು. ಸೌಂದರ್ಯವನ್ನು ಎಷ್ಟು ಹೊತ್ತಿನವರೆಗೆ ನೋಡಲು ಸಾಧ್ಯ? ಕೂಡಲೆ ಸೌಂದರ್ಯವು ಮನಸ್ಸಿಗೆ ಬೇಸರವಾಗುವದು. ಈ ರೀತಿಯಾಗಿ ಸಾಧಕನು ವಿಚಾರ ಮಾಡುತ್ತ ಕಲಿತಿದ್ದ ವಾಸನೆಗಳನ್ನೂ, ಕಲಿಯುತ್ತಿರುವ ವಾಸನೆಗಳನ್ನೂ ಬಿಡುತ್ತ ಹೋಗುತ್ತಿರುವನು. ಬಾಹ್ಯ ವ್ಯವಹಾರವು ನಡೆಯುವಾಗಲೇ ವಾಸನೆಗಳನ್ನು ನಾಶಮಾಡಿದಾಗ ಮಾತ್ರ ಸಾಧನೆಯು ಮುಂದುವರಿಯುವದು. ಇದರಿಂದ ವೃತ್ತಿಯು ಹಿಂದೆ ಸರಿದು ಆನಂದದಲ್ಲಿ ಪರವಶವಾಗುವದು. ವಿಷಯಗಳು ಬೇಸರವಾಗುವವು. ಆದರೆ ಸುಖವು ಬೇಸರವಾಗುವದಿಲ್ಲ. ಮನಸ್ಸು ವಿಷಯಗಳ ಕಡೆಗೆ ಹೋದಾಗಲೆಲ್ಲಾ ಮನಸ್ಸಿಗೆ ಗೊತ್ತಾಗದೇ ಬೇಸರವಾಗುವದು. ವಿಷಯಗಳ ಮೋಹವು ನಮ್ಮನ್ನು ವಿಷಯಗಳ ಕಡೆಗೆ ಸೆಳೆದುಕೊಂಡು ಹೋಗುವದು. ಈ ಮೋಹದ ಸೆಳುವಿಗೆ ಸಿಗುವದಕ್ಕಿಂತ ಮುಂಚೆಯೇ ನಾವು ಮನಸ್ಸನ್ನು ವಿಷಯಾದಿಗಳಿಂದ ಹಿಂದೆ ಸರಿಸಬೇಕು. ಮೇಲ್ಮನಸ್ಸಿನಿಂದ ಕೆಳ ಮನಸ್ಸಿಗೆ ಬುದ್ಧಿ ಹೇಳಬೇಕು.

* * * *

## 17-4-1978 ರ ಸಂಜೆ

ಇಡೀ ವಿಶ್ವವೇ ವಿರುದ್ಧವಾದರೂ ಬ್ರಹ್ಮನಿಷ್ಠರು ಸತ್ಯವನ್ನು ಕೈ ಬಿಡುವದಿಲ್ಲ. ಏಕೆಂದರೆ ಅವರು ಸತ್ಯವನ್ನೇ ಅವಲಂಬಿಸಿದ್ದಾರೆ ಮತ್ತು ಸತ್ಯವೇ ಇರುತ್ತಾರೆ. ಮೃಗಜಲದ ಹೊಳೆಯು ಬೇಕಾದಷ್ಟು ಹರಿದರೂ ಅದು ಭೂಮಿಯನ್ನು ತೋಯಿಸಲಾರದು. ಇದರಂತೆ ಅಸದ್ರೂಪವಾದುದು ಸದ್ರೂಪಕ್ಕೆ ಯಾವ ಬಾಧೆಯನ್ನೂ

ಮಾಡಲಾರದು. ಆದ್ದರಿಂದ ನಾವು ಸತ್ಯಕ್ಕಾಗಿ ಜೀವಿಸಬೇಕು. ಆದರೆ ನಾವು ಅಸತ್ಯಕ್ಕಾಗಿ ಬಡಿದಾಡುತ್ತಿದ್ದೇವೆ. ಯಾವಾಗಲೂ ಆತ್ಮನ ಸುದ್ದಿ ಮಾತನಾಡಬೇಕು, ಹೊರತಾಗಿ ಅನಾತ್ಮದ ಬಗ್ಗೆ ಮಾತನಾಡಬಾರದು. ಸದ್ವಸ್ತುವಿನ ಕುರಿತು ಸ್ವಲ್ಪಾದರೂ ವಿಚಾರವು ಶಾಂತಿಯನ್ನು ಕೊಡುವದು. ಅಸದ್ವಸ್ತುವಿನ ಬಗೆಗೆ ಹೆಚ್ಚೆಚ್ಚು ವಿಚಾರಮಾಡಿದ ಹಾಗೆ ಹೆಚ್ಚೆಚ್ಚು ದುಃಖವು ಪ್ರಾಪ್ತವಾಗುವದು.

ಆಗುವದು ಆಗಲಿ ಹೋಗುವದು ಹೋಗಲಿ ಎಂದಾಗ ಸುಖವಿರುವದು.

ಶರೀರವು ಕ್ಷಣ-ಕ್ಷಣಕ್ಕೆ ಬದಲಾವಣೆಯನ್ನು ಹೊಂದುತ್ತಿರುವದು. ಅದರಂತೆ ಬುದ್ಧಿಯೂ ಕ್ಷಣ-ಕ್ಷಣಕ್ಕೆ ಬದಲಾವಣೆಯನ್ನು ಹೊಂದುತ್ತಿರುವದು. ಆದರೆ ಚಿದಾಭಾಸ ಚೈತನ್ಯವು ಇದ್ದಕ್ಕಿದ್ದಂತಿದೆ. ಅದು ಉಪಾಧಿಯಿಂದ ಬದಲಾವಣೆ ಹೊಂದಿದಂತೆ ತೋರುವದು. ಆದರೆ ಬದಲಾವಣೆ ಹೊಂದುವದಿಲ್ಲ.

ವ್ಯವಹಾರದಲ್ಲಿ ಏನು ಮಾಡಿದರೂ ಸ್ವತಂತ್ರವಿರಲು ಸಾಧ್ಯವಿಲ್ಲ. ನಮ್ಮ ಶರೀರಕ್ಕೆ ಬೇಕಾಗುವದನ್ನೆಲ್ಲಾ ಮಾಡಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸಹಕಾರೀ ಜೀವನ ನಡೆಸಲೇಬೇಕಾಗುತ್ತದೆ. ಸ್ವಾತಂತ್ರ್ಯವೆಂದರೆ ಸಚ್ಚಿದಾನಂದ ಸ್ವರೂಪವು. ವಿಶ್ವವು ಸದ್ರೂಪದ ಮೇಲೆ ತೋರಿರುವದರಿಂದ ಅದು ಪರಾವಲಂಬಿಯು. ಇರುವು ಸ್ವತಃ ಸಿದ್ಧವಿದೆ. ಆದ್ದರಿಂದ ಸಚ್ಚಿದಾನಂದ ಸ್ವರೂಪವು ಸ್ವಾವಲಂಬಿಯು. ವಿಶ್ವವು ಪರಾವಲಂಬನವಿರುವದರಿಂದ ದುಃಖಮಯವು. ಸ್ವರೂಪವು ಸ್ವಾವಲಂಬಿ ಇರುವದರಿಂದ ಸುಖಮಯವು. ಈ ವಿಶ್ವದಲ್ಲಿ ಸ್ವಾತಂತ್ರ್ಯ ಪಡೆಯುವೆವು ಎಂದು ಜೀವಿಗಳು ಅನ್ನುವದನ್ನು ಕೇಳಿ ಮಹಾತ್ಮರು ನಗುವರು.

ಜಗತ್ತು ಹುಚ್ಚರ ಆಸ್ಪತ್ರೆಯು. ಹುಚ್ಚರ ಹತ್ತರ ನಿಂತರೆ ಅವರು ತಮಗೇನಾದರೂ ಮಾಡುವರೆಂದು ಕಲ್ಲು ಒಗೆಯುವರು. ಆದ್ದರಿಂದ ಜಗತ್ತಿನಿಂದ ಹೋಳಾಗಿ ಹೋಗಬೇಕು. ಆದರೆ ಎಲ್ಲರೂ ದುಃಖರೂಪಿ ವಿಶ್ವವಿಷಯಗಳಿಗಾಗಿಯೇ ಬಡಿದಾಡುವರು.

ಮದುವೆಯು ಅಮಂಗಲ ಕಾರ್ಯವು. ಅಧ್ಯಾಸವನ್ನು ಕಳೆದುಕೊಳ್ಳುವದೇ ಮಂಗಲಕಾರ್ಯವು.

* * * *



## 18-4-1978 ರ ಮುಂಜಾನೆ

ಪುಣ್ಯದ ಜೋರು ಇದ್ದರೆ ಬ್ರಹ್ಮರಾಕ್ಷಸಾದಿಗಳು ನಾವು ಸತ್‌ಶಾಸ್ತ್ರ, ಸತ್‌ಶ್ರವಣದಲ್ಲಿ ತೊಡಗುವಂತೆ ಮಾಡುವವು.

ತಾನು ಸಚೇತನನಿದ್ದು ಜಡವಾದ ಕಲ್ಲಿನ ಮೂರ್ತಿಗೆ ಬೇಡಿಕೊಳ್ಳುವದು ವಿಚಿತ್ರ. ಆ ಜಡಮೂರ್ತಿಯನ್ನು ತಾನೇ ತಂದು ಇಟ್ಟಿರುವನು. ನಂತರ ಅದನ್ನು ತಾನೇ ಪೂಜಿಸುವನು. "ಧರಣಿಯ ಕಲ್ಲಿಗೆ ಶರಣೆಂದು ಪೂಜೆಯ ಮಾಡಬಾರದು" ಎಂದು ಮಹಾತ್ಮರು ಹೇಳಿದ್ದಾರೆ. ಮೂರ್ತಿಪೂಜೆಯಿಂದ ಕೆಡಕೇ ಆಗುವದು. ಮೂರ್ತಿಯ ಮುಂದೆ ದೀಪ ಹಚ್ಚುವದು ಪಾಪವಲ್ಲವೇ? ತಿನ್ನಲಿಕ್ಕೆ ಉಪಯೋಗುವಾಗುವಂಥ ಎಣ್ಣೆಯನ್ನು ಮೂರ್ತಿಯ ಮುಂದೆ ಸುಡುವದು ನಿರರ್ಥಕ. ಆ ಎಣ್ಣೆಯನ್ನು ಗುಣವಂತರಾದ ಬಡವರಿಗೆ ಕೊಟ್ಟಿದ್ದರೆ ಆ ಬಡ ಜೀವಿಗಳು ಸಂತೋಷಪಡುತ್ತಿದ್ದವು. ಮೂರ್ತಿಗಳಿಗೆ ಎಷ್ಟು ಬೇಡಿಕೊಂಡರೂ ಅವು ಏನನ್ನೂ ಕೊಡಲಾರವು.

ಅಧ್ಯಾತ್ಮವನ್ನು ಓದಿದರೆ ಕಲಿತಂತೆ ಅಲ್ಲ. ಅಧ್ಯಾತ್ಮದಂತೆ ನಮ್ಮ ನಡೆಯು ಇರಬೇಕು ಮತ್ತು ಅದರಂತೆ ನಡೆಯಲು ಇನ್ನುಳಿದವರಿಗೆ ಕಲಿಸಬೇಕು. ಅಂದರೆ ಮಾತ್ರ ಅಧ್ಯಾತ್ಮವನ್ನು ಕಲಿತಂತೆ. ಸತ್ಸಂಗವನ್ನು ವಿಷಯಗಳ ಸಲುವಾಗಿ ಉಪಯೋಗಿಸದೆ ಜ್ಞಾನವನ್ನು ಹೊಂದುವದರ ಸಲುವಾಗಿ ಉಪಯೋಗಿಸಬೇಕು.

ವಿಷಯಗಳ ವಿಚಾರ ನಡೆದರೆ ಜಗತ್ತೇ ಕೂಡುವದು. ಬ್ರಹ್ಮಜ್ಞಾನದ ವಿಚಾರ ನಡೆದರೆ ಜಗತ್ತೇ ಓಡಿ ಹೋಗುವದು.

ಮಹಾತ್ಮರು ಜೀವಿಗಳ ಕಲ್ಯಾಣಕ್ಕೋಸ್ಕರ ಅವರಿಗೆ ಬುದ್ಧಿ ಹೇಳುವರು. ಆಗ ಆ ಜೀವಿಗಳು ಮಹಾತ್ಮರಿಗೆ ಸಿಟ್ಟಿಗೆದ್ದರೆ ಮತ್ತಿಷ್ಟು ಪಾಪಕ್ಕೆ ಗುರಿಯಾಗುವರು.

ಧ್ಯಾನಕ್ಕೆ ಕೂತಾಗ (ವಾಸನೆಗಳನ್ನು ನಾಶಪಡಿಸಲು ಪ್ರಯತ್ನಿಸಿದಾಗ) ನಿದ್ರೆಯು ಬಂದು ನಾಶಪಡಿಸಬೇಕಾದ ವಾಸನೆಗಳು ನಿದ್ರೆಯಲ್ಲಿ ಅಡಗುವವು. ಆದ್ದರಿಂದ ನಿದ್ರೆಯನ್ನು ಮೀರಿ (ಕಾರಣ ಶರೀರವನ್ನು ನಾಶಮಾಡಿ) ತುರ್ಯವನ್ನು ಹೊಂದಬೇಕಾಗುತ್ತದೆ. ಮನಸ್ಸಿನ ಮೋಹವನ್ನು ಮನಸ್ಸಿನಿಂದಲೇ ಕತ್ತರಿಸಬೇಕಾಗುತ್ತದೆ. ವಿವೇಕವು ಉದಯವಾಗಿ ಅಭ್ಯಾಸವು ಅತಿ ತೀವ್ರವಾಗಿ ಮತ್ತು ತೀಕ್ಷ್ಣವಾಗಿ ಮುಂದುವರಿಯಬೇಕು. ಅಂದರೆ ಮಾತ್ರ ಸ್ವರೂಪವು ಸಾಧಿಸುವದು.

* * * *

## 18-4-1978 ರ ಸಂಜೆ

ಬಾಲ್ಯಾವಸ್ಥೆಯಲ್ಲಿ ಮಕ್ಕಳಿಗೆ ಧೈರ್ಯವನ್ನು ಕಲಿಸಬೇಕು. ಮಕ್ಕಳು ಯಾವಾಗಲೂ ವೀರರ ಮಾತುಗಳನ್ನು ಓದುವಂತೆ ಪ್ರಚೋದಿಸಬೇಕು. ಇದರ ಬದಲಾಗಿ ನಾವು ಮಕ್ಕಳಿಗೆ ಅಧೈರ್ಯವನ್ನೇ ಕಲಿಸುವದರಿಂದ ಅವರು ಮುಂದೆ ಅಂಜುಬುರಕರಾಗಿ ಅತಿ ಹೆಚ್ಚಿನ ದುಃಖವನ್ನು ಹೊಂದುವರು.

ನಿಜವಾಗಿ ವಿಚಾರ ಮಾಡಿ ನೋಡಿದರೆ ದೇಹವೇ ಇಲ್ಲವು. ಅಂದಮೇಲೆ ಇಲ್ಲದ ದೇಹದ ಬಗ್ಗೆ ಚಿಂತೆಯಾತಕೆ.

ನಾವು ಯಾವದನ್ನು ಕಲ್ಪಿಸಿರುವೆವೋ ಅದನ್ನು ಉಪಾಸನೆ ಮಾಡಲಿಕ್ಕೆ ಬರುತ್ತದೆ. ಆದರೆ ಉಪಾಸನೆ ಮಾಡಿದ್ದೆಲ್ಲ ನಮ್ಮ ಸ್ವರೂಪವಲ್ಲ. (ನ ಯದಿದಂ ಉಪಾಸತೆ) ನಿದ್ರೆಯಲ್ಲಿ ತ್ರಿಪುಟಿಯಿಲ್ಲ. ಭಾವಾತೀತನು ಪರಮಾತ್ಮನು. ಭಾವ ಅಡಗಿದಾಗ ಉಪಾಸಕ, ಉಪಾಸ್ಯ, ಉಪಾಸನೆ ಎಂಬುದು ಉಳಿಯುವದಿಲ್ಲ.

"ಏಕ ಸುಖಿ ದೋ ದುಃಖಿ" ಎಂಬುದು ಗೊತ್ತಿದ್ದರೂ ಮದುವೆಯಾಗುವದು, ಮಕ್ಕಳನ್ನು ಹೆರುವದು ಮತ್ತು ಅವರಿಗಾಗಿ ಸಂಕಟ ಪಡುವದು ನಡದೇ ಇದೆ.

ಪ್ರಾಚೀನತೆಯು ಸರಿ ಎಂಬುದಕ್ಕೆ ಪ್ರಮಾಣವಲ್ಲ. ಇತಿಹಾಸವೆಲ್ಲ ಮತ-ಮತಾಂತರ ಯುದ್ಧವೇ ಸರಿ. ಸಾಮಾನ್ಯವಾಗಿ ಎಲ್ಲರೂ ಅಂಧಾನುಕರಣೆಯನ್ನು ಮಾಡುವವರೇ. ಆದ್ದರಿಂದ ಸ್ವತಃ ವಿಚಾರ (ವಿವೇಕ) ಮತ್ತು ಅನುಭವಕ್ಕೆ ಒಪ್ಪಿಗೆಯಾದದ್ದನ್ನು ಮಾತ್ರ ನಂಬಬೇಕು. ಉಳಿದದ್ದನ್ನು ಯಾವ ಕಾರಣಕ್ಕಾಗಿಯೂ ನಂಬಬಾರದು.

ಏನೂ ನಿನ್ನನ್ನು (ಸ್ವರೂಪವನ್ನು) ಮುಟ್ಟಲಾರದು. ಆದ್ದರಿಂದ ಯಾರಾದರೂ "ಶಿರಚ್ಛೇದನ ಮಾಡುತ್ತೇವೆ." ಎಂದರೆ ಮಾಡಿರಿ ಎನ್ನಬೇಕು. ಏಕೆಂದರೆ ಅವರು ದೇಹವನ್ನು ಕೊಲ್ಲಬಹುದು, ಆದರೆ ನಿನ್ನ ಸಚ್ಚಿದಾನಂದ ಸ್ವರೂಪವನ್ನು ಯಾರೂ ಮುಟ್ಟಲಾರರು. ಅದರಂತೆ ಯಾರಾದರೂ ನಿಂದೆ ಮಾಡಿದರೆ ಆ ನಿಂದೆಯು ದೇಹವನ್ನು ತಲುಪಬಲ್ಲದು, ಆದರೆ ನಮ್ಮ ಸಚ್ಚಿದಾನಂದ ಸ್ವರೂಪವನ್ನು ತಲುಪಲಾರದು. ಆದ್ದರಿಂದ ಇವಾವನ್ನು ಲಕ್ಷಿಸದೆ ಸಚ್ಚಿದಾನಂದ ಸ್ವರೂಪದಲ್ಲಿರು, ಸಚ್ಚಿದಾನಂದವನ್ನು ಯಾವ ಖಡ್ಗವೂ ಕತ್ತರಿಸಲಾರದು.

ಜೀವಭಾವ ನಾಶವಾಗಬೇಕು. ಸ್ವರೂಪ ಭಾವ ದೃಢವಾಗಬೇಕು. ಸ್ವರೂಪದ



ಕಡೆಗೆ ಲಕ್ಷವಿರುವವನಿಗೆ ಆನಂದಭಾವವೇ ಇರುತ್ತದೆ. ಆದ್ದರಿಂದ ಆನಂದ ಭಾವವನ್ನುಂಟು ಮಾಡುವ ಗ್ರಂಥಗಳನ್ನು ಓದಬೇಕು. ಆನಂದಭಾವವನ್ನುಂಟು ಮಾಡುವ ಜನರ ಸಹವಾಸದಲ್ಲಿರಬೇಕು. ಏಕಾಂತದಲ್ಲಿದ್ದುಕೊಂಡು ಈ ಆನಂದಭಾವವನ್ನು ರೂಢಿಮಾಡಿಕೊಳ್ಳಬೇಕು. ವಿಶ್ವಭಾವವು ಅಡಗಿದಾಗ ಚಿತ್ತವೃತ್ತಿಯು ನಿಶ್ಚಲವಾದಾಗ ಸುಖವು ಅನುಭವಕ್ಕೆ ಬರುವದು.

* * * *

The Publications of

# Shree Atmananda Adhyatma Prakashan Hangaraki

Po : Garag Tq. & Dist. Dharwad

| | | |
|---|---|---|
| 1. | Self Realisation | 3-00 |
| 2. | First Intuition | 3-00 |
| 3. | Eternal Peace | 6-00 |
| 4. | The Goal is one & the Path is one | 6-00 |
| 5. | Who am I Really ? | 15-00 |
| 6. | The Life & Teachings of Shri Swami Shivananda of Naganur-Gadag | 6-00 |
| 7. | The Science of Happiness | 3-00 |
| 8. | Deep Sleep & Samadhi | 3-00 |
| 9. | ಅಧ್ಯಾತ್ಮಪ್ರವಚನ ಸಂಗ್ರಹ | 15-00 |
| 10. | ಪೂಜ್ಯ ಶ್ರೀ ಶಿವಾನಂದ ಸ್ವಾಮಿಗಳ ಜೀವನ ಬೋಧಾಮೃತ | 6-00 |
| 11. | ಕಾಮದಹನ | 6-00 |
| 12. | ನಿಜಸುಖ ಮಾರ್ಗ ಪ್ರದೀಪ | 3-00 |
| 13. | ಸ್ವರೂಪ ಮಾರ್ಗದರ್ಶಕ | 6-00 |
| 14. | ನಿಜವಾದ ನಾನು ಯಾರು ? | 6-00 |
| 15. | ಅಧ್ಯಾತ್ಮವಚನಾಮೃತ | 12-00 |
| 16. | ಆತ್ಮಸಂಶೋಧನೆ | 3-00 |
| 17. | ಆತ್ಮಸಾಕ್ಷಾತ್ಕಾರ | 3-00 |
| 18. | ಪ್ರಥಮಾನುಭೂತಿ | 3-00 |
| 19. | ಶಾಶ್ವತ ಶಾಂತಿ | 5-00 |
| 20. | ಗುರಿ ಒಂದೇ, ಸಾಧನೆ ಒಂದೇ | 6-00 |
| 21. | ಗಾಢ ನಿದ್ರೆ ಮತ್ತು ಸಮಾಧಿ | 5-00 |
| 22. | ಶ್ರೀ ಸದ್ಗುರು ಶಿವಾನಂದರ ಪ್ರವಚನ ಸಾರ | 15-00 |
| 23. | ಶ್ರೀ ಸದ್ಗುರು ಆತ್ಮಾನಂದರ ಪ್ರವಚನ ಸಾರ | 15-00 |
| 24. | ಪುನರ್ಜನ್ಮ | 25-00 |